ಜಾಜ್ವಲ್ಯೇತೇ ವಿಷ್ಣುರ್ವಾಯೂ ಸ್ಮ ದೇವೌ ವೇದವ್ಯಾಸಾನಂದತೀರ್ಥಾಭಿಧಾನೌ

# ಶ್ರೀವ್ಯಾಸ ಮಧ್ವ

(ಶ್ರೀವ್ಯಾಸಮಧ್ವಸಂಶೋಧನಪ್ರತಿಷ್ಠಾನದ ಮಾಸಪತ್ರಿಕೆ)

ಪಾಜಕ, ೮೯/೨೪, ೩ನೇ ಅಡ್ಡರಸ್ತೆ, ಮೌಂಟ್‌ಜಾಯ್ ಎಕ್ಸ್‌ಟೆನ್ಷನ್, ಹನುಮಂತನಗರ,
ಬೆಂಗಳೂರು-೧೯

ದೂರವಾಣಿ : (080) 26602802; 26611011

**ಸಂಪಾದಕರು : ಡಾ || ವ್ಯಾಸನಕೆರೆ ಪ್ರಭಂಜನಾಚಾರ್ಯ**

ಸಂಪುಟ -೨ ಸಂಚಿಕೆ –೧ (ಸರ್ವಧಾರಿ ಫಾಲ್ಗುಣ - ವಿರೋಧಿ ಚೈತ್ರ) ಮಾರ್ಚ್ ೨೦೦೯

## ಶ್ರೀವ್ಯಾಸಸೂಕ್ತಿ

**ತೋಕಾನಾಂ ಪಿತರೋ ಬಂಧೂ ದೃಶಃ ಪಕ್ಷ್ಮ ಸ್ತ್ರಿಯಃ ಪತಿಃ ।**
**ಪತಿಃ ಪ್ರಜಾನಾಂ ಭಿಕ್ಷೂಣಾಂ ಗೃಹ್ಯಜ್ಞಾನಾಂ ಬುಧಃ ಸುಹೃತ್ ॥**

– ಶ್ರೀಮದ್ಭಾಗವತ ೬/೪/೧೨

ಶಿಶುಗಳಿಗೆ ತಂದೆತಾಯಿಗಳು ಬಂಧುಗಳು, ಕಣ್ಣಿಗೆ ರೆಪ್ಪೆ, ಸ್ತ್ರೀಯರಿಗೆ ಪತಿ, ಪ್ರಜೆಗಳಿಗೆ ರಾಜ, ಭಿಕ್ಷುಗಳಿಗೆ ಗೃಹಸ್ಥ, ಅಜ್ಞರಿಗೆ ಜ್ಞಾನಿ ಹಿತೈಷಿಗಳು.

## ಶ್ರೀಮಧ್ವಸೂಕ್ತಿ

**ಗುಣಾಶ್ಚ ಕಾಲಾತ್ ಪಿತೃಮಾತೃದೋಷಾತ್**
**ಸ್ವಕರ್ಮತೋ ವಾऽಭಿಭವಂ ಪ್ರಯಾಂತಿ ॥**

–ಮಹಾಭಾರತತಾತ್ಪರ್ಯನಿರ್ಣಯ (೩/೩೦)

ವ್ಯಕ್ತಿಯ ಗುಣಗಳು ಕಾಲಬಲದಿಂದಾಗಿ, ತಂದೆತಾಯಿಗಳ ದೋಷದಿಂದಾಗಿ ಅಥವಾ ತನ್ನ ದುಷ್ಕರ್ಮದ ಫಲವಾಗಿ ಕುಂದುವವು.



# ವಿಷಯಾನುಕ್ರಮಣಿಕೆ

೧. ಶ್ರೀವ್ಯಾಸಸೂಕ್ತಿ - ಶ್ರೀಮಧ್ವಸೂಕ್ತಿ ೧
೨. ಹರಿದಾಸರ ಸೂಕ್ತಿರತ್ನಗಳು ೩
೩. ಗಾಯತ್ರೀಭಾಷ್ಯರೂಪಃ ಅಸೌ: ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು ೪
೪. ಮಧ್ವ-ನರಸಿಂಹ: ಶ್ರೀಶ್ರೀವಿದ್ಯೇಶತೀರ್ಥ ಶ್ರೀಪಾದರು ೭
೫. ನಂದಗೋಕುಲ: ಶ್ರೀಶ್ರೀವಿಶ್ವಪ್ರಸನ್ನತೀರ್ಥ ಶ್ರೀಪಾದರು ೧೦
೬. ಸಂಪಾದಕೀಯ: ಶ್ರೀವ್ಯಾಸಮಧ್ವ- ದ್ವಿತೀಯ ವಾರ್ಷಿಕ ೧೧
೭. ಆತ್ಮಾಹುತಿಯ ಅನುಸಂಧಾನ: ವಿದ್ವಾನ್ ಸಗ್ರಿ ರಾಘವೇಂದ್ರ ಉಪಾಧ್ಯಾಯ ೧೪
೮. ಪ್ರಥಮ ಸಂಪುಟದ ಸಂಚಿಕೆಗಳ ವಿಷಯಾನುಕ್ರಮಣಿಕೆ ೧೮
೯. ಸಂತೇಬೆನ್ನೂರಿನ ಸ್ವಯಂವ್ಯಕ್ತ ಶ್ರೀರಾಮದೇವರು
– ಡಾ|| ಎಸ್. ಹನುಮಂತ ಜೋಯಿಸ್ ೨೫
೧೦. ಶ್ರೀವ್ಯಾಸರಾಜರು ಮತ್ತು ಅವರ ಕೃತಿಗಳು
– ಡಾ|| ವ್ಯಾಸನಕೆರೆ ಪ್ರಭಂಜನಾಚಾರ್ಯ ೨೬
೧೧. ಶ್ರೀವಾದಿರಾಜರು ಮತ್ತು ಅವರ ಕೃತಿಗಳು
– ಡಾ|| ವ್ಯಾಸನಕೆರೆ ಪ್ರಭಂಜನಾಚಾರ್ಯ ೨೯
೧೨. ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನದ ನಿರ್ದೇಶಕರ ಕಾರ್ಯಕ್ರಮಗಳು ೩೭
೧೩. ಮಾಸದ ವಿಶೇಷಗಳು ೩೮
೧೪. ವಿರೋಧಿ ಸಂವತ್ಸರದ ಸ್ಥೂಲಮಾಹಿತಿ
– ಡಾ|| ವ್ಯಾಸನಕೆರೆ ಪ್ರಭಂಜನಾಚಾರ್ಯ ೪೦

* * * * *

## ಚಂದಾ ವಿವರ

ಆಜೀವಚಂದಾ : ರೂ ೫೦೦೦

ಪಂಚವಾರ್ಷಿಕ ಚಂದಾ : ರೂ ೫೦೦; ಬಿಡಿ ಪ್ರತಿ : ರೂ ೧೦

ವಿ.ಸೂ.:– ೧. ರೂ.೧೫,೦೦೦ಗಳನ್ನು ನೀಡಿ ಶ್ರೀವ್ಯಾಸಮಧ್ವಸಂಶೋಧನಪ್ರತಿಷ್ಠಾನದ ಸದಸ್ಯರಾಗುವವರಿಗೆ ಸರ್ವಮೂಲಗ್ರಂಥಗಳು, ಮಹಾಭಾರತತಾತ್ಪರ್ಯನಿರ್ಣಯ, ಹರಿಕಥಾಮೃತಸಾರ, ಸುಮಧ್ವವಿಜಯ ಮೊದಲಾದ ಪ್ರಕಾಶನದ ಎಲ್ಲಾ ಉಪಲಬ್ಧಗ್ರಂಥಗಳೂ ಉಚಿತ.

೨. ಅದರೊಂದಿಗೆ ೫ ವರ್ಷಗಳ ಕಾಲ ಶ್ರೀವ್ಯಾಸಮಧ್ವಮಾಸಪತ್ರಿಕೆಯನ್ನೂ ಸಹ ಉಚಿತವಾಗಿ ನೀಡಲಾಗುವುದು.

೩.ಇದಕ್ಕೆ ಆದಾಯತೆರಿಗೆ ನಿಯಮ ೮೦ಜಿ ಅನ್ವಯ ತೆರಿಗೆ ರಿಯಾಯಿತಿ ಸೌಲಭ್ಯವೂ ಸಹ ಉಂಟು.

# ಹರಿದಾಸರ ಸೂಕ್ತಿರತ್ನಗಳು

(ದಾಸಸಾಹಿತ್ಯ - ವ್ಯಾಸಸಾಹಿತ್ಯದ ಕನ್ನಡ ಆವಿಷ್ಕರಣ. ಕನ್ನಡಕ್ಕೆ ವ್ಯಾಸ-ಪೀಠದ ಭಾಗ್ಯವನ್ನು ನೀಡಿದ ಹಿರಿಮೆ ಹರಿದಾಸಸಾಹಿತ್ಯದ್ದು. ಅದರಿಂದ ಆಯ್ದ ಸೂಕ್ತಿರತ್ನಗಳನ್ನು ಪ್ರತಿತಿಂಗಳೂ ಕ್ರಮವಾಗಿ ನೀಡಲಾಗುವುದು.)

## ಶ್ರೀವ್ಯಾಸರಾಜರ ಸೂಕ್ತಿರತ್ನಗಳು

ರಾಗ : ಶ್ರೀರಂಜಿನಿ ತಾಳ :ಝಂಪೆ

ಜನುಮಜನುಮದಲ್ಲಿ ಕೊಡು ಕಂಡ್ಯ ಹರಿಯೆ
ಅನಿಮಿತ್ತಬಂಧು ಕೃಷ್ಣ ದಯದಿಂದಲೆನಗೆ ॥ ಪ ॥

ಮೆರೆವ ಊರ್ಧ್ವಪುಂಡ್ರ ಎರಡಾರು ನಾಮವು
ಕೊರಳೊಳು ತುಲಸಿಯ ವನಮಾಲೆಯು
ಮೆರೆವ ಶಂಖಚಕ್ರ ಭುಜದೊಳೊಪ್ಪುತ ನಿಮ್ಮ
ಸ್ಮರಿಸುತ್ತ ಹಿಗ್ಗುವ ವೈಷ್ಣವಜನುಮವ ॥ ೧ ॥

ಹರಿಯೆ ಸರ್ವೋತ್ತಮ ರಾಣಿ ಲಕುಮಿ ಬೊಮ್ಮ
ಹರ ಇಂದ್ರಾದ್ಯಖಿಳರು ತವ ಸೇವಕರು
ವರತಾರತಮ್ಯ ಪಂಚಭೇದ ಸತ್ಯವೆಂದು
ನೆರೆ ಪೇಳುವ ವಾಯುಮತದ ಸುಜ್ಞಾನವ ॥ ೨ ॥

ಸಕಲವಿಬುಧೋತ್ತಮರಲ್ಲಿ ನಮ್ರತೆಯ
ಸುಖತೀರ್ಥರಲಿ ಮುಖ್ಯಗುರುಭಾವನೆಯ
ಮುಕುತಿಪ್ರದಾಯಕ ಸಿರಿಕೃಷ್ಣ ನಿನ್ನಲ್ಲಿ
ಅಕಳಂಕವಾದ ನವವಿಧ ಭಕುತಿಯನು ॥ ೩ ॥

* * * *



# ಗಾಯತ್ರೀಭಾಷ್ಯರೂಪಃ ಅಸೌ

## (ಅನುಗ್ರಹಲೇಖನ)

ಪರಮಪೂಜ್ಯ ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು
ಪಲಿಮಾರು ಮಠ, ಉಡುಪಿ.

ಸನಾತನಮತಗಳಲ್ಲಿ ವೇದಗಳಿಗೆ ಸರ್ವೋತ್ತಮವಾದ ಸ್ಥಾನಗಳಿದೆ. ಅದಕ್ಕೆ ಕಾರಣ ವೇದಗಳ ಅಪೌರುಷೇಯತೆ. ಅದಕ್ಕೆಂದೇ ವೇದಗಳ ಪ್ರಾಮಾಣ್ಯ ಪ್ರಶ್ನಾತೀತ. ಕರ್ತೃವಿನ ಭ್ರಮೆ-ವಿಪ್ರಲಂಭಗಳಿಂದ ಅವನ ವಾಕ್ಯಗಳಿಗೆ ಅಪ್ರಮಾಣ್ಯ ಬರುವುದು. ವಾಕ್ಯದ ಕರ್ತೃ ಇಲ್ಲದೆ ಇದ್ದರೆ ಕರ್ತೃವಿನ ದೋಷದಿಂದ ವಾಕ್ಯದಲ್ಲಿಯೂ ದೋಷ ಬರುವುದು ಅತ್ಯಸಾಧ್ಯ. ಅದಕ್ಕೆಂದೆ ವೇದಗಳಿಗೆ ಸ್ವತಃ ಪ್ರಾಮಾಣ್ಯವನ್ನು ಅಂಗೀಕರಿಸಿದ್ದಾರೆ. ವೇದಗಳ ಮೂಲ ಗಾಯತ್ರೀ. 'ವೇದಮಾತಾ ತು ಗಾಯತ್ರೀ' - ವೇದಗಳ ಸಾರಸರ್ವಸ್ವ ಗಾಯತ್ರೀ. ಗಾಯತ್ರೀಯ ವ್ಯಾಖ್ಯಾನವೇ ಸಕಲವೇದಗಳು. ಗಾಯತ್ರಿಯ ಅರ್ಥಚಿಂತನೆ ಮಾಡಿದರೆ ಸಕಲವೇದಗಳ ಹೃದಯವನ್ನು ಅರಿಯುವುದು ಅತಿಸುಲಭ.

ಪುರಾಣಗಳು ವೇದವ್ಯಾಸರಿಂದ ರಚಿತವಾದುವು. ಹದಿನೆಂಟು ಪುರಾಣಗಳಲ್ಲೇ ಪುರಾಣರಾಜನೆನಿಸಿಕೊಂಡದ್ದು ಶ್ರೀಮದ್ ಭಾಗವತ. ಸಾಕ್ಷಾತ್ ನಾರಾಯಣನ ಅವತಾರರಾದ ಶ್ರೀವೇದವ್ಯಾಸದೇವರಿಂದ ರಚಿತವಾದದ್ದು ಶ್ರೀಮದ್ಭಾಗವತ. ಯೋಗ್ಯ ಜೀವರಾಶಿಗಳ ಜ್ಞಾನಕೋಸ್ಕರವೇ ಸರ್ವಜ್ಞನಾದ ಭಗವಂತ ರಚಿಸಿದ್ದರಿಂದಲೇ ಭಾಗವತದ ಪ್ರಾಮಾಣ್ಯ ಪ್ರಶ್ನಾತೀತ. ಅದಕ್ಕೆಂದೇ ಈ ಭಾಗವತಕ್ಕೆ ಐದು ರೀತಿಯ ಮಹತ್ವವನ್ನು ಪುರಾಣಗಳು ಸಾರಿವೆ.

೧. ಶ್ರೀಮದ್ಭಾಗವತ ಪರವಿದ್ಯೆ ಎನಿಸಿದ ಬ್ರಹ್ಮಸೂತ್ರಗಳ ಅರ್ಥವನ್ನೇ ವಿವರಿಸಲು ನಿರ್ಮಿತವಾದ ಗ್ರಂಥ.

೨. ಸಕಲ ಭಾರತಗಳ ಅರ್ಥನಿರ್ಣಯಕೋಸ್ಕರ ಹೊರಟ ಕೃತಿ - ಶ್ರೀಮದ್ಭಾಗವತ.

೩. ವೇದಾರ್ಥಗಳಿಂದ ತುಂಬಿ ತುಳುಕಿದ ಅಪೂರ್ವ ಪುರಾಣ - ಶ್ರೀಮದ್ಭಾಗವತ.

೪. ಸಕಲಪುರಾಣಗಳ ಸಾರ ಇದೇ ಭಾಗವತ.

೫. ಗಾಯತ್ರಿಯ ಭಾಷ್ಯ ಶ್ರೀಮದ್‌ಭಾಗವತ.

ಹೀಗೆ ಭಾಗವತ ಸರ್ವೋತ್ತಮವಾದ ಕೃತಿ ಎಂದು ಹೇಳುತ್ತಾ ಅದರ ಸಮರ್ಥನೆಗಾಗಿ ಗಾಯತ್ರೀಭಾಷ್ಯರೂಪ ಎಂದು ಹೇಳಿದ್ದಾರೆ. ಭಾಗವತವು ಗಾಯತ್ರಿಯ ಭಾಷ್ಯರೂಪ ಹೇಗೆ ಆಗುತ್ತೇ? ಎನ್ನುವ ಪ್ರಶ್ನೆ ನಮ್ಮ ಮುಂದೆ ಇದೆ. ಇದನ್ನು ಬೇರೆ ಬೇರೆ ರೀತಿಯಾಗಿ ನಾವು ಸಮರ್ಥಿಸಬಹುದು. ಅದರ ಒಂದು ರೂಪ ಹೀಗಿದೆ.

ಭಾಗವತದಲ್ಲಿ ಹನ್ನೆರಡು ಸ್ಕಂಧಗಳಿವೆ. ಭಾಗವತದ ಭಾಷ್ಯರೂಪವಾದ ಗಾಯತ್ರಿಯಲ್ಲಿಯೂ ಹನ್ನೆರಡು ವಿಭಾಗಗಳು ಇರಲೇಬೇಕು. ಸಾಮಾನ್ಯವಾಗಿ ಮೂರು ಪಾದಗಳ ಗಾಯತ್ರಿಯನ್ನು ತ್ರಿಪದಾ ಗಾಯತ್ರಿ ಎನ್ನುವುದುಂಟು. ಆದರಿಂದ ಮೂರೇ ವಿಭಾಗಗಳಾಯಿತು. ಹನ್ನೆರಡು ವಿಭಾಗಗಳು ಹೇಗೆ ಎನ್ನುವ ಪ್ರಶ್ನೆ ಹಾಗೆಯೇ ಉಳಿಯಿತು.

‘ತತ್’ ಶಬ್ದದಿಂದ ಪ್ರಾರಂಭ ಮಾಡಿ ‘ಪ್ರಚೋದಯಾತ್’ ತನಕ ಲೆಕ್ಕ ಮಾಡಿದರೆ ಹತ್ತೇ ಶಬ್ದಗಳು ಇರುವುದು. ಹನ್ನೆರಡು ಶಬ್ದಗಳು ಸಿಗುವುದೇ ಇಲ್ಲ. ಹನ್ನೆರಡು ಸ್ಕಂಧಗಳ ಭಾಗವತ ವ್ಯಾಖ್ಯಾನ ಈ ಗಾಯತ್ರೀ ಹೇಗೆ ಅನ್ನುವ ಪ್ರಶ್ನೆಗೆ ಉತ್ತರ ಸಿಗಲೇ ಇಲ್ಲ.

ನಿತ್ಯಸಂಧ್ಯಾವಂದನೆಯ ಪ್ರಧಾನಾಂಗವೆನಿಸಿದ ಗಾಯತ್ರೀ ಜಪದ ವಿಶ್ವಾಮಿತ್ರ ಗಾಯತ್ರಿಯನ್ನು ಇಟ್ಟುಕೊಂಡರೆ ಹನ್ನೆರಡು ಶಬ್ದಗಳನ್ನು ಅನಾಯಾಸವಾಗಿ ಸಂಗ್ರಹಿಸಬಹುದು. ಆ ಹನ್ನೆರಡು ಶಬ್ದಗಳು ಹೀಗಿವೆ.

೧) ಓಂ ೨) ಭೂರ್ಭುವಃಸ್ವಃ ೩) ತತ್ ೪) ಸವಿತುಃ ೫) ವರೇಣ್ಯಂ ೬) ಭರ್ಗಃ ೭) ದೇವಸ್ಯ ೮) ಧೀಮಹಿ ೯) ಧಿಯಃ ೧೦) ಯಃ ೧೧) ನಃ(ಅನಃ) ೧೨) ಪ್ರಚೋದಯಾತ್.

ಅನುಕ್ರಮವಾಗಿ ೧) ‘ಓಂ’ ಎನ್ನುವುದರ ವಿವರಣೆ ಮೊದಲನೇ ಸ್ಕಂಧ; ೨) ವ್ಯಾಹೃತಿ ಅನಿಸಿದ ‘ಭೂರ್ಭುವಃಸ್ವಃ’ ಎಂಬುದು ದ್ವಿತಿಯಸ್ಕಂಧದ ಸಂಗ್ರಹ; ೩) ‘ತತ್’ ಮೂರನೇ ಸ್ಕಂಧ; ೪) ‘ಸವಿತುಃ’ ಚತುರ್ಥಸ್ಕಂಧ; ೫) ‘ವರೇಣ್ಯಮ್’ ಪಂಚಮ ಸ್ಕಂಧ; ೬) ‘ಭರ್ಗಃ’ ಷಷ್ಠಸ್ಕಂಧ; ೭) ‘ದೇವಸ್ಯ’ ಸಪ್ತಮಸ್ಕಂಧ; ೮) ‘ಧೀಮಹಿ’ ಅಷ್ಟಮಸ್ಕಂಧ; ೯) ‘ಧಿಯಃ’ ಒಂಭತ್ತನೆಸ್ಕಂಧ; ೧೦) ‘ಯಃ’ ಪೂರ್ವಾರ್ಧ ಮತ್ತು ಉತ್ತರಾರ್ಧಗಳನ್ನೊಳಗೊಂಡ ಸಮಗ್ರ ದಶಮಸ್ಕಂಧ; ೧೧) ‘ಅನಃ’ ಅಥವಾ ‘ನಃ’ ಏಕಾದಶಸ್ಕಂಧ; ೧೨) ‘ಪ್ರಚೋದಯಾತ್’ ಹನ್ನೆರಡನೆಯ ಸ್ಕಂಧ.

ಮೊದಲನೆಯ ಸ್ಕಂಧದ ಸಾರ ಸರ್ವಸ್ವವನ್ನು ಪ್ರಣವವೆನಿಕೊಂಡ ಮಂತ್ರರಾಜನಾಗಿ ಮೆರೆದ ‘ಓಂ’ಕಾರ ಸೆರೆಹಿಡಿದಿದೆ. ‘ಓಂ’ ಶಬ್ದಕ್ಕೆ ಅರ್ಥ ಏನು? ಅದರ ಮೂಲ ಏನು? ಎನ್ನುವ ಪ್ರಶ್ನೆಗೆ ಶ್ರೀಮನ್ನ್ಯಾಯಸುಧಾಕಾರಾರು ‘ಗತ್ಯಾದ್ಯರ್ಥಸ್ಯ ಅವತೇಃ ಖಲು ರೂಪಮೇತತ್’ ಎಂಬುದಾಗಿ ‘ಅವ’ ಎಂಬ ಧಾತುವಿನಿಂದ ನಿಷ್ಪನ್ನವಾದ ಶಬ್ದ ಇದು. ಈ ಅವಧಾತುವಿಗೆ ಅನೇಕ ಅರ್ಥಗಳು ಇದೆ ಎಂದು ಹೇಳಿದ್ದಾರೆ. ಸುಮಾರು ಹತ್ತೊಂಭತ್ತು ಅರ್ಥಗಳಲ್ಲಿ ಈ ಧಾತುವನ್ನು ಈ ವೈಯ್ಯಾಕರಣರು ಪ್ರಯೋಗ



ಮಾಡಿದ್ದಾರೆ. ಶ್ರೀಮಂತ್ರಾಲಯ ಪ್ರಭುಗಳು ಪರಿಮಳದಲ್ಲಿ ಈ ಸುಧಾವಾಕ್ಯಕ್ಕೆ ವ್ಯಾಖ್ಯಾನ ಮಾಡುತ್ತಾ ಆ ಅರ್ಥಗಳನ್ನೆಲ್ಲಾ ನಮ್ಮ ಮುಂದೆ ತೆರೆದಿಟ್ಟಿದ್ದಾರೆ. ‘ಅವ-ರಕ್ಷಣ, ಗತಿ, ಕಾಂತಿ, ಪ್ರೀತಿ, ತೃಪ್ತಿ, ಅವಗಮ, ಪ್ರವೇಶ, ಶ್ರವಣ, ಸ್ವಾಮಿ, ಅರ್ಥಯಾಚನ, ಕ್ರಿಯಾ, ಇಚ್ಛಾ, ದೀಪ್ತಿ, ಅವಾಪ್ತಿ, ಆಲಿಂಗನ, ಹಿಂಸಾ, ಭಾಗ, ದಾನ, ವೃದ್ಧಿಷು’ ಎಂಬುದಾಗಿ ‘ಅವ’ ಕ್ರಿಯಾಪದದ ಅರ್ಥವನ್ನು ಬಹುಮುಖವಾಗಿ ನಮ್ಮ ಮುಂದೆ ಪ್ರಸ್ತುತಪಡಿಸಿದ್ದಾರೆ. ಇಷ್ಟು ಅರ್ಥಗಳಲ್ಲಿ ಬೇಕಾದಂತೆ ಜೋಡಿಸಿದರೆ ಪ್ರಥಮಸ್ಕಂಧದ ಸಂಪೂರ್ಣಪ್ರಮೇಯ ನಮ್ಮ ಹೃದಯದಲ್ಲಿ ಸ್ಥಿರವಾಗಿ ನಿಲ್ಲುವುದರಲ್ಲಿ ಸಂದೇಹವಿಲ್ಲ. ಅದು ಹೇಗೆ? ಅದರ ಬಗ್ಗೆ ಚಿಂತನೆ ಮಾಡೋಣ.

* * * * *

## ತಿಥ್ಯಭಿಮಾನಿ ದೇವತೆಗಳು

| | |
|---|---|
| ಪ್ರತಿಪತ್ - ಅಗ್ನಿ | ದಶಮೀ - ವಿಷ್ಣು |
| ದ್ವಿತೀಯಾ - ಬ್ರಹ್ಮಾ | ಏಕಾದಶೀ - ವಿಷ್ಣು |
| ತೃತೀಯಾ - ಗೌರೀ | ದ್ವಾದಶೀ - ವಿಷ್ಣು |
| ಚತುರ್ಥೀ - ಗಣೇಶ | ತ್ರಯೋದಶೀ - ಕಾಮ, ಕುಬೇರ, ಗರುಡ |
| ಪಂಚಮೀ - ನಾಗ | ಶುಕ್ಲಚತುರ್ದಶೀ - ಮರುದ್ಗಣ, ಯಮ |
| ಷಷ್ಠೀ - ಸ್ಕಂದ (ಇಂದ್ರ) | ಕೃಷ್ಣಚತುರ್ದಶೀ - ಶಿವ |
| ಸಪ್ತಮೀ - ಸೂರ್ಯ | ಪೂರ್ಣಿಮಾ - ಚಂದ್ರ |
| ಅಷ್ಟಮೀ - ದುರ್ಗಾ, ಹಾಗೂ (ಸೋಮ, ವಿಶ್ವೇ ದೇವತೆಗಳು) | ಅಮಾವಾಸ್ಯಾ - ಪಿತೃದೇವತೆಗಳು |
| ನವಮೀ - ಲಕ್ಷ್ಮೀ, ವಾಯು, ವಸುಗಳು | |

## ಮೇಷಾದಿ ರಾಶಿಗಳ ಅಭಿಮಾನಿ ದೇವತೆಗಳು

| | | |
|---|---|---|
| ೧. ಮೇಷ - ಮಂಗಳ | ೨. ವೃಷಭ - ಶುಕ್ರ | ೩. ಮಿಥುನ - ಬುಧ |
| ೪. ಕರ್ಕ - ಚಂದ್ರ | ೫. ಸಿಂಹ - ರವಿ | ೬. ಕನ್ಯಾ - ಬುಧ |
| ೭. ತುಲಾ - ಶುಕ್ರ | ೮. ವೃಶ್ಚಿಕ - ಮಂಗಳ | ೯. ಧನು - ಗುರು |
| ೧೦. ಮಕರ - ಶನಿ | ೧೧. ಕುಂಭ - ಶನಿ | ೧೨. ಮೀನ - ಗುರು |

# ಮಧ್ವ-ನರಸಿಂಹ

## (ಅನುಗ್ರಹ ಲೇಖನ)

**ಪರಮಪೂಜ್ಯ ಶ್ರೀಶ್ರೀವಿದ್ಯೇಶತೀರ್ಥ ಶ್ರೀಪಾದರು**
**ಭಂಡಾರಕೆರೆ ಮಠ.**

ಕಳೆದ ಸಂಚಿಕೆಯಲ್ಲಿ ''ಅಮಿತಸಜ್ಜ್ಞಾನಸುಖಶಕ್ತಿಪಯೋನಿಧಿಃ'' ಎಂಬ ವಿಶೇಷಣವನ್ನು ಆಚಾರ್ಯರ ಮಧ್ವರಿಗೆ ಹೇಗೆ ಅನ್ವಿತವಾಗುತ್ತದೆ ಎಂಬ ವಿಚಾರದ ಬಗೆಗೆ ಚಿಂತಿಸಲಾಯಿತು. ಜ್ಞಾನಸಂಪತ್ತನ್ನು ''ಅಮ್'' ಎಂಬ ಪದದಿಂದ ಕೀರ್ತಿತರಾದ ವ್ಯಾಸರಿಂದ ಮಧ್ವರು ಪಡೆದರೆಂಬ ವಿಷಯದ ಬಗೆಗೆ ಪ್ರಮಾಣದ ಉಲ್ಲೇಖದಿಂದ ಸಮರ್ಥಿಸಲಾಗಿದೆ.

ಈಗ ಅದೇ ಶಬ್ದದಿಂದ ಪ್ರತಿಪಾದ್ಯರಾದ ವ್ಯಾಸರಿಂದ ಸಮೀಚೀನ ಸುಖವನ್ನು ಹೇಗೆ ಪಡೆದರೆಂಬ ವಿಷಯದ ಬಗೆಗೆ ಚಿಂತಿಸೋಣ.

ವ್ಯಾಸರಿಂದ ಶ್ರೀ ಮಧ್ವರು ಅತಿಶಯಭರಿತವಾದ ಸಹಭೋಗ ಸುಖವನ್ನು ಪಡೆದರು.

ಅದು ಶ್ರೀ ಮಧ್ವರು ಮಾಡಿದ ವೇದಾಂತ ಭಾಷ್ಯಾದಿರಚನಾರೂಪಜ್ಞಾನಮಯ ಸೇವೆಗೆ ವ್ಯಾಸರೂಪೀ ಭಗವಂತನು ಅನುಗ್ರಹಪೂರ್ವಕ ನೀಡಿದ ಮಹಾವರ. ಶ್ರೀ ರಾಮಾವತಾರದಲ್ಲಿ ತಾನು ಹನುಮದ್ರೂಪಕ್ಕೆ ಸಹಭೋಗಕ್ಕೆ ಅವಕಾಶವಿರುವ ಬ್ರಹ್ಮನಿರುವ ಬ್ರಹ್ಮಪದವಿಯನ್ನು ಅನುಗ್ರಹಿಸಿದರೂ ಪುನಃ ಈ ಜ್ಞಾನಸೇವೆಗೆ ಬೇರೇ ಫಲವನ್ನು ಕಾಣದೆ ವ್ಯಾಸರು ತಾನು ರಾಮಾವಾತರದಲ್ಲಿ ನೀಡಿದ, ಬ್ರಹ್ಮಪದವಿಗೆ ಬರುವ ಅಧಿಕಾರಿಗಳಿಗೆ ಮಾತ್ರ ಯೋಗ್ಯವಾದ ಸಹಭೋಗಸುಖವನ್ನೇ ಅತಿಶಯಸಂಪನ್ನವಾಗಿ ನೀಡಿದರು. ಬ್ರಹ್ಮಪದವಿಗೆ ಬಂದ ಯೋಗ್ಯಾಧಿಕಾರಿಗಳಿಗೆ ಜೀವರಾಶಿಗಳು ಮಾಡಿದ ಅನಂತ ಪುಣ್ಯಕರ್ಮಗಳ ಫಲರೂಪವಾದ ಸುಖಭೋಗವು (ಸಹಭೋಗವು) ಪರಮಾತ್ಮನ ಆಜ್ಞೆಯಿಂದ ಪರಮಾತ್ಮನ ಜೊತೆಗೆ ಮುಕ್ತಿಯಲ್ಲಿ ಲಭ್ಯವಾಗುತ್ತದೆ.

ಈ ಎಲ್ಲ ವಿಷಯಗಳ ಬಗೆಗೆ ನಾರಾಯಣಪಂಡಿತಾಚಾರ್ಯರು ಹಾಗು ಮಧ್ವರು ಬೆಳಕನ್ನು ಚೆಲ್ಲಿದ್ದಾರೆ :-

**ಸಹಭೋಗಮನನ್ಯಲಭ್ಯಮಸ್ಮೈಹನುಮದ್ರೂಪವತೇ ದದೌ ಪುರಾ ಹಿ ।**
**ಅನವೇಕ್ಷ್ಯ ಪರಂ ಸ್ವಭೀಷ್ಟಕರ್ತ್ರೇಣ ಪ್ರತಿದಾತುಂ ಹರಿರೈಧಯತ್ತಮೇವ ॥**
(ಸುಮಧ್ವವಿಜಯ ೧೯-೫೪)



**ಭೋಗಾಶ್ಚ ಯೇ ಯಾನಿ ಚ ಕರ್ಮಜಾತಾನ್ಯನಾದ್ಯನಂತಾನಿ ಮಮೇಹ ಸಂತಿ ।**
**ಮದಾಜ್ಞಯಾ ತಾನ್ಯಖಿಲಾನಿ ಸಂತಿ ಧಾತುಃ ಪದೇ ತತ್ ಸಹಭೋಗನಾಮ ॥**
- (ಮಹಾಭಾರತ ತಾತ್ಪರ್ಯನಿರ್ಣಯ ೮-೨೪೧)

**ಏತಾದೃಶಂ ಮೇ ಸಹಭೋಜನಂ ತೇ ಮಯಾ ಪ್ರದತ್ತಂ ಹನುಮನ್ ಸದೈವ ।**
- (ಮಹಾಭಾರತ ತಾತ್ಪರ್ಯನಿರ್ಣಯ ೮-೨೪೨)

ಇನ್ನು -

''ಅಮ್'' ಎಂಬ ಶಬ್ದದಿಂದ ಪ್ರತಿಪಾದ್ಯರಾದ ವ್ಯಾಸರಿಂದ ಮಧ್ವರು ಪಡೆದ ''ಶಕ್ತಿ'' ಏನೆಂಬುದನ್ನು ವಿವೇಚಿಸೋಣ.

ಇಲ್ಲಿ ಮಧ್ವರು ವ್ಯಾಸರಿಂದ ಪಡೆದ ಶಕ್ತಿ ಎಂದರೆ ಆಜ್ಞಾಶಕ್ತಿ.

ಆಚಾರ್ಯ ಮಧ್ವರು ತಂತ್ರಸಾರದಲ್ಲಿ ಮುಖ್ಯಗುರುವಿನ ಲಕ್ಷಣಗಳನ್ನು ನಿರೂಪಿಸುತ್ತಾ ಹರಿ ಆಜ್ಞಾರೂಪಶಕ್ತಿಯಿಂದ ಸಂಪನ್ನನು ''ಮುಖ್ಯಗುರು'' ಎನಿಸಿಕೊಳ್ಳಲು ಅರ್ಹನಾಗಿದ್ದಾನೆಂದು ಸಾರಿದ್ದಾರೆ -

**ಪ್ರತಿಮಾಲಕ್ಷಣ್ಯೈರ್ಯಾವದ್ಯುಕ್ತ ಆಚಾರ್ಯ ಉತ್ತಮಃ ।**
**ಸರ್ವವಿತ್ತಪಸಾಯುಕ್ತಾ ಆಜ್ಞಾಶಕ್ತಿಯುತೋ ಹರೇಃ ॥**

ವೇದವ್ಯಾಸರಿಗೆ ಸಮ್ಮತವಾದ ಬ್ರಹ್ಮಸೂತ್ರಭಾಷ್ಯರಚನೆ ಹಾಗು ವೇದೋಪನಿಷತ್ತುಗಳ ಭಾಷ್ಯರಚನಾರೂಪ ಕಾರ್ಯವನ್ನು ಮಾಡಲು ಬದರೀನಾರಾಯಣನು ಆಚಾರ್ಯಮಧ್ವರಿಗೆ ಆದೇಶಿಸಿದನೆಂದು ಮಧ್ವವಿಜಯದಲ್ಲಿ ಉಲ್ಲೇಖವಿದೆ -

**ಶೃಣು ದೇವಕಾರ್ಯಮವಧಾರ್ಯ ಧೈರ್ಯವದ್**
**ಯದುದೀರ್ಯಮಾಣಮಿದಮಾರ್ಯಸಮ್ಮತಮ್** -(ಸುಮಧ್ವವಿಜಯ ೮-೪೪)

**ಕುರುಸೂತ್ರಭಾಷ್ಯಮವಿಲಂಬಿತಂ ವ್ರಜೇಃ**
**ಸುಮತೇನ ಯೋ ಜಯ ಕವೇ ಶ್ರುತಿಸ್ಮೃತೀಃ ।** -(ಸುಮಧ್ವವಿಜಯ ೮-೪೬)

ಇಲ್ಲಿ ವೇದವ್ಯಾಸರಿಗೆ ಸಮ್ಮತವಾದ ಕಾರ್ಯಗಳ ಆಜ್ಞೆಯನ್ನು ಬದರೀನಾರಾಯಣನು ಮಧ್ವರಿಗೆ ನೀಡಿದನೆಂದು ಉಲ್ಲೇಖಿಸುವ ಮೂಲಕ ನಾರಾಯಣಪಂಡಿತಾಚಾರ್ಯರು ಪರೋಕ್ಷವಾಗಿ ಬ್ರಹ್ಮಸೂತ್ರಾದಿಭಾಷ್ಯನಿರ್ಮಾಣದ ಆಜ್ಞೆಯನ್ನು ಮಧ್ವರಿಗೆ ವ್ಯಾಸರು ಮಾಡಿದ್ದಾರೆಂದು ಸೂಚಿಸಿದ್ದಾರೆ.

ಇದಲ್ಲದೆ ಪರತತ್ತ್ವದ ನಿರ್ಣಯಕ್ಕಾಗಿ ತಾನು ರಚಿಸಿದ ''ಮಹಾಭಾರತ''ಕ್ಕೆ ತಾತ್ಪರ್ಯಾರ್ಥವನ್ನು ಸ್ಪಷ್ಟವಾಗಿ ಹೇಳಲು (ಮಹಾಭಾರತತಾತ್ಪರ್ಯನಿರ್ಣಯ ಕೃತಿಯನ್ನು ರಚಿಸಲು) ವ್ಯಾಸರು ಸಾಕ್ಷಾತ್ ಮಧ್ವರಿಗೆ ಆದೇಶಿಸಿದರೆಂದು ಮಧ್ವವಿಜಯದಲ್ಲಿ ಉಲ್ಲೇಖವಿದೆ.

**ಪಾರಾಶರ್ಯಃ ಪರತತ್ತ್ವಪ್ರಸಿದ್ಧ್ಯೈ**
**ತಾತ್ಪರ್ಯಾರ್ಥಂ ಪರಮಂ ಭಾರತಸ್ಯ ।**
**ವ್ಯಕ್ತಂ ವಕ್ತುಂ ನಿಯುನಕ್ತಿಸ್ಮ ಸಾಕ್ಷಾತ್**
**ಏನಂ ಧನ್ಯಂ ಭುವನೇ ಮನ್ಯಮಾನಃ ॥** - (ಸುಮಧ್ವವಿಜಯ ೧೦-೨೫)

ಏವಂ ಚ ''ಮಧ್ವನರಸಿಂಹ''ರು ''ಅಮ್'' ಎಂಬ ಶಬ್ದದಿಂದ ಪ್ರತಿಪಾದ್ಯರಾದ ವ್ಯಾಸರಿಂದ ''ಇತ'' ಪ್ರಾಪ್ತಗಳಾದ (ಅಮಿತ) ಸಮೀಚೀನಗಳಾದ ಜ್ಞಾನ-ಸಹಭೋಗಸುಖ-ಆಜ್ಞಾಶಕ್ತಿಗಳಿಂದ (ಸಜ್ಜ್ಞಾನ-ಸುಖ-ಶಕ್ತಿ) ಸಮುದ್ರದಂತೆ (ಪಯೋನಿಧಿಃ) ಇದ್ದಾರೆ. ಆದುದರಿಂದ ಅಮಿತಸಜ್ಜ್ಞಾನಸುಖಶಕ್ತಿಪಯೋನಿಧಿಃ ಎಂಬ ವಿಶೇಷಣವು ''ಮಧ್ವ-ನರಸಿಂಹ''ರಿಗೆ ಸಾರ್ಥಕವಾಗಿದೆ. ಮುಖ್ಯಗುರುವಿನ ಲಕ್ಷಣವಾದ ಹರಿಆಜ್ಞಾಶಕ್ತಿಯಿಂದ ಸಂಪನ್ನರಾದುದರಿಂದ ಆಚಾರ್ಯಮಧ್ವರಿಗೆ ''ಜಯತಿ'' ಎಂಬ ಕ್ರಿಯಾಪದವು ಸಮಂಜಸವಾಗಿದೆ. ''ಜಯತಿ'' ಎಂಬ ಅಕರ್ಮಕ ''ಜಿ'' ಧಾತುವಿಗೆ ಉತ್ಕೃಷ್ಟ ಎಂಬರ್ಥ ತಾನೆ?

ಆಚಾರ್ಯಮಧ್ವರು ಗುರುಗಳಲ್ಲೇ ಉತ್ಕೃಷ್ಟರಾದುದರಿಂದ ''ಜಯತಿ'' ಕ್ರಿಯಾಪದವು ಅವರಿಗಲ್ಲದೆ ಇನ್ನಾವ ಗುರುಗಳಿಗೆ ಸಮಂಜಸವೆನಿಸೀತು? ಅದಕ್ಕೆಂದೇ -

**ಋಜುಃ ಸುಮನಾ ವಿಜ್ಞಾತಾ ಮಹಾಧ್ಯಾತಾ ಮಹಾಗುರುಃ ।**
**ಹನುಮಾನ್ ಭೀಮ ಆನಂದ(ತೀರ್ಥ) ಇತ್ಯಾದಿ ಬಹುರೂಪಿಣಃ''**

ಎಂಬ ಸ್ಮೃತಿವಚನದಲ್ಲಿ ವಾಯುರೂಪೀ ಮಧ್ವರನ್ನು ''ಮಹಾಗುರು'' ಎಂದೇ ಉಲ್ಲೇಖಿಸಲಾಗಿದೆ.

**ಶ್ರೀ ಕೃಷ್ಣಾರ್ಪಣಮಸ್ತು**

* * * * *



# ಗೋಕುಲ

## (ಅನುಗ್ರಹ ಲೇಖನ)

**ಪರಮಪೂಜ್ಯ ಶ್ರೀಶ್ರೀವಿಶ್ವಪ್ರಸನ್ನತೀರ್ಥ ಶ್ರೀಪಾದರು**
**ಕಿರಿಯಪಟ್ಟ, ಪೇಜಾವರ ಅಧೋಕ್ಷಜ ಮಠ.**

**ಅನಾಕುಲಂ ಗೋಕುಲಮುಲ್ಲಲಾಸ ಯತ್ಪಾಲಿತಂ ನಿತ್ಯಮನಾವಿಲಾತ್ಮ ।**
**ತಸ್ಮೈ ನಮೋ ನೀರದನೀಲಭಾಸೇ ಕೃಷ್ಣಾಯ ಕೃಷ್ಣಾ ರಮಣಪ್ರಿಯಾಯ ॥**
- (ಸುಮಧ್ವವಿಜಯ ೧/೨)

ಶ್ರೀಮದಾಚಾರ್ಯರ ಜೀವನ ಚರಿತೆಯನ್ನು ಹೇಳಹೊರಟ ಪಂಡಿತಾಚಾರ್ಯರು ಶ್ರೀಮತ್ಸುಮಧ್ವವಿಜಯದ ಮಂಗಲ ಪದ್ಯದಲ್ಲಿ ಶ್ರೀಕೃಷ್ಣನನ್ನು ಸ್ತುತಿಸಿದ್ದು ಹೀಗೆ; ಯಾವಾತನ ರಕ್ಷಣೆಯಲ್ಲಿದ್ದುದರಿಂದ ನಂದಗೋಕುಲವು, ಕಂಸನ ಅದೆಷ್ಟೋ ಧಾಳಿಗಳನ್ನು ಸಮರ್ಥವಾಗಿ ಎದುರಿಸಿತೋ, ಕೂದಲೂ ಕೊಂಕದ ರೀತಿಯಲ್ಲಿ ಸುರಕ್ಷಿತವಾಗಿತ್ತೋ, ಯಾವ ಕಳವಳವೂ ಇಲ್ಲದೆ ಭಯರಹಿತವಾಗಿತ್ತೋ, ಇದೆಲ್ಲಕ್ಕೂ ಮಿಗಿಲಾಗಿ ನಿತ್ಯವೂ ಕಂಗೊಳಿಸುತ್ತಿತ್ತೋ ಅಂತಹ ಕೃಷ್ಣನಿಗೆ ನಮಸ್ಕಾರ.

ಗೋವುಗಳ ಉಲ್ಲೇಖವಿಲ್ಲದ ಕೃಷ್ಣನ ಪರಿಚಯ ಅಪರಿಪೂರ್ಣ. ಅವನು ಬರಿದೇ ಕೃಷ್ಣ ಅಲ್ಲ. ಗೋಪಾಲಕೃಷ್ಣ.

ನಮ್ಮೆಲ್ಲರಿಗೂ ಮೂಲಗುರುಗಳಾದ ಶ್ರೀಮದಾಚಾರ್ಯರ ಪರಿಚಯ ಮಾಡಿಸಿಕೊಡುವ ಗ್ರಂಥಾರಂಭದಲ್ಲಿ ಶ್ರೀಮದಾಚಾರ್ಯರ ಆರಾಧ್ಯ ದೈವವನ್ನು ಹೀಗೆ ಪರಿಚಯಿಸುವ ಮೂಲಕ ಪಂಡಿತಾಚಾರ್ಯರು ನಮಗೆಲ್ಲ ಒಂದು ಸಂದೇಶವನ್ನಿತ್ತಿದ್ದಾರೆ:

''ಹರಿಗುರುಗಳ ಅನುಗ್ರಹ ಪರಿಪೂರ್ಣವಾಗಲು ನೀವು ಗೋಸೇವೆ ಮಾಡಿ, ನಿಮ್ಮ ಮನೆಯೂ ನಂದಗೋಕುಲವಾಗುವುದು, ಆನಂದಗೋಕುಲವಾಗುವುದು.''

* * * * *

ಹಣವಂತರಾಗುವ ಪ್ರಯತ್ನ ನಶ್ವರ ಸಿದ್ಧಿಯ ಮತ್ತೊಂದು ಮುಖ. ಗುಣವಂತರಾಗುವುದು ಮಾತ್ರ ಶಾಶ್ವತವಾದ ಸಿದ್ಧಿ; ಮುಖ್ಯವಾಗಿ ಶ್ರೀಹರಿಪ್ರೀತಿಗೆ ಸಾಧನವಾದ ಮುಖ್ಯಧರ್ಮ.

## ಸಂಪಾದಕೀಯ –

### ಶ್ರೀವ್ಯಾಸಮಧ್ವ- ದ್ವಿತೀಯ ವಾರ್ಷಿಕ

ಶ್ರೀವ್ಯಾಸಮಧ್ವ ಮಾಸಪತ್ರಿಕೆ ಮೊದಲು ವರ್ಷವನ್ನು ಪೂರೈಸಿ ಎರಡನೆಯ ವರ್ಷಕ್ಕೆ ಕಾಲಿರಿಸುತ್ತಿದೆ. ಕಳೆದ ವರ್ಷ ಪರಮಪೂಜ್ಯ ಶ್ರೀಪೇಜಾವರ ಮಠಾಧೀಶರಾದ ಶ್ರೀವಿಶ್ವೇಶತೀರ್ಥಶ್ರೀಪಾದಂಗಳವರ ಅಮೃತಹಸ್ತದಿಂದ ಬಿಡುಗಡೆಗೊಂಡು ಪ್ರಕಾಶನ ಆರಂಭಗೊಂಡ ಪತ್ರಿಕೆ ಪ್ರತಿತಿಂಗಳೂ ತಪ್ಪದೆ ಗ್ರಾಹಕರನ್ನು ತಲುಪಿದೆ.

ಶ್ರೀವ್ಯಾಸಮಧ್ವರ ಸಂದೇಶವನ್ನು ಅವರ ತತ್ತ್ವದ ಹಿರಿಮೆಯನ್ನು ಜನಸಾಮಾನ್ಯರಿಗೂ ಮುಟ್ಟಿಸುವ ಮುಖ್ಯ ಉದ್ದೇಶದಿಂದ ಪ್ರಾರಂಭಗೊಂಡಿತು. ವಿಶೇಷವಾಗಿ ಆಯಾ ಮಾಸಕ್ಕೆ ಸಂಬಂಧಿಸಿದಂತೆ ಮುಖ್ಯ ತಿಥಿಗಳು, ವಿಶೇಷ ದಿನಗಳು, ವ್ರತ ಉಪವಾಸಗಳು, ದೇವತೆಗಳ ಮಹಿಮೆ, ಹಾಗು ಗುರುಗಳ ಆರಾಧನೆಗೆ ಸಂಬಂಧಿಸಿದಂತೆ ಮಾಹಿತಿ, ಮೊದಲಾದುವುಗಳನ್ನು ನೀಡುವುದು ಪತ್ರಿಕೆಯ ಧ್ಯೇಯವಾಗಿತ್ತು. ಅದಕ್ಕನುಗುಣವಾಗಿ ಮೊದಲವರ್ಷದಲ್ಲಿ ಅನೇಕ ಮುಖ್ಯ ವಿವರಗಳನ್ನು ಯೋಗ್ಯರೀತಿಯಲ್ಲಿ ನೀಡಲು ಸಾಧ್ಯವಾಗಿದೆ ಎಂಬ ತೃಪ್ತಿ ನಮಗಿದೆ. ಪ್ರತಿವರ್ಷವೂ ಸಹ ಹೊಸಹೊಸತ್ತಾಗಿ ಮುಖ್ಯವಿಷಯಗಳನ್ನು ನೀಡುವುದು ನಮ್ಮ ಗುರಿ. ಕ್ರಮವಾಗಿ ಮಹಾಭಾರತ, ರಾಮಾಯಣಗಳ ಪಾತ್ರಗಳ ಪರಿಚಯ, ಹದಿನೆಂಟು ಪುರಾಣಗಳ ಪರಿಚಯ, ಇಪ್ಪತ್ತಾರು ಏಕಾದಶೀಗಳ ಮಹಿಮೆಗಳ ವಿವರ ದ್ವಾದಶಸ್ಕಂದ ಭಾಗವತದ ಮಾಹಾತ್ಮ್ಯ, ಗೀತಾಮಾಹಾತ್ಮ್ಯ, ತೀರ್ಥಕ್ಷೇತ್ರಗಳ ಮಾಹಾತ್ಮ್ಯ, ಇವುಗಳನ್ನು ಸಕಲರಿಗೂ ಮನವರಿಕೆಯಾಗುವಂತೆ ತಿಳಿಸುವ ವಿಶಿಷ್ಟ ಧ್ಯೇಯ ನಮ್ಮ ಪತ್ರಿಕೆಯದು. ಕಳೆದ ವರ್ಷ ಪ್ರಕಟಿತವಾದ ವಿವರಗಳು ಪುನರಾವರ್ತಿತವಾಗದಂತೆ ಪ್ರತಿಬಾರಿಯೂ ಹೊಸ ವಿಷಯಗಳನ್ನು ನೀಡುವ ಮೂಲಕ ಜಿಜ್ಞಾಸುಗಳಿಗೆ ಎಲ್ಲ ರೀತಿಯ ಅನುಕೂಲತೆಯನ್ನು ಒದಗಿಸುವ ಸಕಲ ಪ್ರಯತ್ನವನ್ನು ಮಾಡಲಾಗುವುದು.

ಪ್ರತಿತಿಂಗಳೂ ರಕ್ಷಾಪತ್ರದ ಪುಟಗಳಲ್ಲಿ ಅತ್ಯಮೂಲ್ಯವಾದ ಚಿತ್ರಗಳನ್ನು ನೀಡುತ್ತ ಬಂದಿರುವುದು ನಮ್ಮ ಪತ್ರಿಕೆಯ ವಿಶಿಷ್ಟ ಹಿರಿಮೆ. ಮುಂದೆ ಕ್ರಮವಾಗಿ ಸಕಲ ತೀರ್ಥಕ್ಷೇತ್ರಗಳ, ಸಕಲ ಮಾಧ್ವಮಠಗಳ ವಿಶಿಷ್ಟ ಸಾಲಿಗ್ರಾಮ ಮೊದಲಾದವುಗಳ ಚಿತ್ರಗಳನ್ನು ಒದಗಿಸುವ ಉದ್ದೇಶ ನಮ್ಮದು. ಕೆಲವು ವರ್ಷಗಳಲ್ಲಿ ಮಧ್ವಸಿದ್ಧಾಂತದ ಅನೇಕ ಮುಖಗಳ ಸಂಗ್ರಹಗಳ ದಾಖಲೆಯಾಗುವಂತೆ ಪತ್ರಿಕೆ ರೂಪುಗೊಳ್ಳುತ್ತದೆ.



ಮುಖ್ಯವಾಗಿ ವ್ಯಾಸ ಸಾಹಿತ್ಯ ಹಾಗು ದಾಸ ಸಾಹಿತ್ಯಗಳ ಆಕರ ಗ್ರಂಥಗಳ ಬಗೆಗೆ ಹಾಗು ಮೌಲಿಕವಾದ ಟೀಕಾಟಿಪ್ಪಣಿಗಳ ಬಗ್ಗೆ, ವಿಶೇಷವಾಗಿ ಸರ್ವಮೂಲಗ್ರಂಥಗಳ ಅಧ್ಯಯನಕ್ಕೆ ಅನುಕೂಲವಾಗುವಂತೆ ಮಾಹಿತಿಯನ್ನು ನೀಡಲಾಗುವುದು. ಅಪ್ರಕಾಶಿತವಾದ ವ್ಯಾಸದಾಸಸಾಹಿತ್ಯ ಕೃತಿಗಳನ್ನು ನೀಡುವ ಮೂಲಕ ಸಂಶೋಧನೆಯ ನಿಟ್ಟಿನಲ್ಲಿಯೂ ಪತ್ರಿಕೆ ವಿಶೇಷಬೆಳಕನ್ನು ಚೆಲ್ಲುವ ಯೋಜನೆ ಹೊಂದಿದೆ.

ನವಪ್ರಕಾಶಿತವಾದ ಮುಖ್ಯಮಾಧ್ವಗ್ರಂಥಗಳ ಪರಿಚಯ ಇಂದಿನ ಪತ್ರಿಕೆಗಳಲ್ಲಿ ಕಾಣೆಯಾಗುತ್ತಿರುವುದು ವಿಷಾದದ ಸಂಗತಿ. ಇದರಿಂದ ಲೇಖಕರ ಉದ್ದೇಶದ ವೈಫಲ್ಯದೊಂದಿಗೆ ಜಿಜ್ಞಾಸುಗಳ ಜ್ಞಾನಾರ್ಜನೆಗೂ ಅಗತ್ಯವಾದ ಕೃತಿಗಳು ಅಜ್ಞಾತವಾಗಿ ಉಳಿಯುವ ಅಪಾಯವಿದೆ. ಇದು ಸಂಶೋಧನಾತ್ಮಕವಾದ ಕೃತಿಗಳ ರಚನೆಗೆ ದೊಡ್ಡ ಹಿನ್ನಡೆ ಎನ್ನಿಸುವುದು ನಿಶ್ಚಿತ. ಈ ಹಿನ್ನೆಲೆಯಲ್ಲಿ ಪ್ರತಿತಿಂಗಳೂ ಅಂತಹ ಕೃತಿಗಳ ಪರಿಚಯ, ವಿಮರ್ಶೆಗಳನ್ನು ನೀಡಲು ಪತ್ರಿಕೆ ಬದ್ಧಕಂಕಣವಾಗಿದೆ. ಇದರ ಸದುಪಯೋಗವನ್ನು ಪಡೆಯಲು ಲೇಖಕರು ಪ್ರಕಾಶಕರು ಸಹಕರಿಸುವುದು ಅಗತ್ಯ.

ಪ್ರತಿತಿಂಗಳೂ ಪ್ರಕಟಿತವಾಗುವ ಮಾಸದ ವಿಶೇಷಗಳ ಬಗ್ಗೆ ಓದುಗರಿಂದ ವಿಶೇಷಪ್ರಶಂಸೆಗೆ ಪಾತ್ರವಾಗಿದೆ. ಏಕಾದಶೀ ಮೊದಲಾದ ಮಹತ್ವದ ದಿನಗಳ ವಿವರಗಳಿಂದಾಗಿ ಅನೇಕರಿಗೆ ಅವುಗಳ ಯಥೋಚಿತ ಆಚರಣೆಗೆ ಅನುಕೂಲತೆ ಲಭಿಸಿದೆ. ವ್ರತ ಉತ್ಸವಗಳಿಗೆ ಸಂಬಂದಿಸಿದಂತೆ ಸೂಕ್ತ ಮಂತ್ರಗಳನ್ನೂ ಸಹ ನೀಡುತ್ತಿರುವುದು ಇದರ ಉಪಯುಕ್ತತೆಯನ್ನು ಹೆಚ್ಚಿಸಿದೆ.

ಪತ್ರಿಕೆಯ ವಿಶೇಷಮಹತ್ವಕ್ಕೆ ಕಾರಣವಾಗಿರುವ ಮುಖ್ಯ ಲೇಖನಗಳು ಪರಮಪೂಜ್ಯರಾದ ಶ್ರೀಪಲಿಮಾರು ಮಠಾಧೀಶರಾದ ಶ್ರೀವಿದ್ಯಾಧೀಶತೀರ್ಥರು, ಭಂಡಾರಕೇರಿ ಮಠಾಧೀಶರಾದ ಶ್ರೀವಿದ್ಯೇಶತೀರ್ಥರು, ಶ್ರೀಪೇಜಾವರದ ಕಿರಿಯ ಪಟ್ಟದ ಶ್ರೀವಿಶ್ವಪ್ರಸನ್ನತೀರ್ಥರು ಇರುವವು. ವರ್ಷವಿಡೀ ಸೂತ್ರಾಕಾರವೆಂಬ ವೆಂಕಟೇಶಸ್ತೋತ್ರದ ನಾಮ ಹೇಗೆ ಸಮಗ್ರ ಬ್ರಹ್ಮಸೂತ್ರಾರ್ಥಪ್ರತಿಪಾದಕ ಎಂಬ ಶ್ರೀವಿದ್ಯಾಧೀಶತೀರ್ಥರ ಲೇಖನಮಾಲೆ, 'ನರಸಿಂಹೋऽಖಿಲಾಜ್ಞಾನಮತಧ್ವಾಂತದಿವಾಕರಃ' ಶ್ಲೋಕದ ಬಗ್ಗೆ ಬಗೆಬಗೆಯ ಮಾಹಿತಿ ನೀಡುತ್ತ ಶ್ರೀಹರಿವಾಯುಗಳ ಪರವಾಗಿ ಅರ್ಥೈಸುವ ಶ್ರೀವಿದ್ಯೇಶತೀರ್ಥರ ಲೇಖನಮಾಲೆ ಪ್ರತ್ಯೇಕ ವಿಷಯಗಳೊಂದಿಗೆ ಚಿಕ್ಕದಾಗಿ ವಿಷಯಗಳನ್ನು ನಿವೇದಿಸುವ ಶ್ರೀವಿಶ್ವಪ್ರಸನ್ನತೀರ್ಥರ ಲೇಖನಮಾಲೆಗಳು ಪತ್ರಿಕೆಯ ಮಹತ್ವವನ್ನು ಬಹಳವಾಗಿ ಹೆಚ್ಚಿಸಿದೆ. ವಿದ್ವಾಂಸರಲ್ಲದವರಿಗೂ ಮೌಲಿಕ ವಿಷಯಗಳ ಬಗ್ಗೆ

ಮನವರಿಕೆಯಾಗುವಂತೆ ನಿರೂಪಿತವಾಗುವ ಈ ಪ್ರೌಢಲೇಖನಗಳು ಈಗಿನ ದಿನಗಳಲ್ಲಿ ಅತ್ಯಗತ್ಯ ಎಂದು ಪ್ರತ್ಯೇಕ ಹೇಳಬೇಕಿಲ್ಲ. ಇಂತಹ ಅತ್ಯಮೂಲ್ಯ ಲೇಖನಗಳಿಗಾಗಿ ಪರಮಪೂಜ್ಯ ಶ್ರೀಪಾದರುಗಳಿಗೆ ನಮ್ಮ ಪತ್ರಿಕೆ ಅತ್ಯಂತ ವಿನಮ್ರವಾಗಿ ಸಾಷ್ಟಾಂಗ ಪ್ರಣತಿಗಳನ್ನು ಸಮರ್ಪಿಸುತ್ತದೆ. ಇವರ ಅನುಗ್ರಹ ನಿರಂತರವಾಗಿ ಲಭಿಸಲಿ ಎಂದು ಪ್ರಾರ್ಥಿಸುತ್ತದೆ ಸಹ.

ತಪ್ತಮುದ್ರಾಧಾರಣೆಯ ಬಗ್ಗೆ ಜೂನ್ ತಿಂಗಳಲ್ಲಿ ಪ್ರಕಾಶಿತವಾದ ಶ್ರೀಮದುತ್ತರಾದಿಮಠಾಧೀಶರಾದ ಪರಮಪೂಜ್ಯ ಶ್ರೀಸತ್ಯಾತ್ಮತೀರ್ಥರ ಲೇಖನ ಆ ಬಗ್ಗೆ ಅಪೂರ್ವ ಮಾಹಿತಿಯಿಂದಾಗಿ ವಿಶೇಷ ಗಮನ ಸೆಳೆದ ಮತ್ತೊಂದು ಅಪೂರ್ವಲೇಖನ. ಇದಕ್ಕಾಗಿ ಅವರಿಗೂ ನಮ್ಮ ಕೃತಜ್ಞತಾಪೂರ್ವಕವಾದ ಪ್ರಣತಿಗಳು.

ಶ್ರೀ ಪಂ. ಸಗ್ರಿ ರಾಘವೇಂದ್ರ ಉಪಾಧ್ಯಾಯರ ‘ಮಧ್ವಸಿದ್ಧಾಂತ ಮತ್ತು ಅನುಸಂಧಾನ’ ಎಂಬ ಲೇಖನಮಾಲೆ ಸಾಧಕರಿಗೆ ತುಂಬ ಉಪಯುಕ್ತವಾದ ವಿವರಗಳಿಂದ ಕೂಡಿದೆ. ಅದರಂತೆ ಇತರರ ಲೇಖನಗಳೂ ಸಹ. ಇದಕ್ಕಾಗಿ ಇವರಿಗೆಲ್ಲ ಪತ್ರಿಕೆ ಋಣಿ.

ಆದಷ್ಟು ಜಾಹೀರಾತುಗಳಿಗೆ ಅವಕಾಶ ನೀಡದೆ ಮುಖ್ಯವಾಗಿ ಮೌಲಿಕ ವಿಚಾರಗಳ ಬಗ್ಗೆ ಮಾಹಿತಿ ನೀಡುವ ಸಂಕಲ್ಪ ಪತ್ರಿಕೆಯದು. ವಾಚಕರು ಪ್ರತಿತಿಂಗಳ ಪತ್ರಿಕೆಯನ್ನು ಕಾದಿರಿಸಿಕೊಂಡಲ್ಲಿ ಮುಂದಿನ ವರ್ಷಗಳಲ್ಲಿ ಆಯಾ ಮಾಸದ ವಿಶೇಷ ವಿವರಗಳ ಬಗೆಗೆ ಮಾಹಿತಿಗಳನ್ನು ಕೂಡಲೇ ಪಡೆದುಕೊಳ್ಳಲು ನೆರವಾಗುವದು.

* * * *

## ಕೆಲವು ಮುಖ್ಯ (ಸ್ವಾಭಾವಿಕ) ಪರ್ವಕಾಲಗಳು

೧. ಎಲ್ಲ ರವಿವಾರಗಳು, ಚಾತುರ್ಮಾಸ್ಯ, ವೈಶಾಖ ಮತ್ತು ಮಾಘಮಾಸಗಳು, ಮೇಷಾದಿ ಹನ್ನೆರಡು ಸಂಕ್ರಮಣಗಳು, ಎಲ್ಲ ಹುಣ್ಣಿಮೆ ಅಮಾವಾಸ್ಯೆಗಳು, ದಶಮ್ಯಾದಿ ದಿನತ್ರಯಗಳು, ಅಷ್ಟಕಗಳು, ಅನ್ವಷ್ಟಕಗಳು, ಯುಗಾದಿಗಳು, ಮನ್ವಾದಿಗಳು ಮತ್ತು ಗ್ರಹಣಕಾಲಗಳು ಪರ್ವಕಾಲಗಳು.

೨. ಎರಡು ಅಥವಾ ಮೂರು ಪರ್ವಕಾಲಗಳ ಸಂಗಮ ‘ಚೂಡಾಮಣಿಯೋಗ’ ಎನ್ನಿಸುವುದು.

೩. ಜನ್ಮವಾರ ಜನ್ಮನಕ್ಷತ್ರಗಳು ಸೇರಿದರೂ ಸಹ ಪರ್ವಕಾಲ.

೪. ಪುಷ್ಯ ಮತ್ತು ಶ್ರವಣ ನಕ್ಷತ್ರಗಳು.





# ಆತ್ಮಾಹುತಿಯ ಅನುಸಂಧಾನ

– ವಿದ್ವಾನ್ ಸಗ್ರಿ ರಾಘವೇಂದ್ರ ಉಪಾಧ್ಯಾಯ, ಉಡುಪಿ

ಆದಷ್ಟು ಪವಿತ್ರರಾಗಿ ಸೂರ್ಯಾರ್ಘ್ಯಪ್ರದಾನ, ಗಾಯತ್ರೀಮಂತ್ರಜಪ ಮುಂತಾದವುಗಳನ್ನು ನಡೆಸಿದರಷ್ಟೇ ಅವು ಅಧಿಕಫಲಪ್ರದಗಳಾಗಬಲ್ಲವಾದುದರಿಂದ ಸಂಧ್ಯಾವಂದನೆ ಪಾವಿತ್ರ್ಯಸಂಪಾದಕವಾಗಿ ಪ್ರಾಣಾಯಾಮ, ಮಾರ್ಜನ, ಪಾಪಪುರುಷವಿಸರ್ಜನ - ಅಂಗಗಳನ್ನು ಹೇಗೋ ಹಾಗೆ, ‘ಜಲಪ್ರಾಶನ’ ಎಂಬ ಅಂಗವನ್ನೂ ಒಳಗೊಂಡಿದೆ. ‘ಸೂರ್ಯಶ್ಚ ಮಾ ಮನ್ಯುಶ್ಚ ...’ ಎಂದು ಪ್ರಾರಂಭವಾಗುವ ಮಂತ್ರದ ವಿನಿಯೋಗದೊಂದಿಗೆ ನಡೆಸಲಾಗುವ ‘ಜಲಪ್ರಾಶನ’ಕ್ಕೆ ಅರ್ಥಾತ್ ಒಂದು ಉದ್ದಿನಕಾಳು ಮುಳುಗುವಷ್ಟು ಲಘುಪ್ರಮಾಣದ ಜಲದ ಪಾನಕ್ಕೆ ‘ಪ್ರಾಶನ’ದ ಚೆನ್ನಾಗಿ ಅನುಭವಿಸುವಿಕೆಯ ಮೆರುಗು ಸಿಗಬೇಕೆಂದರೆ ಮುಖ್ಯವಾಗಿ ಜಲದ ಪಾನಕ್ಕೆ ಆತ್ಮಾಹುತಿಯ ಅನುಸಂಧಾನದ ಬೆಳಕನ್ನೂ, ಮನಸ್ಸಿನಿಂದ, ವಾಗಿಂದ್ರಿಯದಿಂದ, ಕೈಗಳಿಂದ, ಕಾಲುಗಳಿಂದ, ಹೊಟ್ಟೆಯಿಂದ, ಗುಹ್ಯೇಂದ್ರಿಯದಿಂದ ಎಸಗಲ್ಪಡುವ ಪಾಪಗಳ ವಿಶ್ಲೇಷಣೆಯೊಂದಿಗೆ ಪಶ್ಚಾತ್ತಾಪರೂಪದ ಅನುಸಂಧಾನದ ಬೆಳಕನ್ನೂ ಹಾಯಿಸಬೇಕು. ಆಗಷ್ಟೇ ಅದು ‘ಜಲಪ್ರಾಶನ’ ಎನಿಸಿ ಮನ್ಯು ಮುಂತಾದ ದೋಷಪ್ರಯುಕ್ತವಾಗಿ ಎಸಗಲ್ಪಟ್ಟಿರುವ ಅಪರಾಧಗಳ ಪ್ರಮಾರ್ಜನೆಯನ್ನು ನಡೆಸಬಲ್ಲದು.

### ಆತ್ಮಾಹುತಿಯ ಮೆರುಗು:

‘ಯದ್ರಾತ್ರ್ಯಾ ಪಾಪಮಕಾರ್ಷಮ್’ - ಎಂದು ಆ ದಿನದ ಹಿಂದಿನ ರಾತ್ರಿಯಲ್ಲಿ ಮನಸ್ಸೇ ಮುಂತಾದ ಇಂದ್ರಿಯಗಳಿಂದ ಎಸಗಿದ ಪಾಪಗಳನ್ನೆಲ್ಲ ಸ್ಮರಿಸಿಕೊಂಡು, ಆ ಬಗ್ಗೆ ಪಶ್ಚಾತ್ತಾಪ ಪಟ್ಟು, ಆ ಪಶ್ಚಾತ್ತಾಪದ ಒಂದು ಅಂಗ ಎಂಬಂತೆ ‘ಇದಮಹಂ ಮಾಂ ಅಮೃತಯೋನೌ ಸೂರ್ಯೇ ಜ್ಯೋತಿಷಿ ಜುಹೋಮಿ ಸ್ವಾಹಾ’ - ಜ್ಯೋತಿಃ ಸ್ವರೂಪನಾದ ಸೂರ್ಯ ಎನಿಸುವ ಭಗವಂತನಲ್ಲಿ, ಅಥವಾ ಸೂರ್ಯನಲ್ಲಿ ಜ್ಯೋತಿಃ ಸ್ವರೂಪನಾಗಿರುವ ಭಗವಂತನಲ್ಲಿ ನಾನು ನನ್ನನ್ನು ಹೋಮಿಸಿಕೊಳ್ಳುತ್ತೇನೆ; ಅರ್ಥಾತ್ ಅರ್ಪಿಸಿಕೊಳ್ಳುತ್ತೇನೆ. ಈ ಆತ್ಮಾರ್ಪಣೆಯನ್ನೇ ಅರ್ಪಣಾರ್ಥಕವಾದ ‘ಸ್ವಾಹಾ’ ಶಬ್ದದಿಂದ ಉದ್ಘೋಷಿಸಲಾಗುವುದು. ಅಂಗೈಯಲ್ಲಿ ಒಂದು ಜಲವನ್ನು ಹಿಡಿದುಕೊಂಡು, ಆ ಜಲದಲ್ಲಿ ‘ತ್ರ್ಯಾತ್ಮಕತ್ವಾತ್ತು ಭೂಯಸ್ತ್ವಾತ್’ (೩/೧/೨) ಎಂಬ ಬ್ರಹ್ಮಸೂತ್ರದಲ್ಲಿ

ತ್ರಿವೃತ್ಕರಣಪ್ರಕ್ರಿಯೆಗನುಗುಣವಾಗಿ ಭೂಮಿ, ನೀರು ಹಾಗೂ ಬೆಂಕಿ - ಈ ಮೂರರ ಮಿಶ್ರಣವಾಗಿದ್ದು, ಅಂತಹ ಪೃಥಿವ್ಯಾದಿಗಳಿಂದ ರಚಿತವಾಗಿರುವ ಪಾಂಚಭೌತಿಕದೇಹವನ್ನು ಪ್ರತಿನಿಧಿಸಿಕೊಂಡು, ಅದನ್ನು ಭಗವಂತನಲ್ಲಿ ಹೋಮಿಸುವುದು; ಈ ಜಲ ಪ್ರತಿನಿಧಿ ಸುತ್ತಿರುವ ನನ್ನ ಈ ದೇಹ ಭಗವಂತನಿಗೇ ಸೇರಿರುವುದು; ಶರೀರದ ಘಟಕಗಳಾದ ಮನಸ್ಸೇ ಮುಂತಾದ ಇಂದ್ರಿಯಗಳು ಆಸುರೀಶಕ್ತಿಗಳ ಆಕ್ರಮಣಕ್ಕೆ ಒಳಗಾಗಿ ಪಾಪವನ್ನೆಸಗಲು ಮೂಲಪ್ರೇರಕ ಭಗವಂತನೇ. ನನ್ನ ಪ್ರಾರಬ್ಧಕರ್ಮಕ್ಕನುಗುಣವಾಗಿ ನನ್ನಿಂದ ಈ ಪಾಪ ಎಸಗಲ್ಪಡುವಂತೆ ಅವನೇ ಪ್ರೇರಿಸಿರುವನು. ಈ ಬಗೆಯ ವಿವೇಚನೆಯೊಂದಿಗೆ ಅಳವಡಿಸಿಕೊಳ್ಳಬೇಕಾದ ಪಶ್ಚಾತ್ತಾಪಕ್ಕೂ ಮುಖ್ಯಲಕ್ಷ್ಯ ಅವನೇ ಎಂಬ ಅಂಶಗಳನ್ನೊಳಗೊಂಡ ಅನುಸಂಧಾನವೇ 'ಆತ್ಮಾಹುತಿ'. ಈ ಬಗೆಯ ಆಹುತಿಗೆ ಪಾತ್ರನಾಗಲು ಬೇಕಾದ ಅರ್ಹತೆಯನ್ನು ಭಗವಂತನಲ್ಲಿ ಸ್ಪಷ್ಟಪಡಿಸುವುದಕ್ಕಾಗಿಯೇ 'ಅಮೃತಯೋನೌ', 'ಜ್ಯೋತಿಷಿ' ಎಂಬ ಎರಡು ವಿಶೇಷಣಗಳನ್ನು ನೀಡಲಾಗಿದೆ. ಮೋಕ್ಷಯೋಗ್ಯರಿಗೆ ಮೋಕ್ಷ ದೊರಕುವಂತೆ ಮಾಡುವುದರಲ್ಲಿ ಭಗವಂತನದ್ದು ದೊಡ್ಡ ಪಾತ್ರ. ಅಂತಹ ಮೋಕ್ಷಸಂಪಾದಕತ್ವವನ್ನೇ 'ಅಮೃತಯೋನೌ' ವಿಶೇಷಣ ಸಾರುತ್ತಿದೆ. ಅಮೃತ ಎಂದರೆ ಮೋಕ್ಷ. ಅಂತಹ ಮೋಕ್ಷಕ್ಕೆ ಕಾರಣನಾಗಿ ಅಮೃತಯೋನಿ ಎನಿಸಿರುವ ಭಗವಂತ ಮೋಕ್ಷಸಾಧನೆಗೆ ಪ್ರತಿಬಂಧಕಗಳಾದ ನನ್ನ ಅಪರಾಧಗಳನ್ನು ಪರಿಹರಿಸುವಂತಾಗಲಿ ಎಂಬುದು ಆ ವಿಶೇಷಣದ ಧ್ವನಿ. ಜ್ಯೋತಿಃಸ್ವರೂಪಿಯಾದ ಭಗವಂತ ನಾನು ಮನಸ್ಸೇ ಮುಂತಾದ ಇಂದ್ರಿಯಗಳ ಮೂಲಕ ಎಸಗಿದ ಪಾಪಗಳ ವಿಷಯದಲ್ಲಿ ನನಗೆ ಪಶ್ಚಾತ್ತಾಪ ಮೂಡುವಂತೆ ('ದ್ಯೋತಯತಿ - ಸ್ಪಷ್ಟಯತಿ ಸ್ವಸ್ಮೈ ಸ್ವಾಪರಾಧಮಿತಿ ಜ್ಯೋತಿಃ') ಅನುಗ್ರಹಿಸಲಿ; ಆ ಮೂಲಕ ನನ್ನ ಅಪರಾಧಗಳನ್ನು ಸುಟ್ಟುಹಾಕಲಿ ಎಂಬುದು 'ಜ್ಯೋತಿಃ' ವಿಶೇಷಣದ ಧ್ವನಿ.

ಸೂರಿಗಳಿಂದಷ್ಟೇ ತಿಳಿಯಲ್ಪಡುತ್ತಾ 'ಸೂರ್ಯ' ಎಂದೆನಿಸಿ ಹಗಲಿಗೆ ಮುಖ್ಯಅಭಿಮಾನಿಯಾಗಿರುವ ವಾಯುದೇವನನ್ನು ಸೂರ್ಯನಾಮದಿಂದ ಉಲ್ಲೇಖಿಸಿ ಅವನಲ್ಲಿರುವ ಜ್ಯೋತಿಃಸ್ವರೂಪಿಯಾದ ಭಗವಂತನನ್ನು ಪ್ರಾತಃಸಂಧ್ಯಾವಂದನದಲ್ಲೂ, ನಿದ್ರಾರೂಪದ ನಿರ್ದುಷ್ಟಾನಂದದ ಅನುಭವಕ್ಕೆ ಪ್ರಯೋಜಕಗಳಾಗಿ 'ಸತ್ಯ' ಎನಿಸುವ ರಾತ್ರಿಗೆ ಅಭಿಮಾನಿನಿಯಾದ ಭಾರತೀದೇವಿಯನ್ನು ಸತ್ಯನಾಮದಿಂದ ಉಲ್ಲೇಖಿಸಿ ಅವಳಲ್ಲಿ ಜ್ಯೋತಿಃಸ್ವರೂಪಿಯಾದ ಭಗವಂತನನ್ನು ಸಾಯಂಸಂಧ್ಯಾವಂದನದಲ್ಲೂ ಪರಾಮರ್ಶಿಸುವುದರಿಂದ ಹಗಲಿನ ಪಾಪಪರಿಹಾರಕ್ಕೆ ವಾಯುದೇವನನ್ನೂ, ರಾತ್ರಿಯ ಪಾಪಪರಿಹಾರಕ್ಕೆ ಭಾರತೀದೇವಿಯನ್ನೂ ಪ್ರತಿಮಾರೂಪದಲ್ಲಿ ಅಮುಖ್ಯವಾಗಿ ಪ್ರಾರ್ಥಿಸಿಕೊಂಡಂತಾಗುವುದು.



**ಪಶ್ಚಾತ್ತಾಪದ ಮೆರುಗು:**

ಮನಸ್ಸೇ ಮುಂತಾದವುಗಳಿಂದ ಎಸಗಲ್ಪಟ್ಟ ಪಾಪಗಳನ್ನು ಉಲ್ಲೇಖಿಸುವಾಗ ಪಶ್ಚಾತ್ತಾಪದ ಮೆರುಗು ಸಿದ್ಧಿಸುವಂತೆ ಆಯಾ ಇಂದ್ರಿಯದಿಂದ ಏನೇನು ಅಪರಾಧವನ್ನು ಮಾಡಲಾಗಿದೆ ಎಂಬುದನ್ನೂ ವಿವೇಚಿಸಿಕೊಳ್ಳಬೇಕು.

೧) ಮನಸ್ಸಿನಿಂದ ಭಗವಂತನ, ಅವನ ಭಕ್ತರ, ಅವನಿಗೆ ಪ್ರಿಯಗಳಾದ ಧರ್ಮಾದಿಗಳ ವಿಚಾರಗಳನ್ನು ನಡೆಸದಿರುವುದು ಒಂದು ಬಗೆಯ ಅಪರಾಧವಾದರೆ, ಇವುಗಳ ಬದಲಿಗೆ ಭಗವದಭಕ್ತಿಗೆ ಪೋಷಕಗಳಾದ, ವಿಪರೀತವಾಗಿ ಭಕ್ತಿಗೆ ಮಾರಕಗಳಾದ ವಿಚಾರಗಳನ್ನು ನಡೆಸುವುದು ಮತ್ತೊಂದು ಬಗೆಯ ಅಪರಾಧ.

೨) ಭಗವಂತನ ನಾಮಸಂಕೀರ್ತನೆಯೇ ಮುಂತಾದ ಕರ್ತವ್ಯಗಳನ್ನು ನಡೆಸಲು ವಿನಿಯೋಗಿಸಬೇಕಾದ ವಾಗಿಂದ್ರಿಯವನ್ನು ಭಗವದಭಕ್ತಿಗೆ ಪೋಷಕಗಳಾದ ಕೆಟ್ಟ ಮಾತುಗಳನ್ನು ಆಡಲು ದುರುಪಯೋಗಪಡಿಸಿಕೊಂಡಿರುವುದು ಅಪರಾಧ.

೩) ಭಗವಂತನಿಗೆ ಪ್ರಿಯಗಳಾದ ಕೆಲಸಗಳನ್ನು ನಡೆಸಬೇಕಾದ ಕೈಗಳಿಂದ ಭಗವಂತನಿಗೆ ಅಪ್ರಿಯಗಳಾದ ಕೆಲಸಗಳನ್ನು ನಡೆಸುವುದು; ಅವನ ಪ್ರೀತಿಗೆ ಪ್ರಯೋಜಕಗಳಾಗದ ಕೆಲಸಗಳಿಗಾಗಿ ದುರುಪಯೋಗಪಡಿಸಿಕೊಂಡಿರುವುದು ಅಪರಾಧ.

೪) ಭಗವಂತನ ಪ್ರತೀಕಗಳಿರುವಲ್ಲಿಗೆ, ಭಗವದ್ಭಕ್ತರಿರುವಲ್ಲಿಗೆ ಹೋಗಲು ಬಳಸಿಕೊಳ್ಳಬೇಕಾದ ಪಾದಗಳನ್ನು ಅವನ ಭಕ್ತಿಗೆ ಪೋಷಕವಾಗದ ಸ್ಥಳಗಳಿಗೆ ಹೋಗಲು ದುರುಪಯೋಗಪಡಿಸಿಕೊಳ್ಳುವುದು ಅಪರಾಧ.

೫) ಭಗವಂತನ ನೈವೇದ್ಯವನ್ನು, ಪ್ರಸಾದವನ್ನು ಸ್ವೀಕರಿಸಿಬೇಕಾದ ಉದರವನ್ನು ಅವನ ನೈವೇದ್ಯವಲ್ಲದ ಆಹಾರವನ್ನು ಹಾಗೂ ಅವನ ಭಕ್ತಿಗೆ ಮಾರಕವಾಗುವ ಆಹಾರವನ್ನು ಸ್ವೀಕರಿಸಲು ದುರುಪಯೋಗಪಡಿಸಿಕೊಳ್ಳುವುದು ಅಪರಾಧ.

೬) ಉತ್ತಮಸಂತಾನವನ್ನು ಪಡೆಯಲು ಬಳಸಿಕೊಳ್ಳಬೇಕಾದ ಗುಹ್ಯೇಂದ್ರಿಯವನ್ನು ಅಶಾಸ್ತ್ರೀಯವಾಗಿ ಸುಖ ಪಡೆಯಲು ಬಳಸಿಕೊಳ್ಳುವುದು ಅಪರಾಧ.

ಹೀಗೆ ಮನಸ್ಸು, ವಾಗಿಂದ್ರಿಯ, ಹಸ್ತಗಳು, ಪಾದಗಳು, ಉದರ ಹಾಗೂ ಗುಹ್ಯೇಂದ್ರಿಯ - ಇವುಗಳ ಮೂಲಕ ಎಸಗಲ್ಪಟ್ಟ ಅಪರಾಧಗಳನ್ನು ಪರಿಶೀಲಿಸಿ, ಅವುಗಳ ನಿರ್ವಹಣೆಯಲ್ಲಿ ಕಾಮಾಭಿಮಾನಿ ಕಾಲನೇಮಿ ಮುಂತಾದ ಅಸುರರ ಅಮುಖ್ಯಪಾತ್ರವನ್ನು ವಿವೇಚಿಸಿಕೊಂಡು, ಅದಕ್ಕೆ ತನ್ನ ಸ್ವಭಾವದ ಪ್ರಾರಬ್ಧಕರ್ಮದ ಮೂಲಕ ತಾನು ಚಿಕ್ಕದಾದರೂ ಮೂಲಭೂತವಾದ ಪಾತ್ರಧಾರಿಯಾಗಿರುವ ಬಗ್ಗೆ ಪಶ್ಚಾತ್ತಾಪ ಪಡುವಂತಾಗಬೇಕು. 'ಯದ್ರಾತ್ರ್ಯಾ (ಯದಹ್ನಾ) ಪಾಪಮಕಾರ್ಷಮ್ । ಮನಸಾ ವಾಚಾ ಹಸ್ತಾಭ್ಯಾಂ ಪದ್ಭ್ಯಾಮುದರೇಣ ಶಿಶ್ನಾ' - ಎಂಬ ಮಂತ್ರಭಾಗವನ್ನು ಪಠಿಸುವಾಗ ಈ ಅನುಸಂಧಾನವನ್ನು ತಾಳಬೇಕು.

**ಅಧಿದೇವತೆಯ, ಅಭಿಮಾನಿಗಳ ಅನುಸಂಧಾನ:**

'ರಾತ್ರಿಃ (ಅಹಃ) ತದವಲಂಪತು' - ಎಂದು ಪಾಪವನ್ನು ಪರಿಹರಿಸಲು ಕೇಳಿಕೊಳ್ಳಲಾಗುವ 'ರಾತ್ರಿ' - ರಾತ್ರಿಗೆ ಮುಖ್ಯದೇವತೆಯಾದ ನರಸಿಂಹ; ಅವನಿಗೆ ಪ್ರತೀಕದಂತೆ ಇದ್ದು ರಾತ್ರಿಸೂಕ್ತಪ್ರತಿಪಾದ್ಯಳಾಗಿ ರಾತ್ರಿಗೆ ಅಮುಖ್ಯಅಭಿಮಾನಿನಿಯಾದ ದುರ್ಗಾದೇವಿ; ಹಾಗೂ ರಾತ್ರಿಗೆ ಮತ್ತೂ ಅಮುಖ್ಯವಾಗಿ ಅಭಿಮಾನಿನಿಯಾಗಿ ಷಟ್ಪ್ರಶ್ನೋಪನಿಷತ್ತಿನಲ್ಲಿ ಪ್ರತಿಪಾದ್ಯಳಾಗಿರುವ ಭಾರತೀದೇವಿ - ಎಂಬುದನ್ನು ವಿವೇಚಿಸಿಕೊಂಡು, ಹಾಗೆಯೇ 'ಅಹಃ' ಎಂದರೆ ಮುಖ್ಯವಾಗಿ ಅಹೇಯನಾಗಿದ್ದು 'ಅಹಃ' ಎನಿಸುವ ಭಗವಂತ, ಅವನುಗೆ ಪ್ರತೀಕನಾಗಿ ಹಗಲಿಗೆ ಅಭಿಮಾನಿಯಾದ ವಾಯುದೇವ - ಎಂದು ವಿವೇಚಿಸಿಕೊಂಡು ಅವರ ಸ್ವಾಮಿತ್ವಕ್ಕೆ ಒಳಗಾಗಿದ್ದ ಆಯಾ ಕಾಲಾವಧಿಯಲ್ಲಿ ಅವರು ಕಾಣುತ್ತಿರುವಂತೆ, ಆದರೆ ಅದನ್ನು ಅದನ್ನು ಗಮನಿಸದೆ ಅಪರಾಧ ಎಸಗಲ್ಪಟ್ಟಿದೆ ಎಂಬ ಅನುಸಂಧಾನವನ್ನು ತಂದುಕೊಳ್ಳಬೇಕು.

''ಸೂರ್ಯಶ್ಚ ಮಾ ಮನ್ಯುಶ್ಚ' (ಇಲ್ಲಿ 'ನನ್ನನ್ನು' ಎಂಬ ಅರ್ಥದಲ್ಲಿ 'ಮಾ' ಎಂದು ಪ್ರಯುಕ್ತವಾದುದೇ ಹೊರತು, ಸಾಮಾನ್ಯವಾಗಿ ಭ್ರಮಿಸುವಂತೆ 'ಮಾಮನ್ಯು' ಎಂದು ಅಲ್ಲ) ಮನ್ಯುಪತಯಶ್ಚ ಮನ್ಯುಕೃತೇಭ್ಯಃ ಪಾಪೇಭ್ಯೋ ರಕ್ಷಂತಾಮ್'' - ಎಂಬ ಮಂತ್ರದ ಭಾಗವನ್ನು ಪಠಿಸುವಾಗ 'ಸೂರ್ಯ' ನಾಮದಿಂದ ಸೂರ್ಯನಾರಾಯಣ, ವಾಯುದೇವ ಹಾಗೂ ಸೂರ್ಯದೇವ - ಇವರನ್ನೂ, 'ಮನ್ಯು'ನಾಮದಿಂದ ಮನ್ಯುಸೂಕ್ತಪ್ರತಿಪಾದ್ಯ ಕ್ರೋಧನಿಯಾಮಕ ನರಸಿಂಹನನ್ನೂ, 'ಮನ್ಯು' ಎನ್ನಿಸುವ ಕ್ರೋಧಕ್ಕೆ ಅವಾಂತರಅಭಿಮಾನಿಯಾಗಿದ್ದು, ಮನ್ಯು ಎನಿಸುವ ಕ್ರೋಧ ಎಂಬ ಅಸುರನಿಗೆ ಪರಿಗಳಾದ ನರಸಿಂಹಾದಿಗಳನ್ನು 'ಮನ್ಯುಪತಿ'ಶಬ್ದದಿಂದಲೂ ಪರಾಮರ್ಶಿಸಿ, 'ಮನ್ಯುಕೃತೇಭ್ಯಃ ಪಾಪೇಭ್ಯೋ ರಕ್ಷಂತಾಂ' ಎಂಬಲ್ಲಿ 'ಮನ್ಯು'ಶಬ್ದ ಕ್ರೋಧವೇ ಮುಂತಾದ ಎಲ್ಲ ದೋಷಗಳಿಗೆ ಉಪಲಕ್ಷಕವಾಗಿ ಪ್ರಯುಕ್ತವಾಗಿರುವುದರಿಂದ ಕ್ರೋಧವೇ ಮುಂತಾದ ಬೇರೆ ಬೇರೆ ದೋಷಪ್ರಯುಕ್ತ ಎಸಗಲ್ಪಟ್ಟ ಪಾಪಗಳಿಂದ ರಕ್ಷಿಸುವಂತೆ ಅರ್ಥಾತ್ ಆ ಪಾಪಪ್ರಯುಕ್ತ ಅಧಿಕದುಷ್ಫಲ ದೊರಕದಂತೆ ರಕ್ಷಣೆ ನೀಡಲು ಪ್ರಾರ್ಥಿಸಲಾಗುತ್ತಿದೆ - ಎಂಬ ಅನುಸಂಧಾನ ತಾಳಬೇಕು. ಹಾಗೆಯೇ ಮನ್ಯು ಮುಂತಾದ ದೋಷಗಳಿಗೊಳಗಾಗಿ ಪಾಪಕಾರ್ಯಗಳನ್ನೆಸಗದಂತೆಯೂ ಅವರ ರಕ್ಷಣೆಯನ್ನು ಪ್ರಾರ್ಥಿಸಲಾಗುವುದೆಂಬ ಅನುಸಂಧಾನಕ್ಕೆ ಒಳಗಾಗಬೇಕು. ಹೀಗೆ ಅನುಸಂಧಾನದ ಬೆಳಕಿನೊಂದಿಗೆ ನಡೆಸಿದರಷ್ಟೇ 'ಜಲಪ್ರಾಶನ' ಆತ್ಮಾಹುತಿಯ ಮೆರುಗು ಪಡೆದು, ಅಧಿಕವಾಗಿ ಪಾವಿತ್ರ್ಯಪ್ರದ ಆಗಬಲ್ಲುದು.

(ಮುಂದಿನ ಸಂಚಿಕೆಯಲ್ಲಿ: ಆಸನಶುದ್ಧಿಯ ಅನುಸಂಧಾನ)



# ಪ್ರಥಮ ಸಂಪುಟದ ಸಂಚಿಕೆಗಳ ವಿಷಯಾನುಕ್ರಮಣಿಕೆ

(ವಾಚಕರ ಅನುಕೂಲಕ್ಕಾಗಿ ಪ್ರಥಮಸಂಪುಟದ ಸಮಗ್ರ ಸಂಚಿಕೆಗಳ ವಿಷಯಾನುಕ್ರಮಣಿಕೆಯನ್ನು ಮಾಸಾನುಕ್ರಮದಲ್ಲಿ ಈ ಕೆಳಗೆ ನೀಡಲಾಗಿದೆ.)

**ಮಾರ್ಚ್ ೨೦೦೮**

೧. ಶ್ರೀವ್ಯಾಸಸೂಕ್ತಿ - ಶ್ರೀಮಧ್ವಸೂಕ್ತಿ ೩
೨. ಹರಿದಾಸರ ಸೂಕ್ತಿರತ್ನಗಳು ೪
೩. ಸಂಪಾದಕೀಯ ೫
೪. ಶ್ರೀವ್ಯಾಸಮಧ್ವ ಮಾಸಪತ್ರಿಕೆ ೭
೫. ಕೈಲಾಸವಾಸ ಗೌರೀಶ ಈಶ ೯
೬. ಶ್ರೀನರಹರಿತೀರ್ಥರ ಗೀತಾಭಾಷ್ಯಭಾವಪ್ರಕಾಶಿಕಾ ೧೩
೭. ಭಾರದ್ವಾಜಸಂಹಿತಾ ೨೧
೮. ಹರಿಕಥಾಮೃತಸಾರದಲ್ಲೊಂದು ಹೊಸ ಪದ್ಯ ೨೩
೯. ಶ್ರೀವಿಜಯದಾಸರಿಗೊಬ್ಬ ತಂಗಿ ೨೫
೧೦. ಶ್ರೀನರಹರಿತೀರ್ಥರ ಮಠ ೨೬
೧೧. ಪ್ರಶ್ನೆ - ಉತ್ತರ ೨೮
೧೨. ಮಾಸದ ವಿಶೇಷ ೨೯

**ಏಪ್ರಿಲ್ ೨೦೦೮**

೧. ಶ್ರೀವ್ಯಾಸಸೂಕ್ತಿ - ಶ್ರೀಮಧ್ವಸೂಕ್ತಿ ೩
೨. ಹರಿದಾಸರ ಸೂಕ್ತಿರತ್ನಗಳು ೫
೪. ಅನುಗ್ರಹ ಸಂದೇಶ - ಶ್ರೀಶ್ರೀವಿಶ್ವೇಶತೀರ್ಥಶ್ರೀಪಾದಂಗಳವರು ೬
೩. ಸೂತ್ರ - ಶ್ರೀಶ್ರೀ ವಿದ್ಯಾಧೀಶತೀರ್ಥಶ್ರೀಪಾದಂಗಳವರು ೭
೩. ಶುಭಹಾರೈಕೆ - ಶ್ರೀ ಶ್ರೀ ವಿದ್ಯೇಶತೀರ್ಥಶ್ರೀಪಾದಂಗಳವರು ೯
೪. ಸಂಪಾದಕೀಯ ೧೧
೫. ಶ್ರೀವ್ಯಾಸರ ಉಪದೇಶಕೌಶಲ - ಡಾ ॥ ವ್ಯಾಸನಕೆರೆ ಪ್ರಭಂಜನಾಚಾರ್ಯ ೧೩
೬. ಅನುಸಂಧಾನ ಮತ್ತು ಮಧ್ವಸಿದ್ಧಾಂತ - ಶ್ರೀಸಗ್ರೀ ರಾಘವೇಂದ್ರ ಉಪಾಧ್ಯಾಯ ೧೫
೭. ಶ್ರೀರಾಮಾಯಣದ ಸ್ವಾರಸ್ಯಗಳು - ಡಾ ॥ ವ್ಯಾಸನಕೆರೆ ಪ್ರಭಂಜನಾಚಾರ್ಯ ೨೧
೮. ಪರಶುರಾಮರೂಪದ ಹಿರಿಮೆ - ಡಾ ॥ ವ್ಯಾಸನಕೆರೆ ಪ್ರಭಂಜನಾಚಾರ್ಯ ೨೫
೯. ವಿಚಿತ್ರಪ್ರಸಂಗಗಳು - ವಿಪ್ರ ೨೮

೧೦. ತೇನ ತೃಣಮಪಿ ಚಲತಿ - ಸಂಗ್ರಹ : ಸುದರ್ಶನ ೨೯
೧೦. ಲಕ್ಷ್ಮೀ ಪಂಚರತ್ನಾವತಂಸಕಮ್ ೩೦
೧೧. ದ್ವೈತವೇದಾಂತಗ್ರಂಥಸೂಚೀ - ಡಾ || ವ್ಯಾಸನಕೆರೆ ಪ್ರಭಂಜನಾಚಾರ್ಯ ೩೧
೧೨. ಸರ್ವಧಾರಿಸಂವತ್ಸರದ ಸ್ಥೂಲಮಾಹಿತಿ - ಡಾ|| ವಿ. ಪ್ರಭಂಜನಾಚಾರ್ಯ ೩೩
೧೩. ಚೈತ್ರಮಾಸದ ವಿಶೇಷದಿನಗಳು ೪೦
೧೫. ಪ್ರಶ್ನೆ ಉತ್ತರ ೪೪

## ಮೇ ೨೦೦೮

೧. ಶ್ರೀವ್ಯಾಸಸೂಕ್ತಿ - ಶ್ರೀಮಧ್ವಸೂಕ್ತಿ ೧
೨. ಹರಿದಾಸರ ಸೂಕ್ತಿರತ್ನಗಳು ೩
೪. ಶ್ರೀವಿದ್ಯಾಮಾನ್ಯರ ಸಂದೇಶ ೪
೩. ಶ್ರೀವಿದ್ಯಾಮಾನ್ಯ ಗುರುನಮನ - ಶ್ರೀಶ್ರೀ ವಿದ್ಯಾಧೀಶತೀರ್ಥಶ್ರೀಪಾದರು ೫
೩. ನಾರಾಯಣ ನರೋತ್ತಮರ ಮಧ್ಯೆ ನರ ಏಕೆ?
- ಶ್ರೀಶ್ರೀ ವಿದ್ಯೇಶತೀರ್ಥಶ್ರೀಪಾದರು ೧೧
೪. ಸಂಪಾದಕೀಯ ೧೭
೫. ಅನುಸಂಧಾನ ಮತ್ತು ಮಧ್ವಸಿದ್ಧಾಂತ - ಶ್ರೀಸಗ್ರಿ ರಾಘವೇಂದ್ರ ಉಪಾಧ್ಯಾಯ ೧೯
೬. ದ್ವೈತವೇದಾಂತಗ್ರಂಥಸೂಚೀ - ಡಾ|| ವ್ಯಾಸನಕೆರೆ ಪ್ರಭಂಜನಾಚಾರ್ಯ ೨೨
೭. ಗ್ರಂಥವಿಮರ್ಶೆ ೨೬
೮. ಪಂಚಮುಖಿ ಆಂಜನೇಯ - ಡಾ || ಎಸ್. ಹನುಮಂತ ಜೋಯಿಸ್ ೨೮
೯. ಕೂರ್ಮಾವತಾರದ ಹಿರಿಮೆ - ಡಾ|| ವ್ಯಾಸನಕೆರೆ ಪ್ರಭಂಜನಾಚಾರ್ಯ ೩೦
೧೦. ಶ್ರೀವೇದವ್ಯಾಸರೂಪದ ವೈಭವ - ಡಾ|| ವ್ಯಾಸನಕೆರೆ ಪ್ರಭಂಜನಾಚಾರ್ಯ ೩೨
೧೧. ಶ್ರೀನರಸಿಂಹ ವೈಭವ – ಡಾ || ವ್ಯಾಸನಕೆರೆ ಪ್ರಭಂಜನಾಚಾರ್ಯ ೪೧
೧೨. ಮಾಸದ ವಿಶೇಷಗಳು ೪೨
೧೩. ಪ್ರಶ್ನೆ ಉತ್ತರ ೪೭

## ಜೂನ್ ೨೦೦೮

೧. ಶ್ರೀವ್ಯಾಸಸೂಕ್ತಿ - ಶ್ರೀಮಧ್ವಸೂಕ್ತಿ ೧
೨. ಹರಿದಾಸಸೂಕ್ತಿ ೩
೩. ರಾಮಾಮೃತಮಹಾರ್ಣವದಲ್ಲಿ ತಪ್ತಮುದ್ರಾಧಾರಣ : ಶ್ರೀಸತ್ಯಾತ್ಮತೀರ್ಥರು ೪
೪. ಸೂತ್ರಾಕಾರಃ : ಶ್ರೀವಿದ್ಯಾಧೀಶತೀರ್ಥರು ೧೩
೫. ನರಸಿಂಹನಿಗೆ ಕೋಪವೇ? : ಶ್ರೀವಿದ್ಯೇಶತೀರ್ಥರು ೧೫



೬. ಅನುಗ್ರಹಸಂದೇಶ : ಶ್ರೀವಿಶ್ವಪ್ರಸನ್ನತೀರ್ಥರು ೧೭
೭. ಸಂಪಾದಕೀಯ ೧೯
೮. ಶೌಚಾಚಾರದಲ್ಲಿ ಅನುಸಂಧಾನ : ಸಗ್ರಿ ರಾಘವೇಂದ್ರ ಉಪಾಧ್ಯಾಯ ೨೧
೯. ಚಾತುರ್ಮಾಸ್ಯ ವ್ರತ : ವಿಪ್ರ ೨೪
೧೦. ಶ್ರೀಶ್ರೀಪಾದರಾಜರ ವೈಭವ : ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ ೨೭
೧೧. ಶ್ರೀವಿಜಯೀಂದ್ರರ ಅಪೂರ್ವ ಕೃತಿಗಳು : ಡಾ. ವಿ. ಪ್ರಭಂಜನಾಚಾರ್ಯ ೩೦
೧೨. ರಾಮಾಮೃತಮಹಾರ್ಣವ : ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ ೩೩
೧೩. ಶ್ರೀವಾದೀಂದ್ರತೀರ್ಥರು : ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ ೩೫
೧೪. ಪ್ರತಿಕ್ರಿಯೆ ಲೇಖನವಿಮರ್ಶೆ : ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ ೩೬
೧೫. ದ್ವೈತವೇದಾಂತಗ್ರಂಥಸೂಚಿ : ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ ೩೭
೧೬. ಗಂಗಾದ್ವಾದಶನಾಮಸ್ತೋತ್ರ ೪೦
೧೪. ಮಾಸದ ವಿಶೇಷದಿನಗಳು : ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ ೪೨
೧೬. ಪ್ರಶ್ನೆ - ಉತ್ತರ : ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ ೪೫

## ಜುಲೈ ೨೦೦೮

೧. ಶ್ರೀವ್ಯಾಸಸೂಕ್ತಿ - ಶ್ರೀಮಧ್ವಸೂಕ್ತಿ ೧
೨. ಹರಿದಾಸರ ಸೂಕ್ತಿರತ್ನಗಳು ೩
೩. ಸೂತ್ರಾಕಾರಃ : ಶ್ರೀವಿದ್ಯಾಧೀಶತೀರ್ಥರು ೪
೪. ಭಗವಂತನ ಕ್ರೋಧವು ಕ್ಷಮಾಸ್ವರೂಪ ಹೇಗೆ? : ಶ್ರೀವಿದ್ಯೇಶತೀರ್ಥರು ೬
೫. ಜಗನ್ನಿಯಾಮಕ ಶ್ರೀಹರಿ : ಶ್ರೀವಿಶ್ವಪ್ರಸನ್ನತೀರ್ಥರು ೮
೬. ಸಂಪಾದಕೀಯ ೯
೭. ಸ್ನಾನಕಾಲದ ಅನುಸಂಧಾನ : ಸಗ್ರಿರಾಘವೇಂದ್ರ ಉಪಾಧ್ಯಾಯ ೧೨
೮. ಸೂರ್ಯಗ್ರಹಣ ಚಂದ್ರಗ್ರಹಣಗಳು ೧೫
೯. ಗ್ರಹಣಕಾಲದ ವಿಶೇಷನಿಯಮಗಳು : ಡಾ || ವ್ಯಾಸನಕೆರೆ ಪ್ರಭಂಜನಾಚಾರ್ಯ ೧೭
೧೦. ವಿಷ್ಣುವಿಗೆ ಪವಿತ್ರಾರೋಪಣದ ವಿಶೇಷ : ಡಾ||ವ್ಯಾಸನಕೆರೆ ಪ್ರಭಂಜನಾಚಾರ್ಯ ೧೯
೧೧. ತಪ್ತಮುದ್ರಾಧಾರಣೆಯ ಮಹತ್ತ್ವ : ಡಾ || ವ್ಯಾಸನಕೆರೆ ಪ್ರಭಂಜನಾಚಾರ್ಯ ೨೦
೧೨. ಸವ್ಯಸಾಚಿ ಶ್ರೀಜಯತೀರ್ಥರು : ಡಾ || ವ್ಯಾಸನಕೆರೆ ಪ್ರಭಂಜನಾಚಾರ್ಯ ೨೨
೧೩. ಶ್ರೀರಘುನಾಥತೀರ್ಥರು : ಡಾ || ವ್ಯಾಸನಕೆರೆ ಪ್ರಭಂಜನಾಚಾರ್ಯ ೨೫
೧೪. ಪ್ರಶ್ನೆ - ಉತ್ತರ ೨೬
೧೫. ಶ್ರೀಶೇಷಚಂದ್ರಿಕಾಚಾರ್ಯರ ಗಂಗಾಸ್ತುತಿ : ಡಾ||ವ್ಯಾ.ಪ್ರಭಂಜನಾಚಾರ್ಯ ೨೭
೧೬ ಚಾತುರ್ಮಾಸ್ಯವ್ರತ : ಡಾ || ವ್ಯಾಸನಕೆರೆ ಪ್ರಭಂಜನಾಚಾರ್ಯ ೩೪

೧೭. ದ್ವೈತವೇದಾಂತಗ್ರಂಥಸೂಚಿ : ಡಾ॥ ವ್ಯಾಸನಕೆರೆ ಪ್ರಭಂಜನಾಚಾರ್ಯ ೩೮
೧೮. ಮಾಸದ ವಿಶೇಷಗಳು ೪೧
೨೦. ನವಪ್ರಕಾಶಿತಮಾಧ್ವಗ್ರಂಥಗಳು ೪೬

## ಆಗಸ್ಟ್ ೨೦೦೮

೧. ಶ್ರೀವ್ಯಾಸಸೂಕ್ತಿ - ಶ್ರೀಮಧ್ವಸೂಕ್ತಿ ೧
೨. ಹರಿದಾಸರ ಸೂಕ್ತಿರತ್ನಗಳು ೩
೩. ಸೂತ್ರಾಕಾರಃ -೩ : ಶ್ರೀವಿದ್ಯಾಧೀಶತೀರ್ಥರು ೪
೪. ನರಸಿಂಹನ ಕ್ರೋಧಾಗ್ನಿಗೆ ಭಸ್ಮೀಭೂತರಾದವರು ಯಾರು?: - ಶ್ರೀವಿದ್ಯೇಶತೀರ್ಥರು ೬
೫. ಸನ್ನ್ಯಾಸೇ ಪ್ರೀತಿಃ : ಶ್ರೀವಿಶ್ವಪ್ರಸನ್ನತೀರ್ಥಶ್ರೀಪಾದರು ೮
೬. ಸಂಪಾದಕೀಯ ೯
೭. ಸ್ನಾನಮಂತ್ರಗಳ ಅನುಸಂಧಾನ : ಸಗ್ರಿ ರಾಘವೇಂದ್ರ ಉಪಾಧ್ಯಾಯ ೧೨
೮. ಮಂತ್ರಾಲಯದ ಮಹಾಮುನಿ ರಾಘವೇಂದ್ರತೀರ್ಥರು : ವಿ.ಪ್ರ. ೧೫
೯. ಜಗನ್ನಾಥದಾಸರ ೧೯೯ನೆಯ ಪುಣ್ಯದಿನ ೧೮
೧೦. ಶ್ರೀಕೃಷ್ಣಜಯಂತೀ ವ್ರತ : ಡಾ॥ ವ್ಯಾಸನಕೆರೆ ಪ್ರಭಂಜನಾಚಾರ್ಯ ೧೯
೧೧. ಶ್ರೀಕೃಷ್ಣಾಷ್ಟಮಿಯಂದು ಮಧ್ಯರಾತ್ರಿ ಫಲಾಹಾರನಿಷಿದ್ಧ : ವಿ.ಪ್ರ. ೨೨
೧೩. ಶ್ರೀಕೃಷ್ಣಾಷ್ಟಮೀ ವ್ರತದ ಮಹಿಮೆ : ಡಾ॥ ವ್ಯಾಸನಕೆರೆ ಪ್ರಭಂಜನಾಚಾರ್ಯ ೨೩
೧೪. ಗಣೇಶನ ಹಿರಿಮೆ : ಡಾ॥ ವ್ಯಾಸನಕೆರೆ ಪ್ರಭಂಜನಾಚಾರ್ಯ ೨೬
೧೫. ಋಷಿಪಂಚಮೀ ವ್ರತ : ಡಾ॥ ವ್ಯಾಸನಕೆರೆ ಪ್ರಭಂಜನಾಚಾರ್ಯ ೩೧
೧೬. ಬಲರಾಮಜಯಂತಿ, ಧನ್ವಂತರಿಜಯಂತಿ, ವರಾಹಜಯಂತಿ : ವಿ.ಪ್ರ. ೩೨
೧೭. ಮಾಸದ ವಿಶೇಷಗಳು ೩೬
೧೮. ಪ್ರಸನ್ನವೇಂಕಟದಾಸರ ಒಂದು ಕೃತಿ : ಡಾ॥ ವ್ಯಾಸನಕೆರೆ ಪ್ರಭಂಜನಾಚಾರ್ಯ ೩೯
೨೦. ಧಾರ್ಮಿಕ ಪ್ರಶ್ನೆ-ಉತ್ತರ ೪೩

## ಸೆಪ್ಟಂಬರ್ ೨೦೦೮

೧. ಶ್ರೀವ್ಯಾಸಸೂಕ್ತಿ - ಶ್ರೀಮಧ್ವಸೂಕ್ತಿ ೧
೨. ಹರಿದಾಸರ ಸೂಕ್ತಿರತ್ನಗಳು ೩
೩. ಸೂತ್ರಾಕಾರಃ : ಶ್ರೀವಿದ್ಯಾಧೀಶತೀರ್ಥರು ೪
೪. ನರಸಿಂಹ - ವೇದವ್ಯಾಸ : ಶ್ರೀವಿದ್ಯೇಶತೀರ್ಥರು ೬
೫. ಬ್ರಹ್ಮಪುತ್ರಂ ನತಾಸ್ಮಿ : ಶ್ರೀವಿಶ್ವಪ್ರಸನ್ನತೀರ್ಥರು ೮



೬. ಸಂಪಾದಕೀಯ ೯
೭. ಪುರುಷಸೂಕ್ತದಿಂದ ಅನುಸಂಧಾನ : ಸಗ್ರಿ ರಾಘವೇಂದ್ರ ಉಪಾಧ್ಯಾಯ ೧೩
೮. ಪಿತೃಯಜ್ಞದ ಮಹತ್ವ : ಡಾ॥ ವ್ಯಾಸನಕೆರೆ ಪ್ರಭಂಜನಾಚಾರ್ಯ ೧೭
೯. ಮಾಸದ ವಿಶೇಷದಿನಗಳ ಬಗ್ಗೆ ಕೆಲವು ವಿವರಗಳು : ವಿಪ್ರ ೨೧
೧೦. ಸಜ್ಜನರ ಪ್ರಮುಖ ಲಕ್ಷಣಗಳು : ಡಾ॥ ವ್ಯಾಸನಕೆರೆ ಪ್ರಭಂಜನಾಚಾರ್ಯ ೩೧
೧೧. ಮಾಸದವಿಶೇಷಗಳು ೩೫
೧೨. ದ್ವೈತವೇದಾಂತಗ್ರಂಥಸೂಚೀ ೩೮
೧೩. ಶ್ರೀರಾಜೇಂದ್ರತೀರ್ಥರ ಅಪೂರ್ವಶ್ಲೋಕ ೪೨
೧೫. ಧಾರ್ಮಿಕ ಪ್ರಶ್ನೆ - ಉತ್ತರ ೪೪
೧೬. ಗ್ರಂಥವಿಮರ್ಶೆ ೪೫

## ಅಕ್ಟೋಬರ್ ೨೦೦೮

೧. ಶ್ರೀವ್ಯಾಸಸೂಕ್ತಿ - ಶ್ರೀಮಧ್ವಸೂಕ್ತಿ ೧
೨. ಹರಿದಾಸರ ಸೂಕ್ತಿರತ್ನಗಳು ೩
೩. ಸೂತ್ರಾಕಾರಃ : ಶ್ರೀವಿದ್ಯಾಧೀಶತೀರ್ಥರು ೪
೪. ನರಸಿಂಹ - ವೇದವ್ಯಾಸ : ಶ್ರೀವಿದ್ಯೇಶತೀರ್ಥರು ೬
೫. ಮತ್ತಃ ಪರತರಮ್ : ಶ್ರೀವಿಶ್ವಪ್ರಸನ್ನತೀರ್ಥರು ೧೦
೬. ಸಂಪಾದಕೀಯ ೧೧
೭. ಆಪ್ಯಸೂಕ್ತಾದಿಗಳ ಅನುಸಂಧಾನ : ಸಗ್ರಿ ರಾಘವೇಂದ್ರ ಉಪಾಧ್ಯಾಯ ೧೪
೮. ಮಾಸದ ವಿಶೇಷದಿನಗಳ ಬಗ್ಗೆ ಕೆಲವು ವಿವರಗಳು ೧೯
೯. ಶ್ರೀವಿಜಯದಾಸರು : ಡಾ॥ ಪ್ರಭಂಜನಾಚಾರ್ಯ ವ್ಯಾಸನಕೆರೆ ೨೬
೧೦. ಮಾಸದವಿಶೇಷಗಳು ೨೮
೧೧. ಮಧ್ವಾಚಾರ್ಯ ಫಾರ್ ಯೂತ್ - ಕಾರ್ಯಾಗಾರದ ವಿವರ ೩೧

## ನವೆಂಬರ್ ೨೦೦೮

೧. ಶ್ರೀವ್ಯಾಸಸೂಕ್ತಿ - ಶ್ರೀಮಧ್ವಸೂಕ್ತಿ ೧
೨. ಹರಿದಾಸರ ಸೂಕ್ತಿರತ್ನಗಳು ೩
೩. ಸೂತ್ರಾಕಾರಃ : ಶ್ರೀವಿದ್ಯಾಧೀಶತೀರ್ಥರು ೪
೪. ನರಸಿಂಹ - ವೇದವ್ಯಾಸ : ಶ್ರೀವಿದ್ಯೇಶತೀರ್ಥರು ೬
೫. ಮತ್ತಃ ಪರತರಂ : ಶ್ರೀವಿಶ್ವಪ್ರಸನ್ನತೀರ್ಥರು ೧೧
೬. ಸಂಪಾದಕೀಯ ೧೨
೭. ಊರ್ಧ್ವಪುಂಡ್ರಗಳ, ಪಂಚಮುದ್ರೆಗಳ ಧಾರಣೆಯ ಅನುಸಂಧಾನ ೧೩

| | | |
|---|---|---|
| ೮. | ವರ್ಕಾಡಿಯ ಶ್ರೀವಿಷ್ಣುಮೂರ್ತಿ ದೇವಸ್ಥಾನ | ೧೬ |
| ೯. | ಶ್ರೀಕನಕದಾಸರ ಹಿರಿಮೆ : ಡಾ|| ವ್ಯಾಸನಕೆರೆ ಪ್ರಭಂಜನಾಚಾರ್ಯ | ೧೯ |
| ೧೦. | ಶ್ರೀಪದ್ಮನಾಭತೀರ್ಥರು : ಡಾ|| ವ್ಯಾಸನಕೆರೆ ಪ್ರಭಂಜನಾಚಾರ್ಯ | ೨೨ |
| ೧೧. | ಧನುರ್ಮಾಸದ ಮಹಿಮೆ | ೩೬ |
| ೧೨. | ಮಾಸದ ವಿಶೇಷಗಳು | ೪೦ |
| ೧೪. | ಗ್ರಂಥಪರಿಚಯ | ೪೩ |

ರಕ್ಷಾಪುಟ ೧. ಶ್ರೀವಿಷ್ಣುಮೂರ್ತಿ - ವರ್ಕಾಡಿ

ರಕ್ಷಾಪುಟ ೨. ಶ್ರೀವಿಜಯದಾಸರ ಕಟ್ಟೆ, ಚಿಪ್ಪಗಿರಿ (ಚಿತ್ರ – ದಿ|| ಕೆ.ಜಿ. ಹಲಸಗಿ, ಧಾರವಾಡ)

ರಕ್ಷಾಪುಟ ೪. : ಕೋಣನ ತೂಬು, ವ್ಯಾಸಸಮುದ್ರ


## ಡಿಸೆಂಬರ್ ೨೦೦೮


| | | |
|---|---|---|
| ೧. | ಶ್ರೀವ್ಯಾಸಸೂಕ್ತಿ - ಶ್ರೀಮಧ್ವಸೂಕ್ತಿ | ೧ |
| ೨. | ಹರಿದಾಸರ ಸೂಕ್ತಿರತ್ನಗಳು | ೩ |
| ೩. | ಸೂತ್ರಾಕಾರಃ : ಶ್ರೀವಿದ್ಯಾಧೀಶತೀರ್ಥರು | ೪ |
| ೪. | ನರಸಿಂಹ - ವೇದವ್ಯಾಸ : ಶ್ರೀವಿದ್ಯೇಶತೀರ್ಥರು | ೬ |
| ೫. | ಗುರುಗಳು : ಶ್ರೀವಿಶ್ವಪ್ರಸನ್ನತೀರ್ಥರು | ೮ |
| ೬. | ಸಂಪಾದಕೀಯ : | ೯ |
| ೭. | ಆಚಮನದ ಅನುಸಂಧಾನ : ಸಗ್ರಿ ರಾಘವೇಂದ್ರ ಉಪಾಧ್ಯಾಯ | ೧೨ |
| ೮. | ಸಂಗ್ರಹರಾಮಾಯಣ : ಡಾ|| ವ್ಯಾಸನಕೆರೆ ಪ್ರಭಂಜನಾಚಾರ್ಯ | ೧೫ |
| ೯. | ಸಂಧ್ಯಾವಂದನೆಯಿಂದ ಅನಾರೋಗ್ಯಪರಿಹಾರ: ಡಾ|| ಪ್ರಭಂಜನಾಚಾರ್ಯ | ೧೯ |
| ೧೦. | ವಾದಕೋವಿದರಾದ ಅಕ್ಷೋಭ್ಯತೀರ್ಥರು : ಡಾ|| ಪ್ರಭಂಜನಾಚಾರ್ಯ | ೨೦ |
| ೧೧. | ಅಕ್ಷೋಭ್ಯತೀರ್ಥವಿರಚಿತ ವೇದಸಾರ | ೨೬ |
| ೧೨. | ಸಾಧನಾಕೃತಿಯಾಗಿ ಸಂಗ್ರಹರಾಮಾಯಣ: ಸಗ್ರಿ ರಾಘವೇಂದ್ರಉಪಾಧ್ಯಾಯ | ೨೮ |
| ೧೩. | ಮಾಸದ ವಿಶೇಷಗಳು | ೩೧ |
| ೧೪. | ಸಾಧನಾವಲೋಕನ : ಸಗ್ರಿ ರಾಘವೇಂದ್ರ ಉಪಾಧ್ಯಾಯ | ೩೩ |
| ೧೫. | ದ್ವೈತವೇದಾಂತಗ್ರಂಥಸೂಚೀ : ಡಾ|| ವ್ಯಾಸನಕೆರೆ ಪ್ರಭಂಜನಾಚಾರ್ಯ | ೩೮ |
| ೧೬. | ಶ್ರೀಹರಿವಾಯುಸ್ತುತಿ | ೪೦ |


## ಜನವರಿ ೨೦೦೯


| | | |
|---|---|---|
| ೧. | ಶ್ರೀವ್ಯಾಸಸೂಕ್ತಿ - ಶ್ರೀಮಧ್ವಸೂಕ್ತಿ | ೧ |
| ೨. | ಹರಿದಾಸರ ಸೂಕ್ತಿರತ್ನಗಳು | ೩ |
| ೩. | ಸೂತ್ರಾಕಾರಃ : ಶ್ರೀವಿದ್ಯಾಧೀಶತೀರ್ಥರು | ೪ |





| | | |
|---|---|---|
| ೪. | ಮಧ್ವ - ನರಸಿಂಹ : ಶ್ರೀವಿದ್ಯೇಶತೀರ್ಥರು | ೭ |
| ೫. | ಗುರುದ್ವಾರಾ : ಶ್ರೀವಿಶ್ವಪ್ರಸನ್ನತೀರ್ಥರು | ೧೧ |
| ೬. | ಸಂಪಾದಕೀಯ | ೧೨ |
| ೭. | ಪ್ರಾಣಾಯಾಮದ ಅನುಸಂಧಾನ : ಸಗ್ರಿ ರಾಘವೇಂದ್ರ ಉಪಾಧ್ಯಾಯ | ೧೫ |
| ೮. | ಪ್ರತಿಕ್ರಿಯೆ (ವಿದೇಶಗಮನದ ಬಗ್ಗೆ) : ಸಗ್ರಿ ರಾಘವೇಂದ್ರ ಉಪಾಧ್ಯಾಯ | ೧೯ |
| ೯. | ಶ್ರೀಮಧ್ವಾಚಾರ್ಯರು ಮತ್ತು ಅವರ ಕೃತಿಗಳು: ಡಾ|| ವಿ. ಪ್ರಭಂಜನಾಚಾರ್ಯ | ೨೪ |
| ೧೦. | ಶ್ರೀನರಹರಿತೀರ್ಥರು : ಡಾ || ವ್ಯಾಸನಕೆರೆ ಪ್ರಭಂಜನಾಚಾರ್ಯ | ೨೭ |
| ೧೧. | ಶ್ರೀಪುರಂದರದಾಸರು : ಡಾ || ವ್ಯಾಸನಕೆರೆ ಪ್ರಭಂಜನಾಚಾರ್ಯ | ೩೦ |
| ೧೨. | ಶ್ರೀಗೋಪಾಲದಾಸರು : ಡಾ || ವ್ಯಾಸನಕೆರೆ ಪ್ರಭಂಜನಾಚಾರ್ಯ | ೩೩ |
| ೧೩. | ಪುಷ್ಯಕೃಷ್ಣ ಏಕಾದಶೀ ವಿಚಾರ | ೩೫ |
| ೧೪. | ಸೂರ್ಯಗ್ರಹಣ | ೩೬ |
| ೧೫. | ಮಾಸದ ವಿಶೇಷಗಳು | ೩೯ |
| ೧೬. | ದ್ವೈತವೇದಾಂತಗ್ರಂಥಸೂಚೀ | ೪೨ |
| ೧೮. | ಶ್ರೀವಿಶ್ವೇಶ್ವರತೀರ್ಥರ ಐತರೇಯಟೀಕೆಗೆ ಒಂದು ಟಿಪ್ಪಣಿ | ೪೬ |


## ಫೆಬ್ರವರಿ ೨೦೦೯


| | | |
|---|---|---|
| ೧. | ಶ್ರೀವ್ಯಾಸಸೂಕ್ತಿ - ಶ್ರೀಮಧ್ವಸೂಕ್ತಿ | ೧ |
| ೨. | ಹರಿದಾಸರ ಸೂಕ್ತಿರತ್ನಗಳು | ೩ |
| ೩. | ಸೂತ್ರಾಕಾರಃ : ಶ್ರೀವಿದ್ಯಾಧೀಶತೀರ್ಥರು | ೪ |
| ೪. | ಮಧ್ವ-ನರಸಿಂಹ : ಶ್ರೀವಿದ್ಯೇಶತೀರ್ಥರು | ೭ |
| ೫. | ಜೀವನ: ಶ್ರೀವಿಶ್ವಪ್ರಸನ್ನತೀರ್ಥರು | ೧೦ |
| ೬. | ಸಂಪಾದಕೀಯ | ೧೧ |
| ೭. | ಸಂಕಲ್ಪದ ಅನುಸಂಧಾನ: ಶ್ರೀ ಸಗ್ರಿ ರಾಘವೇಂದ್ರ ಉಪಾಧ್ಯಾಯ | ೧೫ |
| ೮. | ಕೈಲಾಸವಾಸ ಗೌರೀಶ ಈಶ: ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ | ೧೯ |
| ೯. | ಶ್ರೀವಿಷ್ಣುತೀರ್ಥರು: ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ | ೨೪ |
| ೧೦. | ಹರಿಪದವನ್ನೈದಿದ ಶ್ರೀರಘುಪ್ರಿಯತೀರ್ಥರು | ೩೫ |
| ೧೧. | ಮುಖಪುಟಚಿತ್ರದ ಲೇಖನ: ಡಾ. ಎಸ್. ಹನುಮಂತ ಜೋಯಿಸ್ | ೩೬ |
| ೧೨. | ದ್ವೈತವೇದಾಂತಗ್ರಂಥಸೂಚೀ: ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ | ೩೭ |
| ೧೩. | ವಿದೇಶ ಗಮನಾಗಮನ: ಶ್ರೀ ಬನ್ನೂರು ರಾಮಚಂದ್ರ ರಾವ್ | ೪೦ |
| ೧೪. | ಮಾಸದ ವಿಶೇಷಗಳು | ೪೪ |


* * * * *

# ಸಂತೇಬೆನ್ನೂರಿನ ಸ್ವಯಂವ್ಯಕ್ತ ಶ್ರೀರಾಮದೇವರು

## (ರಕ್ಷಾಪುಟ ೨ರಲ್ಲಿನ ಚಿತ್ರದ ಬಗ್ಗೆ ಲೇಖನ)

**– ಡಾ. ಎಸ್. ಹನುಮಂತ ಜೋಯಿಸ್, ಸಾಗರ**

ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಹೋಬಳಿಯಾದ ಸಂತೇಬೆನ್ನೂರಿನಲ್ಲಿ ಸ್ವಯಂ ವ್ಯಕ್ತ ಶ್ರೀ ರಾಮದೇವರ ಮೂರ್ತಿಯಿರುವ ದೇವಾಲಯವಿದೆ. ಶತಮಾನಗಳ ಹಿಂದಿನಿಂದಲೂ ಈ ದೇವರ ಮೂರ್ತಿಯು ಯಾರಿಗೂ ಗೋಚರವಾಗಿರಲಿಲ್ಲವಂತೆ. ಸುಮಾರು ೮೦ವರ್ಷಗಳ ಹಿಂದಿನ ವಿಚಾರ, ಈ ಪ್ರಾಂತ್ಯದಲ್ಲಿ ವಿದ್ಯಾ ಇಲಾಖೆಯಲ್ಲಿ ತನಿಖಾಧಿಕಾರಿಯಾಗಿದ್ದ ಎನ್. ವೆಂಕಟರಾವ್ (ಮೈಸೂರಿನವರು) ರವರಿಗೆ, ಶ್ರೀರಾಯರು ಸ್ವಪ್ನದ ಮೂಲಕ ಶ್ರೀದೇವರ ವಿಗ್ರಹವನ್ನು ತೋರಿಸಿ, ಅದಕ್ಕೆ ದೇವಾಲಯವನ್ನು ನಿರ್ಮಾಣಮಾಡಲು ಸ್ವಪ್ನಾದೇಶವನ್ನು ಮಾಡಿದರಂತೆ. ಅದರ ಪ್ರಕಾರ ಶ್ರೀಯುತರು ಆ ಊರಿನ ನಾಡಿಗ ಮನೆತನದ ಪದ್ಮನಾಭರಾವ್, ಗೋವಿಂದರಾವ್, ಶೇಷಗಿರಿರಾವ್, ಸಂಜೀವರಾವ್, ಚನ್ನಗಿರಿಯ ನಾರಾಯಣ ಜೋಯಿಸ್, ಎಂಬವರ ನೇತೃತ್ವದಲ್ಲಿ ಹಲವು ದಾನಿಗಳ ಸಹಾಯದಿಂದ ಈ ದೇವಾಲಯವನ್ನು ನಿರ್ಮಾಣಮಾಡಿಸಿದರಂತೆ. ಅನಂತರ ಶ್ರೀ ಪುತ್ತಿಗೆ ಮಠದ ಶ್ರೀಶ್ರೀಸುಧೀಂದ್ರತೀರ್ಥರನ್ನು ಆಹ್ವಾನಿಸಿ, ಅವರ ಅಮೃತಹಸ್ತದಿಂದ ಶ್ರೀದೇವರ ಮೂರ್ತಿಯನ್ನು ಪಂಚರಾತ್ರಾಗಮರೀತ್ಯಾ ಪುನಃಪ್ರತಿಷ್ಠೆ ಮಾಡಿಸಿದ-ರೆಂದೂ ಅವರೇ ಸ್ವಹಸ್ತದಿಂದ ಬರೆದ ಪತ್ರ (ದಿನಾಂಕ ೧-೨-೧೯೩೩)ದಿಂದ ತಿಳಿದು ಬರುತ್ತದೆ. ಈ ಪತ್ರವು ಸಂಶೋಧಕ ಸಂತೇಬೆನ್ನೂರ್ ಸುಮತೀಂದ್ರ ನಾಡಿಗ್‌ರವರ ಸಂಗ್ರಹದಲ್ಲಿದೆ.

ಈ ದೇವಾಲಯವು ಸಾಧಾರಣವಾಗಿದ್ದು ಯಾವುದೇ ವಿಧವಾದ ಭವ್ಯವಾದ ಕೆತ್ತನೆಗಳಿರುವುದಿಲ್ಲ. ಇಲ್ಲಿ ಮುಖ-ಮಂಟಪ, ಸುಕನಾಸೀ ಮತ್ತು ಶ್ರೀದೇವರಿರುವ ಗರ್ಭಗುಡಿ ಇದೆ. ಇದು ಈ ಪ್ರಾಂತ್ಯದವರ ಆರಾಧ್ಯದೇವರು.

ಪ್ರತಿವರ್ಷ ಶ್ರೀರಾಮನವಮಿಯಂದು ಶ್ರೀಸ್ವಾಮಿಯ ಬ್ರಹ್ಮರಥೋತ್ಸವವು ನಡೆಯುತ್ತದೆ. ಆ ದಿನ ಸಹಸ್ರಾರು ಜನರು ಭಾಗವಹಿಸಿ ಆತನ ಕೃಪೆಗೆ ಪಾತ್ರರಾಗುತ್ತಾರೆ.

* * * * *



# ಶ್ರೀವ್ಯಾಸರಾಜರು ಮತ್ತು ಅವರ ಕೃತಿಗಳು

## (೧೪-೦೩-೨೦೦೯ರಂದು ಶ್ರೀವ್ಯಾಸರಾಜರ ಆರಾಧನಾ ನಿಮಿತ್ತ ಲೇಖನ)

**ಡಾ || ವ್ಯಾಸನಕೆರೆ ಪ್ರಭಂಜನಾಚಾರ್ಯ**

## ಶ್ರೀವ್ಯಾಸರಾಜರ ಕೃತಿಗಳು

ಶ್ರೀವ್ಯಾಸರಾಜರು ವ್ಯಾಸಸಾಹಿತ್ಯ ಹಾಗೂ ದಾಸಸಾಹಿತ್ಯ ಎರಡನ್ನೂ ಸಹ ಅಪಾರವಾಗಿ ಶ್ರೀಮಂತವಾಗಿಸಿದ ಶ್ರೇಷ್ಠ ಗ್ರಂಥಕಾರರು. ವ್ಯಾಸಸಾಹಿತ್ಯದ ಕೃತಿಗಳ ಸಂಖ್ಯೆಯನ್ನು ನಿಖರವಾಗಿ ತಿಳಿಸುವ ಯಾವ ದಾಖಲೆಯೂ ಇಲ್ಲ. ಶ್ರೀವ್ಯಾಸರಾಜಗ್ರಂಥಮಾಲಿಕಾ ಎಂಬ ಕೃತಿಯಲ್ಲಿ ಅವರ ಕೆಲವು ಗ್ರಂಥಗಳ ಉಲ್ಲೇಖವಿದ್ದರೂ ಅದು ಸರ್ವಸಂಗ್ರಾಹಕವೆನಿಸುವ ಕೃತಿಯೇನಲ್ಲ. ಸದ್ಯ ತಿಳಿದಿರುವಂತೆ ಅವರು ರಚಿಸಿರುವ ಕೃತಿಗಳ ವಿವರ ಹೀಗಿದೆ:

೧. ತಾತ್ಪರ್ಯಚಂದ್ರಿಕಾ
೨. ನ್ಯಾಯಾಮೃತ
೩. ತರ್ಕತಾಂಡವ
೪. ಉಪಾಧಿಖಂಡನ ಮಂದಾರಮಂಜರೀ
೫. ಮಾಯಾವಾದಖಂಡನಮಂದಾರಮಂಜರೀ
೬. ಪ್ರಪಂಚಮಿಥ್ಯಾತ್ವಾನುಮಾನಖಂಡನಮಂದಾರಮಂಜರೀ
೭. ತತ್ವವಿವೇಕಮಂದಾರಮಂಜರೀ
೮. ಭೇದೋಜ್ಜೀವನ
೯. ಗ್ರಂಥಮಾಲಿಕಾಸ್ತೋತ್ರ
೧೦. ಪ್ರಮೇಯನವಮಾಲಿಕಾ
೧೧. ಶ್ರೀನಿವಾಸಸ್ತೋತ್ರ
೧೨. ಶ್ರೀಕೃಷ್ಣಮಂಗಲಾಷ್ಟಕ
೧೩. ಶ್ರೀಯಂತ್ರೋದ್ಧಾರಕಸ್ತೋತ್ರ
೧೪. ಶಿವಸ್ತುತಿ
೧೫. ಶ್ರೀಪಾದರಾಜಪಂಚರತ್ನಮಾಲಿಕಾ
೧೬. ಶ್ರೀಬ್ರಹ್ಮಣ್ಯತೀರ್ಥಪಂಚರತ್ನಮಾಲಿಕಾ ಸ್ತೋತ್ರಮ್
೧೭. ಹನುಮತ್ಸಂಪ್ರೋಕ್ಷಣವಿಧಿ.
೧೮. ವಾಯುಸ್ತುತಿ ಪುರಶ್ಚರಣಪದ್ಧತಿ.

ವ್ಯಾಸರಾಜರ ಮಹತ್ತ್ವವನ್ನು ಸ್ವತಃ ಶ್ರೇಷ್ಠ ಅದ್ವೈತವಿದ್ವಾಂಸರಾಗಿದ್ದ ಅನಂತಕೃಷ್ಣಶಾಸ್ತ್ರಿಗಳು ಪರಿಪರಿಯಾಗಿ ಕೊಂಡಾಡಿ ವ್ಯಾಸತೀರ್ಥರ ಪರಮಪೂಜ್ಯತ್ವವನ್ನು ಮುಕ್ತಕಂಠದಿಂದ ಹೊಗಳಿರುವರು:

-ದ್ವೈತಾದ್ವೈತವಾದಪ್ರಸ್ಥಾನಪ್ರಸಂಗೇನ ತತ್ರ ತತ್ರ ನ್ಯಾಯಮಕರಂದಚಿತ್ಸುಖೀಪ್ರಮಾಣ-ಮಾಲಾದ್ವೈತದೀಪಿಕಾದಿಗ್ರಂಥೇಷು ವಿಶಕಲಿತತಯಾ ಉಪಲಭ್ಯಮಾನಾನಾಂ ಖಂಡನ-ಮಂಡನಾದಿಪ್ರಸಂಗೇನೋಟ್ಟಂಕಿತಾನಾಂ ಪ್ರಕ್ರಿಯಾವಿಶೇಷಾಣಾಂ ಏಕತ್ರ ಸಂಕಲನೇನ, ವಿನೈವ ಕಲಂಕಂ ತತ್ತನ್ಮತಪ್ರಕ್ರಿಯಾವಿಶೇಷಾಣಾಮತಿಗಂಭೀರಯಾ ಪ್ರಣಾಲ್ಯಾ ಸರಲಸರಲಯೋಪ-ಪಾದನೇನ ಶ್ರೀವ್ಯಾಸತೀರ್ಥಾ ಏವ ನ್ಯಾಯಾಮೃತಕಾರಾ ಮೂಲಾಚಾರ್ಯಾ ಇತಿ ನೇಯಮತಿಶಯೋಕ್ತಿರಿತಿ ವಯಂ ವಿಶ್ವಸಿಮಃ । ಯನ್ನ ಕೇವಲಂ ದ್ವೈತಿನಃ ಕಿಂತ್ವದ್ವೈತಿನೋಽಪಿ ವಿಮರ್ಶನಕುತೂಹಲಾ ಅಧಮರ್ಣಾ ಏವ ನ್ಯಾಯಾಮೃತಕಾರಾಣಾಂ ಶ್ರೀವ್ಯಾಸರಾಜ-ಮಠಾದಿಪುರುಷಾಣಾಂ ಸರ್ವತಂತ್ರಸ್ವತಂತ್ರಾಣಾಂ ಪರಃಶತನಿಬಂಧನಿರ್ಮಾತೄಣಾಮ್ । ವಿಶ್ವಸಿಮೋ ಯಚ್ಛ್ರೀವ್ಯಾಸತೀರ್ಥಾ ಅನಿತರಸಾಧಾರಣಮಹಿಮಶಾಲಿನಸ್ತೇಜಸ್ವಿನಃ ಸರ್ವ-ವಿದ್ಯಾಧಿಷ್ಠಾನದೇವತಾಃ ಶಾಂತಪ್ರಕೃತಯಶ್ಚ ಯತಿವರ್ಯಾ ಇದಾನೀಮಪಿ ಸ್ವತೇಜಸಾ ಜೀವಂತಿ ಶ್ರೀವ್ಯಾಸರಾಯಮಠಾಸ್ಥಾನೇ, ಯತ್ರ ತತ್ಪೀಠಾಧಿಷ್ಠಾನಮಾತ್ರೇಣ ಬಾಲೋಽಪಿ ಬೃಹಸ್ಪತಿಸಮಾನೋ ಮೂಕೋಽಪಿ ವಾಗ್ಮಿಪ್ರವರೋ ಭವತಿ, ಇತಿ ವಯಮದ್ವೈತಮತಾವ-ಲಂಬಿನೋಽಪಿ ತಚ್ಚರಣಕಮಲಾಶ್ರಯಣಮಾತ್ಮನೋ ಭೂಷಣಮೇವ ಮನ್ಮಹೇ । ಶ್ರೀವ್ಯಾಸರಾಯಮಠಾಧಿಷ್ಠಾನಾಃ ಶ್ರೀವಿಜಯೀಂದ್ರತೀರ್ಥಾದಯೋಽಪಿ ವಿಶ್ವಸಿಮಸ್ತತ್ಪೀಠ-ಮಹಿಮ್ನೈವ ಪರಶ್ಶತನಿಬಂಧನಿಮಾರ್ಮಣೇನ ಲೋಕೋಪಕಾರಮದಧುಃ'' ಇತಿ ॥

## ಶ್ರೀವ್ಯಾಸರಾಜಪ್ರಶಸ್ತಿ

ಹೀಗೆ ವಿಶ್ವತೋಮುಖವಾದ ಸಾಧನೆಯನ್ನು ಮೆರೆದ ಶ್ರೀವ್ಯಾಸರಾಜರದು ದ್ವೈತವೇದಾಂತದ ಇತಿಹಾಸದಲ್ಲಿ ಅತ್ಯಂತ ಪ್ರಮುಖವೆನ್ನಿಸುವ ಸ್ಥಾನ. ಶ್ರೀಮಧ್ವಜಯತೀರ್ಥರ ಅನಂತರದ ಮಹತ್ತರವಾದ ಹಿರಿಮೆ ಅವರದು. ಮಹಾವಿದ್ವಾಂಸರಾಗಿ ಶ್ರೀಶ್ರೀಪಾದರಾಜರಂತಹ ರಸಋಷಿಗಳ ಶಿಷ್ಯವರೇಣ್ಯರಾಗಿ ಕೃಷ್ಣದೇವರಾಜನಂತಹ ಚಕ್ರವರ್ತಿಯ ರಾಜಗುರುಗಳಾಗಿ ಶ್ರೀವಿಜಯೀಂದ್ರರು ಶ್ರೀವಾದಿರಾಜರು ಮೊದಲಾದ ಶಕಪುರುಷರ ಗುರುಗಳಾಗಿ, ಶ್ರೀಪುರಂದರದಾಸರು ಕನಕದಾಸರಂತಹ ಹರಿದಾಸವರೇಣ್ಯರ ದೀಕ್ಷಾ ಗುರುಗಳಾಗಿ, ನ್ಯಾಯಾಮೃತಾದಿ ಉದ್ಗ್ರಂಥಗಳ ನಿರ್ಮಾಪಕರಾಗಿ, ಕುಹುಯೋಗದಂತಹ ಮಹಾವಿಪತ್ತನ್ನು ನಿವಾರಿಸಿದ ಮಹಾತಪಸ್ವಿಗಳಾಗಿ, ಅಸಂಖ್ಯಪ್ರಾಣಪ್ರತೀಕಗಳ ಅಪೂರ್ವಪ್ರತಿಷ್ಠಾಪಕರಾಗಿ, ಶ್ರೀರಂಗ-ದಂತಹ ಪುಣ್ಯಕ್ಷೇತ್ರಗಳಲ್ಲಿನ ಬಗೆಬಗೆಯ ವಿವಾದಗಳ ಪರಿಹಾರಕರಾಗಿ ತಿರುಪತಿಯ ಶ್ರೀನಿವಾಸನನ್ನು ಹನ್ನೆರಡು ವರ್ಷಗಳಷ್ಟು ದೀರ್ಘಕಾಲ ಸಾಕ್ಷಾತ್ತಾಗಿ ಪೂಜಿಸುವ



ಮಹಾಭಾಗ್ಯಶಾಲಿಗಳಾಗಿ, ಅಪಮೃತ್ಯುಪರಿಹರಿಸುವ ಯೋಗಿವರೇಣ್ಯರಾಗಿ, ಸಾಮ್ರಾಜ್ಯ-ವನ್ನೇ ತೃಣಪ್ರಾಯವಾಗಿ ಮರಳಿ ಒಪ್ಪಿಸುವ ಮಹಾವಿರಕ್ತಶಿರೋಮಣಿಗಳಾಗಿ, ಶ್ರೇಷ್ಠ ವಾಗ್ಗೇಯಕಾರರಾಗಿ, ಅಪ್ರತಿಮ ಹರಿದಾಸಧುರೀಣರಾಗಿ, ವ್ಯಾಸಸಮುದ್ರದಂತಹ ಲೋಕೋಪಯೋಗಿಕಾರ್ಯಗಳಿಂದ ಆರ್ತಜನತೆಯ ಸಂರಕ್ಷಕರಾಗಿ ಶ್ರೀವ್ಯಾಸರಾಜರು ಸಾಧಿಸಿರುವ ಕಾರ್ಯ ಇತಿಹಾಸದ ಪುಟಗಳಲ್ಲಿ ಚಿರಸ್ಥಾಯಿಯಾಗಿ ನೆಲೆಸುವಂತಹುದು. ಅವರನ್ನು ತನ್ನ ಗುರುಗಳು ಎಂದು ಕೃಷ್ಣದೇವರಾಜ ಮುಕ್ತಕಂಠದಿಂದ ಕೊಂಡಾಡಿರುವನು:

ಉತ್ಸಾಹಂ ಮಮ ವೀಕ್ಷ್ಯ ಮದ್ಗುರುರಥ ಶ್ರೀವ್ಯಾಸತೀರ್ಥೋ ಮುನಿಃ
ಪರ್ಯಾಲೋಚ್ಯ ಪುರಾಣಶಾಸ್ತ್ರವಿವಿಧಾಮ್ನಾಯೇತಿಹಾಸಾದಿಕಾನ್ ।
ಲಬ್ಧಾಸ್ತತ್ರ ಕಥಾ ಹರೇಃ ಪಶುಪತೇಃ ಸಾಮ್ಯಂ ನಿರಸ್ಯಾಧಿಕಂ
ವಿಷ್ಣುಂ ಕೀರ್ತಯ ಸರ್ವಥೇತ್ಯುಪದಿಶನ್ ಮಹ್ಯಂ ಮುದಾ ದತ್ತವಾನ್ ॥

- (ಶ್ರೀಕೃಷ್ಣರಾಯಕೃತಿಃ - ಮದ್ರಾಸ್ ಗೌರ್ನಮೆಂಟ್ ಜಿ.ಒ. ಡಿ. ನಂ. ೧೮೨೯; ಡಾ ॥ -ಬಿ.ಎನ್.ಕೆ.ಶರ್ಮ. ಹೆಚ್.ಡಿ. ಎಸ್.ವಿ.ಎಲ್. ಪು. ೬೦೮)

ಅದರಂತೆ ಹಂಪೆಯ ವಿಟ್ಠಲೇಶ್ವರಸ್ವಾಮಿದೇವಸ್ಥಾನದ ದಕ್ಷಿಣಗೋಡೆಯಲ್ಲಿರುವ ಶಾಸನದಲ್ಲಿ ತನ್ನ ಗುರುಗಳು ವ್ಯಾಸರಾಯರು ಎಂದು ದಾಖಲಿಸಿರುವನು. 'ವಿನಿಯೋಗ ನಾನಾವರ್ಗದ ನೈವೇದ್ಯ ಸಹ ಗುರುವುಗಳು ವ್ಯಾಸರಾಯರಿಗೆ ಪಾಲು' (ಎಸ್. ಐ.ಐ. ವಾಲ್ಯೂಮ್ ೪ ನಂ ೨೭೭).

ಅವರಿನ್ನೂ ವಿಜಯನಗರವನ್ನು ಪ್ರವೇಶಿಸುವ ಮುನ್ನವೇ ದಿಲ್ಲಿಯ ಸುಲ್ತಾನರು ಮೊದಲಾದವರು ಒಂಟಿ ನಗಾರಿ, ಹಸಿರು ನಿಶಾನೆ, ಹಸಿರು ಛತ್ರಿ ಬಿರುದಾವಳಿಗಳನ್ನು ಸಮರ್ಪಿಸಿದ್ದ ಉಲ್ಲೇಖ ಅತ್ಯಂತ ಗಮನಾರ್ಹವಾದದ್ದು. ಅವರ ಸಂಗೀತದ ಕೊಡುಗೆಯನ್ನು ತುಳಜಾದಿ ಮಹಾರಾಜ ತನ್ನ ಸಂಗೀತಸಾರಾಮೃತ ಎಂಬ ಗ್ರಂಥದಲ್ಲಿ ಕೊಂಡಾಡಿರುವನು (ಸಂಗೀತವಿದ್ಯಾಪ್ರವರ್ತಕಃ ವಿದ್ಯಾಸಿಂಹಾಸನಾಧ್ಯಕ್ಷಃ ಎಂದು). ವಿಜಯನಗರದ ದೊರೆಗಳಾದ ತಮ್ಮರಾಯ (೧೪೮೬-೧೪೯೩), ತುಳುವ ನರಸನಾಯಕ (೧೪೯೩-೧೪೯೮), ವೀರನರಸಿಂಹ (೧೪೯೯-೧೫೦೩), ಕೃಷ್ಣದೇವರಾಯ (೧೫೦೯-೧೫೨೯) ಮತ್ತು ಅಚ್ಯುತದೇವರಾಯ (೧೫೩೦-೧೫೪೨) ಇವರಿಗೆಲ್ಲಾ ಗುರುಗಳಾಗಿದ್ದುದು ಶ್ರೀವ್ಯಾಸರಾಜರ ಮತ್ತೊಂದು ಹಿರಿಮೆ. ಇಷ್ಟು ಸುದೀರ್ಘಕಾಲ ರಾಜಪರಂಪರೆಗೆ ಗುರುಗಳಾಗಿದ್ದ ಶ್ರೀವ್ಯಾಸರಾಜರ ಹಿರಿಮೆ ಅತ್ಯಂತ ಅಪೂರ್ವವಾದದ್ದು.

(ಹೆಚ್ಚಿನ ವಿವರಗಳಿಗೆ ನಮ್ಮ ಪ್ರಕಾಶನದ 'ಶ್ರೀವ್ಯಾಸರಾಜದರ್ಶನ' ಕೃತಿಯನ್ನು ನೋಡಬಹುದು.)

# ಶ್ರೀವಾದಿರಾಜರು ಮತ್ತು ಅವರ ಕೃತಿಗಳು

## (೧೩-೦೩-೨೦೦೯ರಂದು ಶ್ರೀವಾದಿರಾಜರ ಆರಾಧನಾ ನಿಮಿತ್ತ ಲೇಖನ)

**ಡಾ || ವ್ಯಾಸನಕೆರೆ ಪ್ರಭಂಜನಾಚಾರ್ಯ**

ಶ್ರೀವಾದಿರಾಜಸ್ವಾಮಿಗಳು (ಕ್ರಿ.ಶ. ೧೪೮೦-೧೬೦೦) ದ್ವೈತವೇದಾಂತದ ಮಹಾವಿಭೂತಿಗಳಲ್ಲಿ ಒಬ್ಬರು. ಮುನಿತ್ರಯರೆಂದು ಪ್ರಸಿದ್ಧವಾಗಿರುವ ಆಚಾರ್ಯ ಶ್ರೀಮಧ್ವರು (೧೧೯೯-೧೨೭೮), ಶ್ರೀಜಯತೀರ್ಥರು (೧೩೪೧-೧೩೮೮) ಮತ್ತು ಶ್ರೀವ್ಯಾಸರಾಜರ (೧೪೬೦-೧೫೩೯) ಅನಂತರದ ಅಗ್ರಮಾನ್ಯ ಗ್ರಂಥಕಾರರೆಂಬುದು ಇವರ ಪ್ರಶಸ್ತಿ.

ಒಟ್ಟು ೧೨೦ವರ್ಷಗಳ(೧೪೮೦-೧೬೦೦) ದೀರ್ಘಬಾಳನ್ನು ಬಾಳಿದ ವೈಷ್ಣವಯತಿಗಳು ಎಂಬುದು ಇವರ ವಿಶೇಷ ಹಿರಿಮೆ. ಬ್ರಹ್ಮಚರ್ಯದಿಂದ ನೇರವಾಗಿ ಪರಮಹಂಸಾಶ್ರಮ ಸ್ವೀಕರಿಸಿದ ಇವರ ಸನ್ಯಾಸಜೀವನವೇ ಸುಮಾರು ೧೧೨ ವರ್ಷಗಳಷ್ಟು ದೀರ್ಘವಾಗಿತ್ತು. ಇಷ್ಟು ದೀರ್ಘಕಾಲ ಸಂನ್ಯಾಸಾಶ್ರಮ ನಿರ್ವಹಿಸಿದ ಮತ್ತೊಬ್ಬ ಯತಿಯನ್ನು ಇತಿಹಾಸ ಕಂಡಿಲ್ಲ.

ಶ್ರೀಮಧ್ವಮುನಿಗಳ ಸಹೋದರರೂ ಮಹಾತಪಸ್ವಿಗಳೂ ಆದ ಶ್ರೀವಿಷ್ಣುತೀರ್ಥರನ್ನು ಪ್ರಥಮ ಪೀಠಾಧೀಶರನ್ನಾಗಿ ಹೊಂದಿದ ಉಡುಪಿಯ ಅಷ್ಟಮಠಗಳಲ್ಲಿ ಒಂದಾದ ಸೋದೆಮಠವು ಶ್ರೀವಾದಿರಾಜರು ಅಲಂಕರಿಸಿದ ಗುರುಪೀಠ. ಶ್ರೀವಾಗೀಶತೀರ್ಥರಿಂದ ಸನ್ಯಾಸಪಡೆದ ಇವರು ಆ ಪೀಠದಲ್ಲಿ ಇಪ್ಪತ್ತನೆಯವರು.

ಶ್ರೀವಿದ್ಯಾನಿಧಿಗಳು ಮತ್ತು ಶ್ರೀವ್ಯಾಸರಾಜರಂತಹ ಮಹಾವಿದ್ವನ್ಮಣಿಗಳ ಬಳಿ ವಿವಿಧಶಾಸ್ತ್ರಗಳ ಅಧ್ಯಯನದ ಹಿನ್ನೆಲೆಯ ಇವರ ಸಾಧನೆ ಲೋಕೋತ್ತರವಾದುದು. ನೂರಾರು ಶಿಷ್ಯರಿಗೆ ಪಾಠ ಪ್ರವಚನಗಳನ್ನು ಮಾಡುತ್ತಲೇ ಅಂದಿನ ವಿಷಮರಾಜಕೀಯ ಪರಿಸ್ಥಿತಿಯಲ್ಲೂ ಸಮಗ್ರಭರತಖಂಡವನ್ನು ಸಂಚರಿಸಿ ವೈದಿಕಸಂಸ್ಕೃತಿಯ ಮಹತ್ತ್ವ, ತತ್ತ್ವಜ್ಞಾನದ ಆವಶ್ಯಕತೆ ಮತ್ತು ವೈಷ್ಣವಸಿದ್ಧಾಂತದ ಹಿರಿಮೆಗಳನ್ನು ಪ್ರಚುರಪಡಿಸಿದ ಇವರ ಕರ್ತೃತ್ವಶಕ್ತಿ ಅದ್ಭುತವಾದುದು.

ತಪಶ್ಶಕ್ತಿ, ಮಂತ್ರಸಿದ್ಧಿ ಮತ್ತು ತತ್ತ್ವಜ್ಞಾನಗಳ ತ್ರಿವೇಣೀಸಂಗಮವಾಗಿದ್ದ ಇವರಿಗೆ ರಾಜಮಹಾರಾಜರುಗಳು ಶಿರಬಾಗಿದರು. ವಿಜಯನಗರದ ಚಕ್ರವರ್ತಿ ಎನ್ನಿಸಿದ ಕೃಷ್ಣದೇವರಾಯ (೧೫೦೯-೨೯) ಮತ್ತು ಅನಂತರದ ಅಚ್ಯುತದೇವರಾಯ (೧೫೨೫-೧೫೪೨)ರು ಶ್ರೀವಾದಿರಾಜರ ಪರಮಭಕ್ತರೆನ್ನಿಸಿದ್ದರೆಂದು ಇತಿಹಾಸದಿಂದ ತಿಳಿಯುತ್ತದೆ. ಸೋದೆಯ ಅರಸಪ್ಪನಾಯಕನಂತೂ ಇವರ ಆಜ್ಞಾಧಾರಕನಾದ ಶಿಷ್ಯನೇ ಆಗಿದ್ದನು. ಪ್ರಸಂಗಾಭರಣತೀರ್ಥ, ಷಡ್ದರ್ಶನಷಣ್ಮುಖ, ಸರ್ವಜ್ಞಕಲ್ಪ, ಕವಿಕುಲತಿಲಕ ಮೊದಲಾದ ಮಹತ್ತ್ವದ ಬಿರುದುಗಳಿಂದ ಅಂದಿನ ವಿದ್ವದ್ವೃಂದ ಇವರನ್ನು ಗೌರವಿಸಿದೆ.



ಉಡುಪಿಯ ಶ್ರೀಕೃಷ್ಣಪೂಜೆಯ ಪರ್ಯಾಯವ್ಯವಸ್ಥೆಯನ್ನು ಎರಡು ತಿಂಗಳುಗಳಿಂದ ಎರಡು ವರ್ಷಗಳಿಗೆ ಬದಲಾಯಿಸಿದ್ದು ಇವರ ಮಹತ್ತ್ವದ ಸಾಧನೆಗಳಲ್ಲೊಂದು. ಇವರಿಗಿಂತ ಇವರ ಶಿಷ್ಯರಾದ ಶ್ರೀವೇದವೇದ್ಯತೀರ್ಥರೇ ಹೆಚ್ಚು ವೃದ್ಧಾಪ್ಯವನ್ನು ಹೊಂದಿದಾಗ ಅವರ ಅನುಕೂಲಕ್ಕಾಗಿ ತಮ್ಮ ಒಂದು ಪರ್ಯಾಯವನ್ನೇ ಅವರಿಗಾಗಿ ಬಿಟ್ಟುಕೊಟ್ಟು, ಉಡುಪಿಯ ಪ್ರತಿರೂಪದಂತೆ ಸೋದೆಯಲ್ಲಿ ಶ್ರೀತ್ರಿವಿಕ್ರಮದೇವಾಲಯ, ಧವಲಗಂಗಾಸರೋವರ ಮೊದಲಾದವುಗಳನ್ನು ನಿರ್ಮಿಸಿ, ಅಲ್ಲಿಯೇ ಆ ಬಾರಿ ಪರ್ಯಾಯ ಕೈಗೊಂಡ ಪ್ರಕರಣವು ಇವರ ಅಪೂರ್ವಶಿಷ್ಯವಾತ್ಸಲ್ಯ ಮತ್ತು ಉಜ್ಜ್ವಲ ತಪಶ್ಶಕ್ತಿಗಳಿಗೆ ಉತ್ತಮ ನಿದರ್ಶನ.

ಇಂದು ಮನೆಮಾತಾಗಿರುವ ಶ್ರೀರಾಘವೇಂದ್ರಸ್ವಾಮಿಗಳಿಗಿಂತ ಮುಂಚಿತವಾಗಿಯೇ ಅಸಂಖ್ಯ ಸಾತ್ತ್ವಿಕಪವಾಡಗಳ ಮೂಲಕ ನಾಸ್ತಿಕವರ್ಗವನ್ನು ಮಣಿಸಿದ ಶ್ರೇಯಸ್ಸು ಸಹ ಇವರದೇ ಆಗಿದೆ. ಅದರಂತೆ, ಶ್ರೀರಾಘವೇಂದ್ರರಿಗಿಂತ ಮುಂಚೆಯೇ ಸಶರೀರವಾಗಿ ಬೃಂದಾವನಪ್ರವೇಶ ಮಾಡಿದ ಹಿರಿಮೆಯೂ ಇವರದಾಗಿದೆ.

ಸ್ವರ್ಣಕಾರರು, ಕೋಟೇಶ್ವರದವರು ಮೊದಲಾಗಿ ಅನೇಕರಿಗೆ ವೈಷ್ಣವ ದೀಕ್ಷೆಯನ್ನು ಕೊಟ್ಟು ಉದ್ಧರಿಸಿದ ಇವರ ವಿಶಾಲದೃಷ್ಟಿ ಅನನ್ಯವಾದುದು. ಪ್ರಸಿದ್ಧ ಹರಿದಾಸರಲ್ಲೊಬ್ಬರಾದ ಶ್ರೀಕನಕದಾಸರು ಶ್ರೀವಾದಿರಾಜರ ನಿಕಟವರ್ತಿಗಳೂ, ಕೃಪಾಪಾತ್ರರೂ ಆಗಿದ್ದರೆನ್ನಲು ದಾಖಲೆಗಳಿವೆ. ಶ್ರೀಕನಕದಾಸರು ವೈಷ್ಣವ ಮಂಡಲಿಯಲ್ಲಿ ವಿಶೇಷವಾಗಿ ಆದರಣೀಯರಾಗಲು ಶ್ರೀವ್ಯಾಸರಾಜರಂತೆ, ಶ್ರೀವಾದಿರಾಜರ ಪಾತ್ರವೂ ಅತ್ಯಂತ ಪ್ರಮುಖವಾದುದು. ವಿಷ್ಣುಭಕ್ತಿಯೇ ಮಾನ್ಯತೆಯ ಪ್ರಮುಖ ಮಾನದಂಡ ಎಂಬ ಆಚಾರ್ಯ ಶ್ರೀಮಧ್ವರ ಸಂದೇಶವನ್ನು ಶ್ರೀವ್ಯಾಸರಾಜರು ಮತ್ತು ಶ್ರೀವಾದಿರಾಜರು ಅನುಸರಣ ಮಾಡಿದ ರೀತಿ ಅನನ್ಯವಾದುದು.

ಜೀವನದುದ್ದಕ್ಕೂ ಆರ್ತರ ಸಂಕಷ್ಟವನ್ನು ಸಮರ್ಥವಾಗಿ ಪರಿಹರಿಸಿದ ಇವರು ಬೃಂದಾವನವನ್ನು ಪ್ರವೇಶಿಸಿ ಶತಕಗಳೇ ಉರುಳಿದ್ದರೂ ಭಕ್ತರಿಗೆ ಇನ್ನೂ ಆಶ್ರಯದಾಯಕರಾದ ಕಲ್ಪವೃಕ್ಷ, ಕಾಮಧೇನು ಎನ್ನಿಸಿರುವರು ಎನ್ನಲು ಸೋದೆಯಲ್ಲಿ ಅವರ ಬೃಂದಾವನದ ಬಳಿ ಎಡೆಬಿಡದೆ ನೆರೆದಿರುವ ಭಕ್ತಸಮೂಹ ಸಾಕ್ಷಿಯಾಗಿದೆ.

ಧರ್ಮಸ್ಥಳ, ಸೋದೆ ಮೊದಲಾದ ಅನೇಕಸ್ಥಳಗಳಲ್ಲಿ ಶಿವಲಿಂಗಗಳನ್ನು ಸಹ ಪ್ರತಿಷ್ಠಾಪಿಸಿದ ಇವರ ಮತ್ತೊಂದು ಸಾಧನೆ; ಅವರ ಈ ಕಾರ್ಯ ವೈಷ್ಣವರು ಶಿವದ್ವೇಷಿಗಳೆಂಬ ಕೆಲವರ ತಪ್ಪು ತಿಳುವಳಿಕೆಯನ್ನು ಸಂಪೂರ್ಣವಾಗಿ ಹೋಗಲಾಡಿಸುತ್ತದೆ. ಸಾಮಾಜಿಕವಾಗಿ ಶೈವವೈಷ್ಣವರ ಬಾಂಧವ್ಯಕ್ಕೆ ಈ ಕೊಡುಗೆ ತುಂಬಾ ಮಹತ್ವಪೂರ್ಣವಾದುದು.

ಶ್ರೀಹಯಗ್ರೀವೋಪಾಸಕರಾಗಿದ್ದ ಶ್ರೀವಾದಿರಾಜರು ವಿದ್ಯಾಪ್ರಪಂಚಕ್ಕೆ ಸಲ್ಲಿಸಿರುವ ಸೇವೆಯಂತೂ ಯಾವುದೇ ಅಳತೆಗೋಲಿನಿಂದಲೂ ಅಗ್ರಮಾನ್ಯವೇ ಆಗಿದೆ. ಜೀವನವಿಡೀ ಇವರು ನಡೆಸಿದ ಪಾಠಪ್ರವಚನಗಳಿಗೆ ಸಾಕ್ಷಿಯಾಗಿ ಇವರ ಸೋದರರೂ, ಅನಂತರ ಭಂಡಾರಕೆರೆಪೀಠವನ್ನಲಂಕರಿಸಿದವರೂ, ಇವರ ಯುಕ್ತಿಮಲ್ಲಿಕಾ ಮತ್ತು ಪಾಷಂಡಮತಖಂಡನಗ್ರಂಥಕ್ಕೆ ಟೀಕೆ ಬರೆದವರೂ ಆದ ಶ್ರೀಸುರೋತ್ತಮತೀರ್ಥರು, ಇವರ ರುಗ್ಮಿಣೀಶವಿಜಯ, ತೀರ್ಥಪ್ರಬಂಧಗಳಿಗೆ ಉತ್ಕೃಷ್ಟವ್ಯಾಖ್ಯಾನಗಳನ್ನು ಬರೆದಿರುವ ನಾರಾಯಣಾಚಾರ್ಯರು, ಇವರ ಜೀವನಚರಿತ್ರೆಯನ್ನು ಹೃದಯಂಗಮ-ವಾಗಿ ಚಿತ್ರಿಸಿರುವ ವೃತ್ತರತ್ನಸಂಗ್ರಹಕಾರ ರಘುನಾಥಾಚಾರ್ಯರು ಮೊದಲಾದ ಮಹನೀಯರನ್ನು ಇಲ್ಲಿ ಉಲ್ಲೇಖಿಸಬಹುದು.

ಆ ಕಾಲದಲ್ಲಿ ತುಂಬಾ ಪ್ರಬಲರಾಗಿದ್ದ ಅದ್ವೈತ, ಶೈವ ಮತ್ತು ಜೈನ ಎಂಬ ಮೂರು ಪಂಗಡಗಳ ವಾದಿಗಳನ್ನು ತುಂಬಾ ಸಮರ್ಥವಾಗಿ ಎದುರಿಸಿದ್ದು ಇವರ ಶಿಖರಪ್ರಾಯವಾದ ಸಾಧನೆ; ಅದರಿಂದಾಗಿ ಇವರಿಗೆ '**ವಾದಿರಾಜ**' ಎಂಬ ಹೆಸರು ತುಂಬಾ ಅನ್ವರ್ಥವಾದುದು; ಇವರ ವಾದಕೌಶಲಕ್ಕೆ ತಲೆಬಾಗದ ಪ್ರತಿವಾದಿಯೇ ಇರಲಿಲ್ಲ. ಹಯಗ್ರೀವೋಪಾಸಕರಾದ ಶ್ರೀವಾದಿರಾಜರು **ಹಯವದನ** ಅಂಕಿತದಿಂದ ಕನ್ನಡಭಾಷೆಯಲ್ಲಿ ಅಸಂಖ್ಯಕೃತಿಗಳನ್ನು ರಚನೆ ಮಾಡಿದಂತೆ, ಶ್ರೀಹಯಗ್ರೀವನ ವಿಶೇಷಸ್ಮರಣೆ ಪಾಮರರಿಗೂ ಎಟಕುವಂತೆ ಭೋಜನಕಾಲದಲ್ಲೂ ಸ್ಮರಣೆಗೆ ಬರುವಂತೆ ಮಾಡಿದ ಮತ್ತೊಂದು ಮಹತ್ಕಾರ್ಯ ಹಯಗ್ರೀವ ಎಂಬ ಭಕ್ಷ್ಯವೊಂದನ್ನೇ ಜಾರಿಗೆ ತಂದದ್ದು. ಅದು ಭಗವತ್ಸ್ಮರಣೆಗೆ ಕಾರಣವಾಗುವುದು ಮಾತ್ರವಲ್ಲದೇ ವಿಶೇಷವಾದ ಜ್ಞಾನವೃದ್ಧಿಗೂ ಕಾರಣವಾಗುವಂತೆ ಮಾಡಿದರು; ಹಯಗ್ರೀವರೂಪ ವಿಶೇಷವಾಗಿ ಜ್ಞಾನಪ್ರದಾಯಕ ರೂಪವೇ ಆಗಿದೆಯಲ್ಲವೆ. ಅದರಂತೆ ಶ್ರೀಹರಿನೈವೇದ್ಯಕ್ಕೆ ವಿಹಿತವಾಗುವ ವಾದಿರಾಜಗುಳ್ಳ ಎಂಬ ಮತ್ತೊಂದು ಬಗೆಯ ಸಸ್ಯವನ್ನು ಒದಗಿಸಿದ್ದು ಅವರ ಮತ್ತೊಂದು ಹಿರಿಮೆ.

ಗ್ರಂಥಕಾರರಾಗಿಯಂತೂ ಶ್ರೀವಾದಿರಾಜರ ಸಾಧನೆ ಅತ್ಯಂತ ಮಹತ್ತರವಾದುದು, ಸಂಖ್ಯೆ ಹಾಗೂ ಸತ್ತ್ವ ಎರಡರ ದೃಷ್ಟಿಯಿಂದಲೂ ಇವರ ಗ್ರಂಥರಚನೆ ಅಪಾರವಾದುದು. ಅಷ್ಟಮಠಗಳ ಯತಿಗಳಲ್ಲಿ ಗ್ರಂಥರಚನೆಯ ದೃಷ್ಟಿಯಲ್ಲೂ ಇವರದೇ ಅಗ್ರಸ್ಥಾನ.

'ಯುಕ್ತಿಮಲ್ಲಿಕೆ'ಯು ಇವರ ಕೃತಿರಾಜ; ವಿಶ್ವ ,ಶುದ್ಧಿ ,ಭೇದ, ವಿಶ್ವ ಮತ್ತು ಫಲ ಎಂಬ ಐದು ಸೌರಭಗಳಲ್ಲಿ ಒಟ್ಟು ೫೩೭೯ ಶ್ಲೋಕಗಳಲ್ಲಿ ಶ್ರೀಮದಾಚಾರ್ಯರ ಅನುವ್ಯಾಖ್ಯಾನದ ಮೇಲ್ಪಂಕ್ತಿಯಲ್ಲಿ ಬ್ರಹ್ಮಸೂತ್ರಭಾಷ್ಯದ ಪ್ರಮೇಯಗಳನ್ನು ಅನೇಕತೆರನಾದ ಸುಂದರವೂ, ಪ್ರಬಲವೂ ಆದ ಯುಕ್ತಿಗಳಿಂದ ನಿರೂಪಿಸುವ ಈ



ಗ್ರಂಥವು ಸಮಗ್ರತತ್ತ್ವಶಾಸ್ತ್ರದ ಇತಿಹಾಸದಲ್ಲೇ ಅಪೂರ್ವವೆನ್ನಿಸುವ ಶ್ಲೋಕರೂಪದ ಸ್ವತಂತ್ರ 'ವಾದಗ್ರಂಥ'. ಶಾಸ್ತ್ರನ್ಯಾಯ ಮತ್ತು ಲೋಕನ್ಯಾಯ- ಗಳನ್ನು ಅಸಂಖ್ಯವಾಗಿ ಉಪಯೋಗಿಸಿಕೊಂಡು ಪ್ರಮುಖವೈಷ್ಣವವೇದಾಂತತತ್ತ್ವಗಳನ್ನು ಜಿಜ್ಞಾಸುಗಳಿಗೆ ತುಂಬಾ ಪರಿಣಾಮಕಾರಿಯಾಗಿ ತಲುಪಿಸುವ ಇಂತಹ ಸ್ವತಂತ್ರಗ್ರಂಥ ಮತ್ತೊಂದಿಲ್ಲ ಎನ್ನಬಹುದು.

**ನ್ಯಾಯರತ್ನಾವಲಿ**(೯೦೧ಶ್ಲೋಕಗಳು), **ಹರಿಭಕ್ತಿಲತಾ** (೩೯೪ಶ್ಲೋಕಗಳು), **ಶ್ರುತಿ-ತತ್ತ್ವಪ್ರಕಾಶಿಕಾ**(೫೦೭ಶ್ಲೋಕಗಳು), **ಏಕಾದಶೀನಿರ್ಣಯ**(೫೫ಶ್ಲೋಕಗಳು) ಮತ್ತು **ಪಾಷಂಡಮತಖಂಡನ**(೧೨೯ಶ್ಲೋಕಗಳು) ಇವು ಅವರ ಇತರ ಪದ್ಯರೂಪದ ಪ್ರಮುಖ ಶಾಸ್ತ್ರಗ್ರಂಥಗಳು.

**ನ್ಯಾಯಸುಧಾಗುರ್ವರ್ಥದೀಪಿಕಾ**(೬೦೦೦ಗ್ರಂಥಗಳು), **ತತ್ತ್ವಪ್ರಕಾಶಿಕಾಗುರ್ವರ್ಥದೀಪಿಕಾ**(೩೫೦೦ಗ್ರಂಥಗಳು), **ಮಹಾಭಾರತತಾತ್ಪರ್ಯನಿರ್ಣಯಭಾವಪ್ರಕಾಶಿಕಾ** ಮತ್ತು **ಮಹಾಭಾರತಲಕ್ಷಾಲಂಕಾರ**; ಇವು ಇವರ ಪ್ರಮುಖ ವ್ಯಾಖ್ಯಾನಗ್ರಂಥಗಳು.

**ವಿವರಣವ್ರಣ**(೨೫೦೦ ಗ್ರಂಥಗಳು - ಪ್ರಕಾಶಾತ್ಮಕೃತ ಪಂಚಪಾದಿಕಾವಿವರಣ ಮತ್ತು 'ತತ್ತ್ವದೀಪನ' ಎಂಬ ವ್ಯಾಖ್ಯಾನಗಳ ಖಂಡನೆ) ಮತ್ತು **ಕಲ್ಪಲತಾ** (ವಾದಿರಾಜಸೂರಿ ಎಂಬ ಜೈನಪಂಡಿತನ ಪ್ರಮಾಣಮಂಜರೀ ಎಂಬ ಕೃತಿಯ ಖಂಡನ) ಇವು ಇವರ ಪ್ರಮುಖ ಖಂಡನಗ್ರಂಥಗಳು.

**ರುಗ್ಮಿಣೀಶವಿಜಯ** (೧೯ ಸರ್ಗಗಳು - ಒಟ್ಟು ೧೨೪೧ ಶ್ಲೋಕಗಳು), **ಸರಸಭಾರತೀವಿಲಾಸ** (೧೨ವಿಲಾಸಗಳು-೭೦೦ ಶ್ಲೋಕಗಳು), **ತೀರ್ಥಪ್ರಬಂಧ** (೪ಪ್ರಬಂಧಗಳು - ೨೩೫ ಶ್ಲೋಕಗಳು) ಮತ್ತು **ಕವಿಕದಂಬಕಂಠಭೂಷಾ**(೧೫ ಶ್ಲೋಕಗಳು) ಇವು ಇವರ ಪ್ರಮುಖ ಕಾವ್ಯಕೃತಿಗಳು, ದಶಮಸ್ಕಂಧ ಭಾಗವತೋಕ್ತ ಶ್ರೀಕೃಷ್ಣಕಥೆಯನ್ನು ಶ್ರೀಮದಾಚಾರ್ಯರ ಮಹಾಭಾರತತಾತ್ಪರ್ಯನಿರ್ಣಯ ಮತ್ತು ಭಾಗವತತಾತ್ಪರ್ಯನಿರ್ಣಯಗ್ರಂಥಗಳ ಹಿನ್ನೆಲೆಯಲ್ಲಿ ಅಪೂರ್ವವಾಗಿ ವರ್ಣಿಸುವ 'ರುಗ್ಮಿಣೀಶವಿಜಯ'ವು ನವರಸಭರಿತವಾದ ಒಂದು ಸುಂದರಮಹಾಕಾವ್ಯ. ಮಾಘಕಾವ್ಯ-ಕ್ಕಿಂತ ಮಿಗಿಲಾದ ಮಹಾಕಾವ್ಯವೆಂದು ಅಂದಿನ ಕಾಲದಲ್ಲೇ ರಾಜಮನ್ನಣೆಗೆ ಪಾತ್ರವಾದ ಕೃತಿ. ಒಂದರ್ಥದಲ್ಲಿ ಇದನ್ನು ಭಾಗವತ ದಶಮಸ್ಕಂಧದ ಕೃಷ್ಣಲೀಲಾಭಾಗದ ಶ್ಲೋಕರೂಪಆಧ್ಯಾತ್ಮಿಕವ್ಯಾಖ್ಯಾನ ಎನ್ನಬಹುದು.

ಇವರ ನ್ಯಾಯಸುಧಾಗುರ್ವರ್ಥದೀಪಿಕೆಯು ಇಂದು ನ್ಯಾಯಸುಧೆಗೆ ಉಪಲಬ್ಧವಿರುವ ಟಿಪ್ಪಣಿಗಳಲ್ಲೆಲ್ಲ ಅತ್ಯಂತ ಪ್ರಾಚೀನವಾದುದು. ಅವರ **ತತ್ತ್ವಪ್ರಕಾಶಿಕಾಗುರ್ವರ್ಥದೀಪಿಕೆ** ಸಹ ಒಂದರ್ಥದಲ್ಲಿ ತತ್ತ್ವಪ್ರಕಾಶಿಕೆಗೆ ದೊರೆತಿರುವ ಅತ್ಯಂತ ಪ್ರಾಚೀನ ಟಿಪ್ಪಣಿಯಾಗಿದೆ.

ಶ್ರೀಲಕ್ಷ್ಮೀ, ಬ್ರಹ್ಮ(ವಾಯು) ಮತ್ತು ಸರಸ್ವತಿ(ಭಾರತೀ)ಯರ ಪರಶುಕ್ಲತ್ರಯತ್ವವನ್ನು ನಿರೂಪಿಸುವ ಅವರ ಸರಸಭಾರತೀವಿಲಾಸವು ಒಂದರ್ಥದಲ್ಲಿ ಶ್ರೀಮದಾಚಾರ್ಯರ **'ಪರಶುಕ್ಲತ್ರಯಂ ಸ್ಮೃತಂ'**(೧೮/೨೮)ಎಂಬ ಮಹಾಭಾರತತಾತ್ಪರ್ಯನಿರ್ಣಯದ ವಾಕ್ಯಕ್ಕೆ ವಿಸ್ತೃತ ಶ್ಲೋಕರೂಪವ್ಯಾಖ್ಯಾನವಾಗಿದೆ. ಶ್ರೀವಾಯುಜೀವೋತ್ತಮತ್ವವನ್ನು ಈ ತೆರನಾಗಿ ವಿವರವಾಗಿ ವಿವೇಚಿಸಿರುವ ಮತ್ತೊಂದು ಗ್ರಂಥವೇ ವೈಷ್ಣವಸಾಹಿತ್ಯದಲ್ಲಿಲ್ಲವೆನ್ನಬಹುದು. ಇದು ಅವರೇ ಕರೆದಿರುವಂತೆ 'ಭಾರತೀಶವಿಜಯ'ವೇ ಆಗಿದ್ದು, ಮತ್ತೊಂದು ಸುಮಧ್ವವಿಜಯದಂತೆ ಮಾನ್ಯವಾಗಿದೆ. ಶ್ರೀರುದ್ರದೇವರ ಅಸಾಮಂಜಸ್ಯವನ್ನು ಸಹ ವಿವರವಾಗಿ ತಿಳಿಸಿರುವುದು ಈ ಕೃತಿಯ ಮತ್ತೊಂದು ವೈಶಿಷ್ಟ್ಯ. ಅವರ 'ಹರಿಭಕ್ತಿಲತಾ'ದ ಬಹುಭಾಗವು ಇದಕ್ಕೆ ಪೂರಕಗ್ರಂಥದಂತಿದೆ ಎಂಬುದನ್ನು ಗಮನಿಸಬೇಕು.

ಇವರ ಮಹಾಭಾರತತಾತ್ಪರ್ಯನಿರ್ಣಯಭಾವಪ್ರಕಾಶಿಕೆಯು ನಿಜವಾದ ಅರ್ಥದಲ್ಲಿ ನಿರ್ಣಯದ ಭಾವಪ್ರಕಾಶಿಕೆಯೇ ಆಗಿದೆ. ಕೆಲವು ಸ್ಥಳಗಳಲ್ಲಂತೂ ಅದರಲ್ಲಿಯ ವಿವರಗಳು ತಮ್ಮ ಅಪೂರ್ವತೆಯಿಂದ ಅಚ್ಚರಿಪಡಿಸುತ್ತವೆ. ತಾತ್ಪರ್ಯನಿರ್ಣಯದ ಉಪಲಬ್ಧ ಟಿಪ್ಪಣಿಗಳಲ್ಲೆಲ್ಲ ಒಂದು ವಿನೂತನಶೈಲಿಯ ಕೃತಿ ಎಂಬುದು ಇದರ ಮತ್ತೊಂದು ವೈಶಿಷ್ಟ್ಯ. ಅವರ ಮಹಾಭಾರತಲಕ್ಷಾಲಂಕಾರವು ಇಂದು ಸಮಗ್ರಮಹಾಭಾರತಕ್ಕೆ ಉಲಪಲ್ಧವಿರುವ ವೈಷ್ಣವಪರಂಪರೆಯ ಏಕೈಕ ಮಹಾಭಾರತಟಿಪ್ಪಣಿಯಾಗಿದೆ. ಶ್ರೀಮದಾಚಾರ್ಯರ ಮಹಾಭಾರತತಾತ್ಪರ್ಯನಿರ್ಣಯದ ಹಿನ್ನೆಲೆಯಲ್ಲಿ ಮಹಾಭಾರತದ ಶ್ಲೋಕಗಳನ್ನು ಹೇಗೆ ಅರ್ಥೈಸಬೇಕು ಎಂಬುದನ್ನು ಅರಿಯಲು 'ದಾರಿದೀಪ'ವಾಗಿರುವ ಈ ಕೃತಿ ಮಹಾಭಾರತ ವ್ಯಾಖ್ಯಾನ ಪರಂಪರೆಗೇ ಒಂದು 'ಅಲಂಕಾರ'.

ಅಪಾರಸಂಖ್ಯೆಯ ಇಂತಹ ಸಂಸ್ಕೃತಕೃತಿಗಳನ್ನಲ್ಲದೆ ಕನ್ನಡದಲ್ಲಿ ಶ್ರೀಕೃಷ್ಣಬಾಲಲೀಲೆ, **ಕೇಶವನಾಮ, ಅವತಾರತ್ರಯಸುವ್ವಾಲಿ, ಭ್ರಮರಗೀತೆ, ನಾರಾಯಣಕವಚ, ವೈಕುಂಠವರ್ಣನೆ, ಲಕ್ಷ್ಮೀಶೋಭನಹಾಡು, ಗುಂಡಕ್ರಿಯೆ, ಸ್ವಪ್ನಪದ** ಮೊದಲಾದ ಪದ್ಯಕೃತಿಗಳನ್ನೂ, ನೂರಾರು ಕೀರ್ತನೆ, ಉಗಾಭೋಗ, ಸುಳಾದಿಗಳನ್ನೂ ಹಯವದನ ಎಂಬ ಅಂಕಿತದಿಂದ ರಚಿಸಿ, ಹರಿದಾಸಸಾಹಿತ್ಯವನ್ನು ಸಹ ಅಪಾರವಾಗಿ ಶ್ರೀಮಂತ-ವನ್ನಾಗಿಸಿದ್ದಾರೆ. ಕನ್ನಡದಲ್ಲಿ ಅಪಾರಕೃತಿಗಳನ್ನು ರಚಿಸಿದ (ಶ್ರೀಶ್ರೀಪಾದರಾಜರು, ಶ್ರೀವ್ಯಾಸರಾಜರು ಮತ್ತು ಶ್ರೀವಾದಿರಾಜರು ಎಂಬ) ಪರಮಹಂಸತ್ರಯರಲ್ಲಿ ಒಬ್ಬರು ಎಂಬುದು ಇವರ ಹಿರಿಮೆ. ತುಳುಭಾಷೆಯಲ್ಲೂ ದಶಾವತಾರಸ್ತವನಪರವಾದ 'ಪಾಡ್ದನ'ವೆಂಬ ಕೃತಿಗಳನ್ನು ರಚಿಸಿ ಆ ಪ್ರಾಂತದ ದಲಿತಜನಾಂಗದಲ್ಲೂ ವಿಷ್ಣುಭಕ್ತಿಯ ಪ್ರಸಾರವನ್ನು ಮಾಡಿರುವರು. ಅವುಗಳಲ್ಲಿ ಕೆಲವು ಪ್ರಕಟವಾಗಿವೆ.



ಅತಿಹೆಚ್ಚಿನ ಸಂಖ್ಯೆಯಲ್ಲಿ ಸ್ತೋತ್ರಕೃತಿಗಳನ್ನು ಬರೆದಿರುವ ವೈಷ್ಣವಗ್ರಂಥಕಾರರೆಂಬುದು ಇವರ ಮತ್ತೊಂದು ಪ್ರಶಸ್ತಿ. **'ದಶಾವತಾರಸ್ತುತಿ'**, **'ಕೃಷ್ಣಾಷ್ಟಕ'** ಮೊದಲಾದ ಇಂದು ಉಪಲಬ್ಧವಿರುವ ನಲವತ್ತಕ್ಕೂ ಹೆಚ್ಚಿನ ಇವರ ಸ್ತೋತ್ರಕೃತಿಗಳು ಛಂದೋವೈವಿಧ್ಯ, ರಚನಾಕೌಶಲ, ಗೇಯತೆ, ಅರ್ಥವಿಸ್ತಾರ ಮೊದಲಾದ ಗುಣಗಳಿಂದಾಗಿ ಆ ಮಾಧ್ಯಮಕ್ಕೆ ಸಂದಿರುವ ಉತ್ಕೃಷ್ಟ ಕೊಡುಗೆಗಳಾಗಿದ್ದು, ಅವುಗಳ ಶ್ರವಣ ಪಠನಗಳು ವಿನೂತನ ಪ್ರಪಂಚವನ್ನೇ ಸೃಷ್ಟಿಸಿಬಿಡುತ್ತವೆ.

ಕಾವ್ಯದ ಮಾಧುರ್ಯ ಮತ್ತು ಶಾಸ್ತ್ರದ ಅರ್ಥಗೌರವ ಈ ಎರಡೂ ವಾದಿರಾಜರ ಕೃತಿಗಳಲ್ಲಿ ಓತಪ್ರೋತವಾಗಿವೆ. ಮನಸೆಳೆಯುವ ಸರಸಸುಂದರಯುಕ್ತಿಗಳು ಮತ್ತು ಅನುಪ್ರಾಸ ಭೂಯಿಷ್ಠವಾದ ಶೈಲಿ, ಇವು ಶ್ರೀವಾದಿರಾಜರ ಕೃತಿಗಳಲ್ಲಿ ಉದ್ದಕ್ಕೂ ಗೋಚರಿಸುವ ಅಂಶಗಳು. ಸಂಸ್ಕೃತಭಾಷೆಯನ್ನು ಶಾಸ್ತ್ರ, ಕಾವ್ಯ, ಖಂಡನೆ, ಮಂಡನೆ, ಟೀಕೆ, ಟಿಪ್ಪಣಿ, ಗದ್ಯ, ಪದ್ಯ ಮೊದಲಾದ ಎಲ್ಲಾ ಮಾಧ್ಯಮಗಳಿಗೂ ಪರಿಣಾಮಕಾರಿಯಾಗಿ ಅಳವಡಿಸಿಕೊಂಡಿರುವ ಗ್ರಂಥಕಾರರಲ್ಲಿ ಆಚಾರ್ಯ ಶ್ರೀಮಧ್ವರ ಅನಂತರದ ಅಗ್ರಸ್ಥಾನ ಇವರದೇ ಆಗಿದೆ. ಸಾರ್ವಕಾಲಿಕಮಹತ್ತ್ವದ ಇವರಂಥ ಗ್ರಂಥಕಾರರು ಇತಿಹಾಸದಲ್ಲಿ ಅಪೂರ್ವ. ಶಾಸ್ತ್ರವೈದುಷ್ಯ, ಸಿದ್ಧಾಂತನಿಷ್ಠೆ ಮತ್ತು ಕಾವ್ಯಪ್ರತಿಭೆಗಳೊಂದಿಗೆ ಆನಂದತೀರ್ಥ-ಭಗವತ್ಪಾದರ ಬಗ್ಗೆ ತುಂಬಿತುಳುಕುವ ಭಕ್ತಿಭಾವ ಇವರ ಕೃತಿಗಳಲ್ಲೆಲ್ಲ ಗೋಚರಿಸುವ ಮತ್ತೊಂದು ವಿಶಿಷ್ಟಗುಣ. ಮನಸ್ಸನ್ನು ಅರಳಿಸುವ ಕಾವ್ಯಮಾಧುರ್ಯ, ವಿಚಾರಗಳನ್ನು ಕೆರಳಿಸುವ ಯುಕ್ತಿಕೌಶಲ ಇವುಗಳನ್ನು ಹಾಸುಹೊಕ್ಕಾಗಿ ಹೊಂದಿರುವ ಇವರ ಗ್ರಂಥರಚನೆಯ ಸಿದ್ಧಿ ಅಸಾಮಾನ್ಯವಾದುದು. ಭಾಷೆ, ಶೈಲಿ, ವಿಷಯ, ನಿರೂಪಣೆ ಮೊದಲಾದ ಅನೇಕ ದೃಷ್ಟಿಯಿಂದ ಇಷ್ಟು ಪರಿಪಕ್ವವಾದ ರಚನೆಗಳು ಜಗತ್ತಿನ ಯಾವುದೇ ಭಾಷೆಯ ಸಾಹಿತ್ಯದಲ್ಲೂ ವಿರಳವೇ ಸರಿ. ಇಂತಹ ಅನೇಕ ವೈಶಿಷ್ಟ್ಯದಿಂದಾಗಿ ಶ್ರೀವಾದಿರಾಜರು ಒಂದರ್ಥದಲ್ಲಿ ಅಭಿನವಮಧ್ವಾಚಾರ್ಯರೇ ಆಗಿರುವರು.

## ಶ್ರೀವಾದಿರಾಜರ ಕೃತಿಗಳು

### ೧. ಟೀಕೆಗಳು

೧. ಮಹಾಭಾರತಲಕ್ಷಾಲಂಕಾರ
೨. ಮ.ಭಾ.ತಾ.ನಿರ್ಣಯಭಾವಪ್ರಕಾಶಿಕಾ
೩. ತಲವಕಾರೋಪನಿಷದ್ಭಾಷ್ಯಟೀಕಾ
೪. ತೈತ್ತಿರೀಯೋಪನಿಷದ್ಭಾಷ್ಯಟೀಕಾ
೫. ಕಾಠಕೋಪನಿಷದ್ಭಾಷ್ಯಟೀಕಾ
೬. ಆಥರ್ವಣೋಪನಿಷದ್ಭಾಷ್ಯಟೀಕಾ
೭. ಮಾಂಡೂಕೋಪನಿದ್ಭಾಷ್ಯಟೀಕಾ
೮. ತಂತ್ರಸಾರಟೀಕಾ
೯. ಸನತ್ಸುಜಾತೀಯವ್ಯಾಖ್ಯಾನ
೧೦. ಪುರುಷಸೂಕ್ತವ್ಯಾಖ್ಯಾನ

### ೨. ಟಿಪ್ಪಣಿಗಳು:

೧.ನ್ಯಾಯಸುಧಾಗುರ್ವರ್ಥದೀಪಿಕಾ ೨.ತತ್ತ್ವಪ್ರಕಾಶಿಕಾಗುರ್ವರ್ಥದೀಪಿಕಾ
೩.ಈಶಾವಾಸ್ಯೋಪನಿಷದ್ಭಾಷ್ಯಟಿಪ್ಪಣಿ ೪.ಷಟ್ಪ್ರಶ್ನೋಪನಿಷದ್ಭಾಷ್ಯಟೀಕಾಟಿಪ್ಪಣಿ
೫.ಗೀತಾಭಾಷ್ಯಟಿಪ್ಪಣಿ ೬.ಪ್ರಮಾಣಪದ್ಧತಿ ಟಿಪ್ಪಣಿ(?)

### ೩. ಸ್ವತಂತ್ರಗ್ರಂಥಗಳು:

೧. ಯುಕ್ತಿಮಲ್ಲಿಕಾ(ಶ್ಲೋ. ಸಂ. ೫೩೮೯) ೨. ನ್ಯಾಯರತ್ನಾವಲೀ (೯೦೧)
೩. ಚಕ್ರಸ್ತುತಿ (೭೬) ೪. ಉಪನ್ಯಾಸರತ್ನಮಾಲಾ
೫. ಹರಿಭಕ್ತಿಲತಾ (೩೯೪) ೬. ಶ್ರುತಿತತ್ತ್ವಪ್ರಕಾಶಿಕಾ (೫೦೭)
೭. ಸದಾಚಾರಸ್ಮೃತಿ (೬) ೮. ಸಂಕಲ್ಪಪದ್ಧತಿ (೬)
೯. ಏಕಾದಶೀನಿರ್ಣಯ (೫೫) ೧೦.ಭೂಗೋಲನಿರ್ಣಯ(೫೫)
೧೧. ತಾರತಮ್ಯ (೮೧) ೧೨.ಚಿಂತಾಖಂಡನ(೧೫)
೧೩. ಪಾಷಂಡಖಂಡನವ್ಯಾಸಸ್ತೋತ್ರ(೩೦) ೧೪.ಪಾಷಂಡಮತಖಂಡನ (೧೨೯)
೧೫. ಕಲ್ಪಲತಾ ೧೬.ವಿವರಣವ್ರಣ
೧೭. ಶಕುನಮಾಲಾ ೧೮.ಮುಹೂರ್ತರಾಜ
೧೯. ಮಾಧ್ವವಾಗ್ವಜ್ರಾವಲಿ ೨೦.ಸಂಸ್ಕೃತ(ಬ್ರಹ್ಮ)ಸೂತ್ರಾರ್ಥ
೨೧. ನಯಸಿದ್ಧಾಂತಸಂಗ್ರಹ ೨೨.ಅಧಿಕರಣನಾಮವಲಿ
೨೩. ಶ್ರೀಮದ್ಭಾಗವತಾನುಕ್ರಮಣಿಕಾ (೧೧೮) ೨೪.ವಾಯುಸ್ತುತಿಪುರಶ್ಚರಣವಿಧಿ
೨೫. ಪ್ರಮೇಯಮಾಲಿಕಾ

### ೪. ಸ್ವತಂತ್ರಗ್ರಂಥಗಳು(ಕಾವ್ಯಗಳು)

೧. ರುಗ್ಮಿಣೀಶವಿಜಯ(೧೨೪೧) ೩. ತೀರ್ಥಪ್ರಬಂಧ(೨೧೫) ೫. ಭಾಗವತಸಂಗ್ರಹ
೨. ಸರಸಭಾರತೀವಿಲಾಸ (೭೦೦) ೪. ಕವಿಕದಂಬಕಂಠಭೂಷಾ(೧೫)

### ೫. ಸ್ವತಂತ್ರಗ್ರಂಥಗಳು(ಸ್ತೋತ್ರಗಳು)

೧. ರಮೇಶಸ್ತುತಿ (೪) ೨. ವಿಷ್ಣುಸ್ತುತಿ(೯)
೩. ದಶಾವತಾರಸ್ತೋತ್ರ(೯) ೪. ದಶಾವತಾರಸ್ತುತಿ(೩೪)
೫. ಚತುರ್ವಿಂಶತಿ ಮೂರ್ತಿಸ್ತೋತ್ರ(೮) ೬. ವರಾಹಹಯವದನ ಸ್ತೋತ್ರ(೬)
೭. ವರಾಹಪಂಚಕ(೫) ೮. ನರಹರ್ಯಷ್ಟಕ(೯)
೯. ತ್ರಿವಿಕ್ರಮಸ್ತೋತ್ರ(೧೮) ೧೦. ಶ್ರೀರಾಮದಶಕ(೨೪)
೧೧. ಶ್ರೀರಾಮಪಂಚಕ(೬) ೧೨. ಶ್ರೀರಾಮಕವಚ(೧೧)
೧೩. ರೂಪ್ಯಪೀಠಕೃಷ್ಣಸ್ತುತಿ(೯) ೧೪. ಶ್ರೀಕೃಷ್ಣಸ್ತವ(೯)
೧೫. ಶ್ರೀಕೃಷ್ಣಸ್ತುತಿ(೯) ೧೬. ಅಷ್ಟಮಹಿಷೀಕೃತಕೃಷ್ಣಸ್ತುತಿ(೯)
೧೭. ಶ್ರೀಕೃಷ್ಣಸ್ತೋತ್ರ(೯) ೧೮. ಶ್ರೀಕೃಷ್ಣ ಆಪಾದಸ್ತೋತ್ರ(೧೧)
೧೯. ಹರ್ಯಷ್ಟಕ(೯) ೨೦. ಹಯಾಸ್ಯದಶಕ(೧೧)
೨೧. ಹಯವದನಾಷ್ಟಕ(೯) ೨೨. ಹಯಾಸ್ಯನುತಿಪಂಚಕ(೬)
೨೩.ಹಯಗ್ರೀವಧ್ಯಾನಪ್ರಕರಣ(೩೯) ೨೪. ಹಯಗ್ರೀವಸ್ತುತಿ(೧೮)



೨೫. ಹಯಗ್ರೀವಸಂಪದಾಸ್ತೋತ್ರ(೪) ೨೬. ಹಯಗ್ರೀವಸ್ತೋತ್ರ(೧೧)
೨೭. ಶ್ರೀಹಯಗ್ರೀವಸ್ತೋತ್ರ(೧೬) ೨೮. ಶ್ರೀವೇದವ್ಯಾಸಾಷ್ಟಕ(೯)
೨೯. ಶ್ರೀವ್ಯಾಸವರ್ಣನ(೨) ೩೦. ವೇಂಕಟೇಶಸ್ತುತಿಃ
೩೧. ವೇಂಕಟೇಶಮಂಗಲಾಷ್ಟಕ(೯) ೩೨. ಅಕ್ಷಪಂಚಕ(೬)
೩೩. ಉಕ್ತಿಪ್ರತ್ಯುಕ್ತಿಸ್ತೋತ್ರ(೩) ೩೪. ಧೀಶುದ್ಧಿಸ್ತೋತ್ರ(೧೨)
೩೫. ಪ್ರಾರ್ಥನಾದಶಕ(೧೨) ೩೬. ದೇವತಾಹ್ವಾನಪ್ರಕಾರ(ಗದ್ಯ)
೩೭. ಶ್ಲೋಕತ್ರಯ(ನೈವೇದ್ಯವಿಧಿ)(೪) ೩೮. ಪರಮಸ್ತುತಿ(೯)
೩೯. ಋಣಮೋಚನಸ್ತೋತ್ರ(೯) ೪೦. ಸ್ವಪ್ನಪದ್ಯ(೧)
೪೧. ಸಪ್ತರಾತ್ರೋತ್ಸವಪ್ರಕಾರ(೨೩) ೪೨. ಅಭಯಸಂಸ್ತವ(೧೩)
೪೩. ಶ್ರೀಶ್ರೀಶಗುಣದರ್ಪಣ(೧೯) ೪೪. ಲಕ್ಷ್ಮ್ಯಾಯರ್ಯಾವೃತ್ತ (೧೩)
೪೫. ದುರ್ಗಾಸ್ತವ(೧೫) ೪೬. ಅವತಾರತ್ರಯಸ್ತೋತ್ರ(೩)
೪೭. ಮಧ್ವಾಷ್ಟಕ(೯) ೪೮. ವಾಯುಸ್ತುತಿ (೧೫)
೪೯. ಮಧ್ವಮುನಿಪ್ರತಾಪಾಷ್ಟಕ(೯) ೫೦. ನವಗ್ರಹಸ್ತೋತ್ರ(೫)
೫೧. ಶ್ರೀಪಾದರಾಜಷಟ್ಕ(೯) ೫೨. ಸಹಸ್ರಾರಸ್ತುತಿ(ಚಕ್ರಸ್ತುತಿ)(೧೩)
೫೩. ಕುರುಸ್ತುತಿ(೧೫) ೫೪. ಹರಿಭಕ್ತಾಷ್ಟಕ(೯)
೫೫. ಶ್ರೀಕೃಷ್ಣರಾಮಾವತಾರಚರಿತರತ್ನಸಂಗ್ರಹ ೫೬. ಶ್ರೀವೇಂಕಟೇಶಸ್ತೋತ್ರ
೫೭. ಮಂಗಲಾಷ್ಟಕ

### ೬. ಸ್ವತಂತ್ರಕೃತಿಗಳು(ಕನ್ನಡ ಕೃತಿಗಳು)

| | | |
|---|---|---|
| ೧. ವೈಕುಂಠವರ್ಣನೆ | ೬. ನಮಸ್ಕಾರಸ್ತೋತ್ರ | ೧೧. ಉಗಾಭೋಗಗಳು |
| ೨. ಲಕ್ಷ್ಮೀಶೋಭನ | ೭. ಕೇಶವನಾಮ | ೧೨. ಸುಳಾದಿಗಳು |
| ೩. ಸ್ವಪ್ನಪದ | ೮. ನೈವೇದ್ಯಪ್ರಕರಣ | ೧೩.ಶ್ರೀಕೃಷ್ಣಬಾಲಲೀಲೆ, |
| ೪. ಗುಂಡಕ್ರಿಯೆ | ೯. ಅವತಾರತ್ರಯಸುವಾಲಿ | ೧೪. ರಾಗಮಾಲಿಕೆ |
| ೫. ಭ್ರಮರಗೀತೆ | ೧೦. ನೂರಾರು ದೇವರನಾಮಗಳು | |

ಯುಕ್ತಿವೈಭವದ ದೃಷ್ಟಿಯಿಂದ ಅವರ ಸಕಲಕೃತಿಗಳೂ ಯುಕ್ತಿಮಲ್ಲಿಕೆಗಳಾಗಿವೆ. ಶೈಲಿಯ ರಮ್ಯತೆಯಿಂದ 'ಸರಸಭಾರತೀವಿಲಾಸ'ಗಳಾಗಿವೆ; ತತ್ತ್ವದ ದೃಷ್ಟಿಯಿಂದ ರುಗ್ಮಿಣೇಶವಿಜಯವಾಗಿವೆ; ವ್ಯಾಖ್ಯಾನಕೌಶಲದ ದೃಷ್ಟಿಯಿಂದ '**ಗುರ್ವರ್ಥದೀಪಿಕೆ**'-ಗಳಾಗಿವೆ; ಮೂಲಗ್ರಂಥಗಳ '**ಭಾವಪ್ರಕಾಶಿಕೆ**'ಗಳಾಗಿವೆ. ಒಟ್ಟಾಗಿ ಮಹಾಭಾರತಾದಿ ಮೂಲಗ್ರಂಥಗಳಿಗೆ ಅಪೂರ್ವ'**ಅಲಂಕಾರ**' ಪೂಜೆಯಾಗಿವೆ; ಪರಮತವಿಮರ್ಶೆಯ ದೃಷ್ಟಿಯಿಂದ '**ಪಾಷಂಡಮತಖಂಡನ**'ವಾಗಿವೆ; ಕವಿಕದಂಬಕ್ಕೆ '**ಕಂಠಭೂಷ**'ವಾಗಿವೆ; ಹಯಗ್ರೀವ, ಕೃಷ್ಣಾದಿಭಗವದ್ರೂಪಗಳ ದಿವ್ಯಸ್ತೋತ್ರವಾಗಿವೆ; '**ಲಕ್ಷ್ಮೀಸ್ತೋತ್ರ**'ಗಳಾಗಿ ಸಂಪತ್ಕರವೂ '**ಮಧ್ವಸ್ತುತಿ**'ಗಳಾಗಿ ತತ್ತ್ವಜ್ಞಾನಜನಕವೂ ಆಗಿವೆ. ಅವರ ಚಿಂತನೆ ತತ್ತ್ವಶಾಸ್ತ್ರವಾದರೆ, ರಚನೆ ಮಹಾಕಾವ್ಯವಾಗಿದೆ.

(ಹೆಚ್ಚಿನ ವಿವರಗಳಿಗೆ ನಮ್ಮ ಪ್ರಕಾಶನದ ಶ್ರೀವಾದಿರಾಜಕೃತಿಮಂಜರೀ ಕೃತಿಯನ್ನು ನೋಡಬಹುದು.)

# ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನದ ನಿರ್ದೇಶಕರ ಕಾರ್ಯಕ್ರಮಗಳು

೮.೩.೦೯ - 'ಮಧ್ವ ಫಾರ್ ಯೂತ್, ಕಾರ್ಯಾಗಾರ;
ಸ್ಥಳ: ವಿಜಯಭಾರತೀ ಶಾಲೆಯ ಸಭಾಂಗಣ, ಗಿರಿನಗರ, ಬೆಂಗಳೂರು
ವಿಷಯ: **ಗೋಸಂರಕ್ಷಣೆಯ ಮಹತ್ತ್ವ**
ಅಧ್ಯಕ್ಷತೆ: ಶ್ರೀವಿಶ್ವಪ್ರಸನ್ನತೀರ್ಥಶ್ರೀಪಾದರು, ಶ್ರೀಪೇಜಾವರಅಧೋಕ್ಷಜ ಮಠ, ಕಿರಿಯಪಟ್ಟ

೧೨.೩.೦೯ - 'ಶ್ರೀವ್ಯಾಸರಾಜರು ಮತ್ತು ಅವರ ಕೃತಿಗಳು' ಪ್ರವಚನ
ಸ್ಥಳ: ಶ್ರೀರಾಘವೇಂದ್ರಮಠ, ಜಯನಗರ ಟಿ ಬ್ಲಾಕ್, ಬೆಂಗಳೂರು, ಸಮಯ: ಸಂಜೆ ೬.೩೦

೧೩.೩.೦೯ - ಶ್ರೀವಾದಿರಾಜರ ಆರಾಧನೆಯ ನಿಮಿತ್ತ ಪ್ರವಚನ
ಸ್ಥಳ: ಶ್ರೀವ್ಯಾಸಮಧ್ವಸಂಶೋಧನಪ್ರತಿಷ್ಠಾನದ ಸಭಾಂಗಣ, ಸಮಯ: ಸಂಜೆ ೬.೪೫

೧೪.೩.೦೯ - ಶ್ರೀವ್ಯಾಸರಾಜರ ಆರಾಧನೆಯ ನಿಮಿತ್ತ ಪ್ರವಚನ
ಸ್ಥಳ: ಶ್ರೀವ್ಯಾಸಮಧ್ವಸಂಶೋಧನಪ್ರತಿಷ್ಠಾನದ ಸಭಾಂಗಣ, ಸಮಯ: ಸಂಜೆ ೬.೪೫

೧೬.೩.೦೯ - 'ವಿಚಾರಸಂಕಿರಣದ ಅಧ್ಯಕ್ಷತೆ'
ಸ್ಥಳ: ಶ್ರೀಪೂರ್ಣಪ್ರಜ್ಞವಿದ್ಯಾಪೀಠ, ಬೆಂಗಳೂರು
ಸಮಯ: ಬೆಳಿಗ್ಗೆ ೯.೩೦

೨೦.೩.೦೯-೨೭.೦೩.೦೯ರ ವರೆಗೆ 'ಶ್ರೀಮದ್ಭಗವದ್ಗೀತಾ ೭ನೇ ಅಧ್ಯಾಯ' ಪ್ರವಚನ
ಸ್ಥಳ: ನವಮಂತ್ರಾಲಯ ಶ್ರೀರಾಘವೇಂದ್ರಮಠ, ಬಸವನಗುಡಿ, ಬೆಂಗಳೂರು
ಸಮಯ: ಸಂಜೆ ೬.೩೦

೨೭.೩.೦೯ - ಯುಗಾದಿ ನಿಮಿತ್ತ **ಪಂಚಾಂಗಶ್ರವಣ**
ಸ್ಥಳ: ಶ್ರೀವ್ಯಾಸಮಧ್ವಸಂಶೋಧನಪ್ರತಿಷ್ಠಾನದ ಸಭಾಂಗಣ, ಸಮಯ: ಸಂಜೆ ೬.೪೫

೨೮.೩.೦೯ ರಿಂದ ೦೩.೪.೦೯ರ ವರೆಗೆ 'ಶ್ರೀಮದ್ರಾಮಾಯಣ' ಪ್ರವಚನ
ಸ್ಥಳ: ಶ್ರೀರಾಘವೇಂದ್ರಮಠ, ಅಮರಜ್ಯೋತಿನಗರ, ಬೆಂಗಳೂರು
ಸಮಯ: ಸಂಜೆ ೬.೪೫

*****



# ಮಾಸದ ವಿಶೇಷಗಳು

## ಫಾಲ್ಗುಣಮಾಸ (ಕೃಷ್ಣಪಕ್ಷ)

| | |
|---|---|
| ೧೨.೦೩.೦೯ : | ಶ್ರೀಸತ್ಯಬೋಧತೀರ್ಥರ ಪು. ಸವಣೂರು.<br>ಶ್ರೀಸುಧೀಂದ್ರತೀರ್ಥರ ಪು. ನವವೃಂದಾವನ.<br>ಶ್ರೀವಿಜಯನಿಧಿತೀರ್ಥರ ಪು. ಮುಳಬಾಗಿಲು. |
| ೧೩.೦೩.೦೯ : | ಶ್ರೀವಾದಿರಾಜತೀರ್ಥರ ಪು. ಸೋದೆ. |
| ೧೪.೦೩.೦೯ : | ಮೀನಸಂಕ್ರಮಣ; ಶ್ರೀವ್ಯಾಸರಾಜರ ಪು. ನವವೃಂದಾವನ. |
| ೧೫.೦೩.೦೯ : | ಶ್ರೀಗೋವಿಂದ ಒಡೆಯರ ಪು. ನವವೃಂದಾವನ. |
| ೧೬.೦೩.೦೯ : | ಶ್ರೀಉದ್ದಂಡರಾಮಚಂದ್ರತೀರ್ಥರ ಪು. ಪೆನಗೊಂಡ. |
| ೧೯.೦೩.೦೯ : | ಶ್ರೀಸುಧಿನಿಧಿತೀರ್ಥರ ಪು. ಒಡಪಳ್ಳಿ. |
| ೨೨.೦೩.೦೯ : | **ಸಕಲವೈಷ್ಣವರಿಗೂ ಏಕಾದಶೀ** (ಪಾಪಮೋಚನೀ) |
| ೨೬.೦೩.೦೯ : | ದರ್ಶ (ವಿಷ್ಣುಪಂಚಕವ್ರತ); ಯುಗಾದಿ ಅಮಾವಾಸ್ಯಾ;<br>ಶ್ರೀಸತ್ಯಸಂತುಷ್ಟತೀರ್ಥರ ಪು. ಮೈಸೂರು, ಮನ್ವಾದಿ |

## ಚೈತ್ರಮಾಸ (ಶುಕ್ಲಪಕ್ಷ) ಮಾಸನಿಯಾಮಕ (ಪದ್ಮೀ-ವಿಷ್ಣು)

| | |
|---|---|
| ೨೭.೦೩.೦೯: | ಚಾಂದ್ರಮಾನ ಯುಗಾದಿ; ಪಂಚಾಂಗಶ್ರವಣ;<br>ಶ್ರೀರಾಮನವರಾತ್ರೋತ್ಸವಾರಂಭ, ಚಂದ್ರದರ್ಶನ.<br>ಶ್ರೀಪುರುಷೋತ್ತಮತೀರ್ಥರ ಪು. (ಅಬ್ಬೂರು) |
| ೨೮.೦೩.೦೯: | ಶ್ರೀವೇದವ್ಯಾಸತೀರ್ಥರ ಪು. (ಪೆನುಗೊಂಡ)<br>ಶ್ರೀಸತ್ಯಪ್ರಜ್ಞತೀರ್ಥರ ಪು. (ಆತಕೂರ್) |
| ೨೯.೦೩.೦೯: | ಮತ್ಸ್ಯಜಯಂತೀ, ಮನ್ವಾದಿ; ಗೌರೀತೃತೀಯಾ. |
| ೦೨.೦೪.೦೯: | ಭವಾನೀ ಜಯಂತಿ. |
| ೧೪.೦೪.೦೯: | ಸೌರಮಾನ ಯುಗಾದಿ; ಭವಾನೀ ಜಯಂತಿ. |
| ೦೩-೦೪-೦೯: | ಶ್ರೀರಾಮನವಮೀ; |
| ೦೯-೦೪-೦೯: | ಹನುಮಜ್ಜಯಂತೀ; ವೈಶಾಖಸ್ನಾನಾರಂಭ; ವಿಷ್ಣುಪಂಚಕ ಉಪವಾಸ |
| ೧೨-೦೪-೦೯: | ಗೌರೀತೃತೀಯಾ; ಶ್ರೀವಾಗೀಶತೀರ್ಥರ ಪು. (ನವವೃಂದಾವನ) |
| ೧೯-೪-೦೯: | ಶ್ರವಣ - ವಿಷ್ಣುಪಂಚಕ ಉಪವಾಸವಿರುವುದಿಲ್ಲ. |

೧೯-೪-೦೯: ಶ್ರವಣ - ವಿಷ್ಣುಪಂಚಕ ಉಪವಾಸವಿರುವುದಿಲ್ಲ.

೨೪-೦೪-೦೯: ದರ್ಶ

೨೫-೦೪-೦೯: ವಿಷ್ಣುಪಂಚಕ

### ಕೆಲವು ಉತ್ಸವಗಳು

೨.೪.೦೯: ನವಲಿ ಭೋಗಾಪುರೇಶ್ವರ ರಥೋತ್ಸವ (ನವಲಿ)

೪-೪-೦೯: ಕೋರವಾರ ಪ್ರಾಣದೇವರ ರಥೋತ್ಸವ

೧೪-೪-೦೯: ಚಂದ್ರಲಾ ದೇವ್ಯುತ್ಸವ (ಸನ್ನತಿ)

### ಗುರುಗಳ ಪುಣ್ಯದಿನಗಳು

೨೭-೩-೦೯: ಶ್ರೀಪುರುಷೋತ್ತಮತೀರ್ಥರು. (ವ್ಯಾ.ಮ.)ಪು.ಅಬ್ಬೂರು.

೨೮.೦೩.೦೯: ಶ್ರೀವೇದವ್ಯಾಸತೀರ್ಥರು(ಉ.ಮ.).ಪು. ಪೆನಗೊಂಡೆ.
ಶ್ರೀಸತ್ಯಪ್ರಜ್ಞತೀರ್ಥರು(ಉ.ಮ.).ಪು. ಆತಕೂರು.

೦೩-೦೪-೦೯: ಶ್ರೀಕವೀಂದ್ರತೀರ್ಥರ ಪುಣ್ಯದಿನ, ನವವೃಂದಾವನ;
ಶ್ರೀಸತ್ಯಧ್ಯಾನತೀರ್ಥರು (ಉ.ಮ.)ಪು. ಪಂಢರಾಪುರ.

೦೭-೦೪-೦೯: ಶ್ರೀಸತ್ಯಪ್ರಿಯತೀರ್ಥರು (ಉ.ಮ.) ಪು. ಮಾನಾಮಧುರೈ.

೧೨-೦೪-೦೯: ಶ್ರೀವಾಗೀಶತೀರ್ಥರು ಪು. ನವವೃಂದಾವನ;
ಶ್ರೀಸುಬೋಧೇಂದ್ರತೀರ್ಥರು.(ರಾ.ಮ.) ನಂಜನಗೂಡು.

೨೧-೪-೦೯: ಶ್ರೀಸತ್ಯವಿಜಯತೀರ್ಥರು (ಉ.ಮ.) ಪು. ಸತ್ಯವಿಜಯನಗರ.

* * * *

---

'ಆತ್ಮವಿಚ್ಚರಣಾರ್ಚನಮ್' ಎಂಬುದಾಗಿ ಶ್ರೀಮದ್ಭಾಗವತದಲ್ಲಿ ಬ್ರಹ್ಮಜ್ಞಾನಿಗಳ ಆರಾಧನೆಯನ್ನು ಮೋಕ್ಷಸಾಧನೆಯಲ್ಲಿ ಒಂದು ಎಂಬುದಾಗಿ ನಿರೂಪಿಸಲಾಗಿದೆ. ಇದರಿಂದ ಗುರುಗಳ ಆರಾಧನೆಗೆ ವಿಶೇಷ ಮಹತ್ತ್ವವಿರುವುದು ಸ್ಫುಟ-ಪಡುವುದು.



# ವಿರೋಧಿ ಸಂವತ್ಸರದ ಸ್ಥೂಲಮಾಹಿತಿ

ಲೇಖಕರು – ಡಾ || ವ್ಯಾಸನಕೆರೆ ಪ್ರಭಂಜನಾಚಾರ್ಯ

ಸರ್ವಧಾರಿ ಕಳೆಯುತ್ತಿರುವಂತೆ ವಿರೋಧಿ ಸಂವತ್ಸರ ಆಗಮಿಸಿದೆ. ಚಕ್ರಧಾರಿ ಗಿರಿಧಾರಿಯಾದ ಶ್ರೀಹರಿಯೇ ಇತರ ಎಲ್ಲ ಸಂವತ್ಸರಗಳಂತೆ ಇದಕ್ಕೂ ಪ್ರಧಾನ ಅಧಿದೇವತೆ. ಶ್ರೀಹರಿಯು ದುಷ್ಟವಿರೋಧಿ, ಅಧರ್ಮವಿರೋಧಿ ಎಂದು ಚಿಂತಿಸಿ, ದುಷ್ಟತನ ಅಧರ್ಮಗಳಿಂದ ದೂರ ಇರುವವರಿಗೆ ಮಂಗಲ ನೀಡುವುದು ಇದರ ಹಿರಿಮೆ. ನಮ್ಮೆಡೆಗೆ ದುಷ್ಟರು, ಅಧರ್ಮಗಳು ಬರದಂತೆ ಶ್ರೀಹರಿಯು ಅವೆಲ್ಲವುಗಳಿಗೆ ವಿರೋಧಿಯಾಗಿ ನಿಂತು ಪಾಲಿಸಲಿ. ರಾವಣನ ಆಕ್ರಮಣದಿಂದ ಬಲಿಚಕ್ರವರ್ತಿಯನ್ನು ಪಾಲಿಸಿದಂತೆ ಎಂಬ ಅನುಸಂಧಾನವಿದ್ದಲ್ಲಿ ಈ ಸಂವತ್ಸರ ಮಂಗಲದಾಯಕವಾಗುವುದು ಖಚಿತ. ಈ ಸಂವತ್ಸರದ ಮುಖ್ಯವಿವರಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ನೀಡಲಾಗಿದೆ. ಇದು ಶಾಲಿವಾಹನ ಶಕೆಯ ಲೆಕ್ಕದಲ್ಲಿ ೧೯೩೧; ಕ್ರಿ.ಶ. ೨೦೦೯-೨೦೧೦.

### ಸಂವತ್ಸರದ ರಾಜ, ಮಂತ್ರಿ ಮೊದಲಾದವರು

ಈ ಸಂವತ್ಸರಕ್ಕೆ ರಾಜ ಶುಕ್ರ. ಚಂದ್ರ - ಮಂತ್ರಿ. ಸೇನಾಧಿಪತಿಯೂ ಅವನೇ; ಪೂರ್ವಸಸ್ಯಾಧಿಪ ಗುರು; ಅಪರಸಸ್ಯಾಧಿಪ ಚಂದ್ರ; ಮಧ್ಯ ಧಾನ್ಯಾಧಿಪ ಗುರು; ಅರ್ಘಾಧಿಪ ಚಂದ್ರ; ಮೇಘಾಧಿಪನೂ ಅವನೇ; ರಸಾಧಿಪ ಶನಿ. ನೀರಸಾಧಿಪ ಗುರು.

### ಸಂಕ್ರಮಣಗಳು

ಮೇಷಸಂಕ್ರಮಣ – ಚೈತ್ರ ಕೃಷ್ಣ ಚತುರ್ಥೀ, ಸೋಮವಾರದಂದು (೧೩-೦೪-೨೦೦೯). ೧೪-೦೪-೨೦೦೯ ರಂದು ಸೌರಯುಗಾದಿ.

ಕರ್ಕಸಂಕ್ರಮಣ – ಆಷಾಢ ಕೃಷ್ಣ ನವಮೀ, ಗುರುವಾರ (೧೬-೦೭-೨೦೦೯).

ಮಕರಸಂಕ್ರಮಣ – ಪುಷ್ಯ ಕೃಷ್ಣ ಚತುರ್ದಶೀ, ಗುರುವಾರ (೧೪-೦೧-೨೦೧೦)

### ಗ್ರಹಣಗಳು

೧. ಆಷಾಢ ಶುಕ್ಲ ಪೂರ್ಣಿಮಾ (೦೭-೦೭-೨೦೦೯) ಹಾಗೂ ಶ್ರಾವಣ ಶುಕ್ಲ ಪೂರ್ಣಿಮಾ (೦೬-೦೮-೨೦೦೯) ರಂದು ಚಂದ್ರಗ್ರಹಣಗಳು ಸಂಭವಿಸಿದರೂ, ಅವು ಭಾರತದಲ್ಲಿ ಅಗೋಚರ ಹಾಗೂ ಛಾಯಾಕಲ್ಪ ಎನ್ನಿಸುವುದರಿಂದ ಆಚರಣೆ ಅಗತ್ಯವಿಲ್ಲ.

೨. ಆಷಾಢ ಕೃಷ್ಣ ಅಮಾವಾಸ್ಯೆ ಬುಧವಾರ(೨೨-೦೭-೨೦೦೯)ದಂದು ಕೇತುಗ್ರಸ್ತ **ಸೂರ್ಯಗ್ರಹಣ**. ಅಂದು ಬೆಳಿಗ್ಗೆ ಗ್ರಹಣದ ಅನಂತರ (ಬೆಳಿಗ್ಗೆ ೭.೨೧) ಪೂಜಾ ಭೋಜನಾದಿಗಳು. ಹಿಂದಿನ ದಿನ (ಮಂಗಳವಾರ) ಸೂರ್ಯಾಸ್ತದಿಂದ ವೇಧ ಆರಂಭವಾಗುವುದು. ಸ್ಪರ್ಶಕಾಲ: ಬೆಳಿಗ್ಗೆ ೬.೦೪; ಮೋಕ್ಷ: ಬೆಳಿಗ್ಗೆ ೭.೨೧.

೨. ಪುಷ್ಯ ಶುಕ್ಲ ಪೌರ್ಣಿಮಾ, ಗುರುವಾರ ಮಧ್ಯರಾತ್ರಿ (೩೧-೧೨-೨೦೦೯) ಕೇತುಗ್ರಸ್ತ **ಚಂದ್ರಗ್ರಹಣ**. ಮಧ್ಯಾಹ್ನ ೧೨-೨೮ರವರೆಗೆ ಪೂಜಾ, ಭೋಜನಾದಿಗಳಿಗೆ ಅವಕಾಶ. ರಾತ್ರಿಭೋಜನವಿರುವುದಿಲ್ಲ. ಸ್ಪರ್ಶಕಾಲ: ರಾತ್ರಿ ೧೨.೨೩; ಮೋಕ್ಷಕಾಲ: ರಾತ್ರಿ ೧.೨೩

೩. ಪುಷ್ಯ ಕೃಷ್ಣ ಅಮಾವಾಸ್ಯೆ ಶುಕ್ರವಾರ (೧೫-೦೧-೨೦೧೦) ರಾಹುಗ್ರಸ್ತ **ಸೂರ್ಯಗ್ರಹಣ**. ಹಿಂದಿನ ದಿನ (ಗುರುವಾರ) ರಾತ್ರಿ ೯.೩೦ರಿಂದ ವೇಧಾರಂಭ; ಗ್ರಹಣಮೋಕ್ಷಾನಂತರ ಸ್ನಾನ ಪೂಜಾದಿಗಳಿಗೆ ಅವಕಾಶ. ಸ್ಪರ್ಶಕಾಲ: ಮಧ್ಯಾಹ್ನ ೧೧.೧೯; ಮೋಕ್ಷಕಾಲ: ಮಧ್ಯಾಹ್ನ ೩-೧೦

**(ಗ್ರಹಣಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಆಯಾ ತಿಂಗಳ ಸಂಚಿಕೆಗಳಲ್ಲಿ ನೀಡಲಾಗುವುದು.)**

## ಶ್ರೀಕೃಷ್ಣಾಷ್ಟಮೀ

೧೩-೦೮-೨೦೦೯ - ಗುರುವಾರ - ಶ್ರೀಕೃಷ್ಣಾಷ್ಟಮೀ.
ಚಂದ್ರೋದಯ: ರಾತ್ರಿ ೧೧:೩೭.
೧೪-೦೮-೨೦೦೯ ರಂದು ಪ್ರಾತಃ ೭:೧೮ಕ್ಕೆ ಪಾರಣೆ.

## ಅತಿರಿಕ್ತ ಏಕಾದಶೀ/ಶ್ರವಣದ್ವಾದಶೀ ಉಪವಾಸ

೧) ಆಶ್ವಿನ ಶುಕ್ಲಪಕ್ಷದಲ್ಲಿ ದೇಶಭೇದದಿಂದ ಭೋಜ್, ರಾಜಕೋಟ್, ದ್ವಾರಕಾ, ಜಾಮನಗರ್ - ಈ ಸ್ಥಳಗಳಲ್ಲಿ ಅತಿರಿಕ್ತ ಏಕಾದಶೀ (೨೮-೯-೨೦೦೯ - ದಶಮೀ, ೨೯-೯-೨೦೦೯ ಹಾಗೂ ೩೦-೯-೨೦೦೯ ರಂದು ಏಕಾದಶೀ ಆಚರಣೆ, ೧-೧೦-೨೦೦೯ ಕಲಾಮಾತ್ರಸಾಧನೀ); ಉಳಿದ ಪ್ರದೇಶದಲ್ಲಿರುವವರಿಗೆ ೩೦-೯-೨೦೦೯ರಂದು ಏಕಾದಶೀ ಹಾಗೂ ೧-೧೦-೨೦೦೯ ಕಲಾಮಾತ್ರಸಾಧನೀ.

೨) ಫಾಲ್ಗುಣ ಕೃಷ್ಣ ದ್ವಾದಶೀಯಂದು (೧೨-೦೩-೨೦೧೦) ಶ್ರವಣೋಪವಾಸ

**(ವಿವರಗಳನ್ನು ಆಯಾ ಮಾಸಗಳ ಸಂಚಿಕೆಗಳಲ್ಲಿ ನೀಡಲಾಗುವುದು)**



## ಚಾತುರ್ಮಾಸ್ಯ ವ್ರತ

೦೨-೦೭-೨೦೦೯ - ಗುರುವಾರ - ಚಾತುರ್ಮಾಸ್ಯವ್ರತಾರಂಭ
೦೩-೦೭-೨೦೦೯ - ಶುಕ್ರವಾರ - ಶಯನ್ಯೈಕಾದಶೀ -
ತಪ್ತಮುದ್ರಾಧಾರಣ - ಶಾಕವ್ರತಾರಂಭ.
೦೧-೦೮-೨೦೦೯ - ಶನಿವಾರ - ದಧಿವ್ರತಾರಂಭ.
೩೧-೦೮-೨೦೦೯ - ಸೋಮವಾರ - ಕ್ಷೀರವ್ರತಾರಂಭ.
೩೦-೦೯-೨೦೦೯ - ಬುಧವಾರ - ದ್ವಿದಳವ್ರತಾರಂಭ.
೩೦-೧೦-೨೦೦೯ - ಶುಕ್ರವಾರ - ಉತ್ಥಾನದ್ವಾದಶೀ - ತುಲಸೀವಿವಾಹ.
೦೧-೧೧-೨೦೦೯ - ರವಿವಾರ - ವೈಕುಂಠಚತುರ್ದಶೀ - ಧಾತ್ರೀಪೂಜಾ

## ಧನುರ್ಮಾಸ

೧೬-೧೨-೨೦೦೯ ರಿಂದ ೧೩-೦೧-೨೦೧೦

## ವಿಶೇಷ ವ್ರತಗಳು

೩೧-೦೭-೨೦೦೯ - ಶುಕ್ರವಾರ - ವರಮಹಾಲಕ್ಷ್ಮೀವ್ರತ
೦೩-೦೯-೨೦೦೯ - ಗುರುವಾರ - ಅನಂತಚತುರ್ದಶೀ ವ್ರತ
೨೯-೧೨-೨೦೦೯ - ಮಂಗಳವಾರ - ಮುಕ್ಕೋಟಿದ್ವಾದಶೀ
೧೫-೦೨-೨೦೧೦ರಿಂದ ೨೬-೦೨-೨೦೧೦ - ಪಯೋವ್ರತ

## ಋಷಿಪಂಚಮೀ ವ್ರತ

೨೪-೦೮-೨೦೦೯ - ಸೋಮವಾರ - ಋಷಿಪಂಚಮೀ ವ್ರತ

## ಉಪಾಕರ್ಮ

ಈ ಸಲ ಶ್ರಾವಣ ಶುಕ್ಲ ಪೂರ್ಣಿಮಾ (೫-೮-೨೦೦೯)ದಂದು ಯಜುರ್ವೇದಿಗಳಿಗೆ (ನೂತನರಿಗೂ ಸಹ) ಉಪಾಕರ್ಮ. ಶ್ರಾವಣ ಕೃಷ್ಣ ಪಾಡ್ಯದಂದು (೬-೮-೨೦೦೯) ಋಗ್ವೇದಿಗಳಿಗೆ (ನೂತನರಿಗೂ ಸಹ) ಉಪಾಕರ್ಮ.

## ಪಕ್ಷಮಾಸ ವಿಚಾರ

೫-೯-೨೦೦೯ರಿಂದ ೧೮-೯-೨೦೦೯ವರೆಗೆ ಪಕ್ಷಮಾಸ.

## ಪ್ರೋಷ್ಠಪದೀ ಭಾಗವತ

೨೧-೮-೨೦೦೯ ಶುಕ್ರವಾರದಿಂದ ೪-೯-೨೦೦೯ ಶುಕ್ರವಾರದವರೆಗೆ

## ಶ್ರೀಮಧ್ವಜಯಂತೀ - ಶ್ರೀಮಧ್ವನವಮೀ

೨೮-೦೯-೨೦೦೯ - ಸೋಮವಾರ - ಮಧ್ವಜಯಂತೀ

೨೪-೦೧-೨೦೧೦ - ರವಿವಾರ - ಮಧ್ವನವಮೀ

## ಅಷ್ಟಮಠದ ಮೂಲಗುರುಗಳ ಆರಾಧನೆಗಳು

೧) ಫಲಿಮಾರುಮಠ - ಶ್ರೀಹೃಷೀಕೇಶತೀರ್ಥರು - ಮಾಘ ಶು.ಸಪ್ತಮೀ; ಕಾಶಿ

೨) ಅದಮಾರುಮಠ- ಶ್ರೀನರಸಿಂಹತೀರ್ಥರು - ಚೈತ್ರ ಶು. ಪಂಚಮೀ; ಭಾಗೀರಥೀ

೩) ಕೃಷ್ಣಾಪುರಮಠ - ಶ್ರೀಜನಾರ್ದನತೀರ್ಥರು - ವೈಶಾಖ ಶು.ದ್ವಾದಶೀ; ಪ್ರಯಾಗ

೪) ಪುತ್ತಿಗೆಮಠ - ಶ್ರೀಉಪೇಂದ್ರತೀರ್ಥರು - ಮಾಘ ಶು.ದ್ವಾದಶೀ; ಕೃಷ್ಣಾತೀರ

೫) ಶಿರೂರುಮಠ - ಶ್ರೀವಾಮನತೀರ್ಥರು - ವೈಶಾಖ ಶು.ದಶಮೀ; ಪ್ರಯಾಗ

೬) ಸೋದೆಮಠ - ಶ್ರೀವಿಷ್ಣುತೀರ್ಥರು - ಮಾಘ ಕೃ. ತ್ರಯೋದಶೀ; ಕುಮಾರಪರ್ವತ

೭) ಕಾಣಿಯೂರುಮಠ -ಶ್ರೀರಾಮತೀರ್ಥರು- ಮಾಘ ಕೃ.ಪಂಚಮೀ; ಹಿಮತ್ಕೀತಾರ

೮) ಪೇಜಾವರಮಠ -ಶ್ರೀಅಧೋಕ್ಷಜತೀರ್ಥರು - ಮಾಘ ಶು. ಸಪ್ತಮೀ; ಧನುಷ್ಕೋಟಿ

ವಿ.ಸೂ. – ಇವರಲ್ಲಿ ಶ್ರೀಮದಾಚಾರ್ಯರ ಸಾಕ್ಷಾತ್ ಸೋದರರಾದ ಶ್ರೀವಿಷ್ಣುತೀರ್ಥರು ಮಾತ್ರ ದೇಹ ತೊರೆಯದೆ ಇಂದಿಗೂ ಕುಮಾರಪರ್ವತದಲ್ಲಿ ತಪೋನಿರತರಾಗಿರುವರು ಎಂಬುದು ಸುಪ್ರಸಿದ್ಧ. ಇಲ್ಲಿ ಕೊಟ್ಟಿರುವುದು ಅವರು ಕುಮಾರಪರ್ವತಾರೋಹಣ ಮಾಡಿದ ದಿನ.

## ಇತರ ಪ್ರಮುಖಗುರುಗಳ ಆರಾಧನೆಗಳು

೦೬-೦೬-೨೦೦೯ - ಶನಿವಾರ - ಶ್ರೀಶ್ರೀಪಾದರಾಜರ ಆರಾಧನೆ

೨೦-೦೬-೨೦೦೯ - ಶನಿವಾರ - ಶ್ರೀವಿಜಯೀಂದ್ರತೀರ್ಥರ ಆರಾಧನೆ

೧೨-೦೭-೨೦೦೯ - ರವಿವಾರ - ಶ್ರೀಜಯತೀರ್ಥರ ಆರಾಧನೆ

೦೮-೦೮-೨೦೦೯ - ಶನಿವಾರ - ಶ್ರೀರಾಘವೇಂದ್ರಸ್ವಾಮಿಗಳ ಆರಾಧನೆ

೧೩-೦೮-೨೦೦೯ - ಗುರುವಾರ - ಶ್ರೀವ್ಯಾಸತತ್ತ್ವಜ್ಞರ ಆರಾಧನೆ

೧೫-೧೧-೨೦೦೯ - ರವಿವಾರ - ಶ್ರೀಪದ್ಮನಾಭತೀರ್ಥಆರಾಧನೆ

೦೬-೧೨-೨೦೦೯ - ರವಿವಾರ - ಶ್ರೀಅಕ್ಷೋಭ್ಯತೀರ್ಥರ ಆರಾಧನೆ



೦೭-೦೧-೨೦೧೦ - ಗುರುವಾರ - ಶ್ರೀನರಹರಿತೀರ್ಥರ ಆರಾಧನೆ

೧೮-೦೯-೨೦೦೯ - ಶುಕ್ರವಾರ - ಶ್ರೀಮಾಧವತೀರ್ಥರ ಆರಾಧನೆ

೨೮-೧೨-೨೦೦೯ - ಸೋಮವಾರ - ಶ್ರೀರಘೂತ್ತಮತೀರ್ಥರ ಆರಾಧನೆ

೧೧-೦೨-೨೦೧೦ - ಗುರುವಾರ - ಶ್ರೀಅಡವಿ ವಿಷ್ಣುತೀರ್ಥರ ಆರಾಧನೆ

೦೩-೦೩-೨೦೧೦ - ಬುಧವಾರ - ಶ್ರೀವಾದಿರಾಜಸ್ವಾಮಿಗಳ ಆರಾಧನೆ

೦೪-೦೩-೨೦೧೦ - ಗರುವಾರ - ಶ್ರೀವ್ಯಾಸರಾಜಸ್ವಾಮಿಗಳ ಆರಾಧನೆ

## ಪ್ರಮುಖ ಹರಿದಾಸರ ಪುಣ್ಯದಿನಗಳು

೨೯-೮-೨೦೦೯ ಶನಿವಾರ - ಶ್ರೀಜಗನ್ನಾಥದಾಸರ ಪುಣ್ಯದಿನ(೨೦೦ನೇ ಪುಣ್ಯದಿನ)

೨೮-೦-೨೦೦೯ ಬುಧವಾರ - ಶ್ರೀವಿಜಯದಾಸರ ಪುಣ್ಯದಿನ

೦೮-೧-೨೦೧೦ ಶುಕ್ರವಾರ - ಶ್ರೀಗೋಪಾಲದಾಸರ ಪುಣ್ಯದಿನ

೧೫-೧-೨೦೧೦ ಶುಕ್ರವಾರ - ಶ್ರೀಪುರಂದರದಾಸರ ಪುಣ್ಯದಿನ

*****

## ನಕ್ಷತ್ರಾಭಿಮಾನಿ ದೇವತೆಗಳು

| | |
|---|---|
| ಅಶ್ವಿನೀ (ಅಶ್ವಿನೀ ದೇವತೆಗಳು) | ಸ್ವಾತೀ (ವಾಯು) |
| ಭರಣೀ (ಯಮ) | ವಿಶಾಖಾ (ಇಂದ್ರ, ಅಗ್ನಿ) |
| ಕೃತ್ತಿಕಾ (ಅಗ್ನಿ) | ಅನುರಾಧ (ಮಿತ್ರ) |
| ರೋಹಿಣೀ (ಬ್ರಹ್ಮ) | ಜ್ಯೇಷ್ಠಾ (ಇಂದ್ರ) |
| ಮೃಗಶಿರ (ಚಂದ್ರ) | ಮೂಲ (ನಿರ್ಋತಿ) |
| ಆರಿದ್ರಾ (ರುದ್ರ) | ಪೂರ್ವಾಷಾಢಾ (ಬುಧ) |
| ಪುನರ್ವಸು (ಅದಿತಿ) | ಉತ್ತರಾಷಾಢಾ (ವಿಶ್ವೇದೇವತೆಗಳು) |
| ಪುಷ್ಯ (ಬೃಹಸ್ಪತಿ) | ಶ್ರವಣ (ವಿಷ್ಣು) |
| ಅಶ್ಲೇಷ (ಸರ್ಪ) | ಧನಿಷ್ಠಾ (ವಸು) |
| ಮಘಾ (ಪಿತೃಗಳು) | ಶತಭಿಷಾ (ವರುಣ) |
| ಪೂರ್ವಾಫಾಲ್ಗುಣೀ (ಭಗ) | ಪೂರ್ವಾಭಾದ್ರ (ಅಜೈಕಪಾತ್) |
| ಉತ್ತರಾಫಾಲ್ಗುಣೀ (ಅರ್ಯಮಾ) | ಉತ್ತರಾಭಾದ್ರ (ಅಹಿರ್ಬುರ್ಧ್ನಿ) |
| ಹಸ್ತ(ಸೂರ್ಯ) | ರೇವತೀ (ಪೂಷಾ) |
| ಚಿತ್ರಾ (ತ್ವಷ್ಟೃ) | |

## ೨೦೦೯ - ೨೦೧೦ ವಿರೋಧಿ ಸಂವತ್ಸರದ

# ದಶಮ್ಯಾದಿ ದಿನತ್ರಯಗಳ ವಿವರ

| | ದಶಮೀ | ಏಕಾದಶೀ | ದ್ವಾದಶೀ | ಹರಿವಾಸರ / ಸಾಧನೀ |
|---|---|---|---|---|
| ಚೈತ್ರಶುಕ್ಲ | ೪-೪-೦೯ | ೫-೪-೦೯ | ೬-೪-೦೯ | ದ್ವಾದಶೀ ಹರಿವಾಸರ ಪ್ರಾತಃ ಘಂ. ೬.೨೦ |
| ಚೈತ್ರ ಕೃಷ್ಣ | ೨೦-೪-೦೯ | ೨೧-೪-೦೯ | ೨೨-೪-೦೯ | |
| ವೈಶಾಖ ಶು. | ೪-೫-೦೯ | ೫-೫-೦೯ | ೬-೫-೦೯ | |
| ವೈಶಾಖ ಕೃ. | ೧೯-೫-೦೯ | ೨೦-೫-೦೯ | ೨೧-೫-೦೯ | |
| ಜ್ಯೇಷ್ಠ ಶು. | ೨-೬-೦೯ | ೩-೬-೦೯ | ೪-೬-೦೯ | |
| ಜ್ಯೇಷ್ಠ ಕೃ. | ೧೮-೬-೦೯ | ೧೯-೬-೦೯ | ೨೦-೬-೦೯ | |
| ಆಷಾಢ ಶು | ೨-೭-೦೯ | ೩-೭-೦೯ | ೪-೭-೦೯ | |
| ಆಷಾಢ ಕೃ | ೧೭-೭-೦೯ | ೧೮-೭-೦೯ | ೧೯-೭-೦೯ | |
| ಶ್ರಾವಣ ಶು | ೩೧-೭-೦೯ | ೧-೮-೦೯ | ೨-೮-೦೯ | |
| ಶ್ರಾವಣ ಕೃ. | ೧೫-೦೮-೦೯ | ೧೬-೦೮-೦೯ | ೧೭-೦೮-೦೯ | ದ್ವಾದಶೀ ಹರಿವಾಸರ ಪ್ರಾತಃ ಘಂ. ೬.೫೩ |
| ಭಾದ್ರಪದ ಶು | ೩೦-೦೮-೦೯ | ೩೧-೮-೦೯ | ೧-೯-೦೯ | |
| ಭಾದ್ರಪದ ಕೃ | ೧೪-೦೯-೦೯ | ೧೫-೦೯-೦೯ | ೧೬-೦೯-೦೯ | ಅಲ್ಪದ್ವಾದಶೀ ಪ್ರಾತಃ ಘಂ. ೬.೩೬ |
| ಆಶ್ವೀಜ ಶು | ೨೯-೯-೦೯ | ೩೦-೯-೦೯ | ೧-೧೦-೦೯ | ಅಲ್ಪದ್ವಾದಶೀ ಪ್ರಾತಃ ಘಂ. ೭.೨೫ |
| ಆಶ್ವೀಜ ಕೃ. | ೧೩-೧೦-೦೯ | ೧೪-೧೦-೦೯ | ೧೫-೧೦-೦೯ | |
| ಕಾರ್ತೀಕ ಶು | ೨೮-೧೦-೦೯ | ೨೯-೧೦-೦೯ | ೩೦-೧೦-೦೯ | |
| ಕಾರ್ತೀಕ ಕೃ | ೧೨-೧೧-೦೯ | ೧೩-೧೧-೦೯ | ೧೪-೧೧-೦೯ | |
| ಮಾರ್ಗಶಿರ ಶು | ೨೭-೧೧-೦೯ | ೨೮-೧೧-೦೯ | ೨೯-೧೧-೦೯ | |
| ಮಾರ್ಗಶಿರ ಕೃ | ೧೧-೧೨-೦೯ | ೧೨-೧೨-೦೯ | ೧೩-೧೨-೦೯ | |
| ಪುಷ್ಯ ಶು | ೨೭-೧೨-೦೯ | ೨೮-೧೨-೦೯ | ೨೯-೧೨-೦೯ | ಕಲಾಮಾತ್ರಸಾಧನೀ |
| ಪುಷ್ಯ ಕೃ. | ೧೦-೧-೧೦ | ೧೧-೧-೧೦ | ೧೨-೧-೧೦ | |
| ಮಾಘ ಶು | ೨೫-೧-೧೦ | ೨೬-೧-೧೦ | ೨೭-೧-೧೦ | |
| ಮಾಘ ಕೃ | ೮-೨-೧೦ | ೯-೨-೧೦ | ೧೦-೨-೧೦ | |
| ಫಾಲ್ಗುಣ ಶು | ೨೪-೨-೧೦ | ೨೫-೨-೧೦ | ೨೬-೨-೧೦ | |
| ಫಾಲ್ಗುಣ ಕೃ | ೧೦-೩-೧೦ | ೧೧-೩-೧೦ | ಶ್ರವಣದ್ವಾದಶೀ ಉಪವಾಸ ೧೨-೩-೧೦ | ೧೩-೩-೧೦ ಪಾರಣೆ |



ವಿ.ಸೂ.: ೧. ಆಶ್ವಿನ ಶುಕ್ಲಪಕ್ಷದಲ್ಲಿ ದೇಶಭೇದದಿಂದ ಅತಿರಿಕ್ತ ಏಕಾದಶಿಯಿದೆ; ಹಾಗೂ ಫಾಲ್ಗುಣ ಕೃಷ್ಣಪಕ್ಷದಲ್ಲಿ ಶ್ರವಣೋಪವಾಸವಿದೆ; ಹೆಚ್ಚಿನ ವಿವರಗಳನ್ನು ಆಯಾ ಮಾಸಗಳ ಸಂಚಿಕೆಯಲ್ಲಿ ತಿಳಿಸಲಾಗುವುದು.

೨. ಏಕಾದಶೀನಿರ್ಣಯದ ಬಗ್ಗೆ ಗೊಂದಲವುಂಟಾದಾಗ ಶ್ರೀಮದಾಚಾರ್ಯರು ಕೃಷ್ಣಾಮೃತಮಹಾರ್ಣವ(೧೪೧)ದಲ್ಲಿ ನೀಡಿರುವ ಪರಿಹಾರ ಸೂತ್ರ ಹೀಗಿದೆ :

**ಬಹ್ವಾಗಮವಿರೋಧೇಷು ಬ್ರಾಹ್ಮಣೇಷು ವಿವಾದಿಷು ।**
**ಉಪೋಷ್ಯಾ ದ್ವಾದಶೀ ತತ್ರ ತ್ರಯೋದಶ್ಯಾಂ ತು ಪಾರಣಮ್ ॥**

''ಬಹುಶಾಸ್ತ್ರಗಳಲ್ಲಿ ವಿರೋಧ ಬಂದಾಗ ಬ್ರಾಹ್ಮಣರಲ್ಲಿ ಭಿನ್ನಾಭಿಪ್ರಾಯ ಉಂಟಾದಾಗ ದ್ವಾದಶಿಯಂದು ಉಪವಾಸವನ್ನು ಆಚರಿಸಿ ತ್ರಯೋದಶಿಯಂದು ಪಾರಣೆ ಮಾಡಬೇಕು.'' (ವಿವರಗಳನ್ನು 'ಕೃಷ್ಣಾಮೃತಮಹಾರ್ಣವ' ವ್ಯಾಖ್ಯಾನ ಮತ್ತು ಅನುವಾದಗಳಲ್ಲಿ ನೋಡುವುದು.)

*****

# ಕಾಲಮಾನಾದಿ ವಿವರ
## ಕಾಲಮಾನ

| | |
|---|---|
| ೬೦ ವಿಪಳಗಳು - ೧ ಪಳ | ೨ ಮಾಸ - ೧ ಋತು |
| ೬೦ ಪಳಗಳು - ೧ ಘಟಿಕಾ | ೨ ಆಯನಗಳು - ೧ ಸಂವತ್ಸರ |
| ೬೦ ಘಟಿಕಾಗಳು - ೧ ದಿವಸ | ೧೨ ಮಾಸಗಳು - ೧ ಸಂವತ್ಸರ |
| ೨ ಘಟಿಕಾಗಳು - ೧ ಮುಹೂರ್ತ | ೧ ಸಂವತ್ಸರ - ದೇವತೆಗಳ ೧ ದಿನ |
| ೩೦ ಮುಹೂರ್ತಗಳು - ೧ ದಿವಸ | ದೇವತೆಗಳ ೧೨೦೦೦ ವರ್ಷಗಳು - ೧ ಮಹಾಯುಗ |
| ೧೫ ದಿವಸಗಳು - ೧ ಪಕ್ಷ | ೭೧ ಮಹಾಯುಗಗಳು - ೧ ಮನ್ವಂತರ |
| ೨ ಪಕ್ಷಗಳು - ೧ ಮಾಸ | ೧೪ ಮನ್ವಂತರಗಳು - ಬ್ರಹ್ಮದೇವರ ೧ ಹಗಲು |

| ಯುಗಗಳು | ಕೃತ | ತ್ರೇತಾ | ದ್ವಾಪರ | ಕಲಿ |
|---|---|---|---|---|
| ಕಾಲ (ಲಕ್ಷ ವರ್ಷಗಳು) | ೧೭.೨೮ | ೧೨.೯೬ | ೮.೬೪ | ೪.೩೨ |
| ಧರ್ಮ (ಪಾದ) | ೪ | ೩ | ೨ | ೧ |
| ಪ್ರಾಣಗಳು | ಅಸ್ಥಿಗತ | ಮಾಂಸಗತ | ರಕ್ತಗತ | ಅನ್ನಗತ |
| ಮನುಷ್ಯರ ಎತ್ತರ (ಮೊಳ) | ೨೮ | ೧೪ | ೭ | ೩.೫ |
| ಆಯುರ್ಮಾನ (ವರ್ಷಗಳು) | ೧ ಲಕ್ಷ | ೧೦ ಸಾವಿರ | ೧ ಸಹಸ್ರ | ೧೨೦ |
| ಧಾನ್ಯೋತ್ಪತ್ತಿ (೧ ವರ್ಷಕ್ಕೆ) | ೭ ಸಲ | ೫ ಸಲ | ೩ ಸಲ | ೨ ಸಲ |
| ಪಾತ್ರೆಗಳು | ಚಿನ್ನ | ಬೆಳ್ಳಿ | ತಾಮ್ರ | ಮಣ್ಣು |
| ವ್ಯಾಪಾರ | ರತ್ನಮಯ | ಸುವರ್ಣಮಯ | ಬೆಳ್ಳಿ | |
| ಪುಣ್ಯ | ೨೦ | ೧೫ | ೧೦ | ೫ |
| ಪಾಪ | ೦ | ೫ | ೧೦ | ೧೫ |



# ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ(ರಿ.)

Website : www.vyasamadhwa.org ph.no.26602802 E-mail: info@vyasamadhwa.org

## ಸಂಸ್ಥೆಯ ಪ್ರಮುಖ ಯೋಜನೆಗಳು

೧) ಪ್ರಾಚೀನ ಸಂಸ್ಕೃತ ಹಸ್ತಪ್ರತಿಗ್ರಂಥಗಳನ್ನು ಸಂಗ್ರಹಿಸಿ, ವ್ಯವಸ್ಥಿತವಾಗಿ ಸಂರಕ್ಷಿಸುವುದು; ಈಗಾಗಲೇ ೨೦೦೦ಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಸಂಗ್ರಹಿಸಿ, ತನ್ನ 'ಶ್ರೀಜಯತೀರ್ಥ ಸಂಸ್ಕೃತ ಹಸ್ತಲಿಖಿತ ಗ್ರಂಥಾಲಯ'ದಲ್ಲಿ ಸಂರಕ್ಷಿಸುತ್ತಿದೆ.

೨) ಶ್ರೀವ್ಯಾಸಮಧ್ವರ ಕೃತಿಗಳ ಅನುವಾದ ಹಾಗೂ ವಿವರಣೆಗಳನ್ನೊಳಗೊಂಡ ಕೃತಿಗಳನ್ನು, ಹರಿದಾಸ-ಸಾಹಿತ್ಯವನ್ನು ಪ್ರಕಾಶನಪಡಿಸುವುದು (ಐತರೇಯಪ್ರಕಾಶನ); ಈಗಾಗಲೇ ೩೦೦೦೦ ಪುಟಗಳಿಗೂ ಮೀರಿದ ಸಾಹಿತ್ಯವನ್ನು ಸಂಸ್ಕೃತ, ಕನ್ನಡ, ಆಂಗ್ಲ ಹಾಗೂ ತೆಲುಗು ಭಾಷೆಗಳಲ್ಲಿ ಪ್ರಕಾಶನ ಪಡಿಸಲಾಗಿದೆ.

೩) 'ಶ್ರೀರಾಘವೇಂದ್ರ ವೇದಾಂತಪಾಠಶಾಲಾ' ಎಂಬ ಸಂಸ್ಥೆಯನ್ನೂ ಪ್ರಾರಂಭಿಸಿ, ಪ್ರತಿನಿತ್ಯ ಸರ್ವಮೂಲ-ಗ್ರಂಥಗಳ ಪಾಠ-ಪ್ರವಚನ, ಸ್ತೋತ್ರಪಾಠ ಇತ್ಯಾದಿಗಳನ್ನು ಅನೇಕ ವರ್ಷಗಳಿಂದ ನಿರಂತರ ನಡೆಸುತ್ತಾ ಬಂದಿದೆ.

೪) 'ಶ್ರೀವ್ಯಾಸಮಧ್ವಸೇವಾಪುರಸ್ಕಾರ ಯೋಜನೆ': ಶ್ರೀವ್ಯಾಸಮಧ್ವರ ಸೇವೆ ಸಲ್ಲಿಸಿದ ವೃದ್ಧ ವಿದ್ವಾಂಸರಿಗೆ ಪ್ರತಿತಿಂಗಳು ಮಾಸಿಕ ಗೌರವಧನವನ್ನು ಆಜೀವ ಸಲ್ಲಿಸುವುದು; ಪ್ರಕೃತ ೨೬ ವಿದ್ವಾಂಸರಿಗೆ ರೂ. ೧೦೦೦/-ಗಳನ್ನು ಸಲ್ಲಿಸುತ್ತಿದೆ.

೫) ಶ್ರೀವ್ಯಾಸಮಧ್ವರ ಕೃತಿಗಳನ್ನು ಅಧ್ಯಯನ ಮಾಡುತ್ತ, ಲೌಕಿಕ ವಿದ್ಯೆಯ ವ್ಯಾಸಂಗ ಮಾಡುತ್ತಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆರ್ಥಿಕಸಹಾಯ ನೀಡುವುದು.

೬) ಪ್ರತಿವರ್ಷ ಒಬ್ಬಶ್ರೇಷ್ಠ ಹಿರಿಯ ವಿದ್ವಾಂಸರಿಗೆ ರೂ. ೧೨,೦೦೦/- ಗಳ 'ಶ್ರೀವ್ಯಾಸಮಧ್ವಸೇವಾಪ್ರಶಸ್ತಿ'.

೭) ಮಹಾಭಾರತತಾತ್ಪರ್ಯನಿರ್ಣಯವನ್ನು ಪೂರ್ಣಕಂಠಪಾಠ ಒಪ್ಪಿಸುವ ವಿದ್ಯಾರ್ಥಿಗೆ ರೂ.೨೫,೦೦೦/- ಪ್ರಶಸ್ತಿ, ಸುಮಧ್ವವಿಜಯವನ್ನು ಒಪ್ಪಿಸುವ ವಿದ್ಯಾರ್ಥಿಗೆ 'ಶ್ರೀಮಧ್ವಪ್ರಿಯ' ಪ್ರಶಸ್ತಿ, ಹಾಗೂ ಹರಿಕಥಾಮೃತಸಾರವನ್ನು ಒಪ್ಪಿಸುವ ವಿದ್ಯಾರ್ಥಿನಿಗೆ 'ದಾಸಪ್ರಿಯ' ಪ್ರಶಸ್ತಿಪ್ರದಾನ.

೮) ಶ್ರೀವ್ಯಾಸಮಧ್ವರನ್ನು ಹಾಗೂ ಅವರ ಕೃತಿಗಳನ್ನು ಕುರಿತ ಸಂಶೋಧನಕೃತಿಗಳ ಪ್ರಕಾಶನಕ್ಕೆ ಆರ್ಥಿಕ ಸಹಾಯ.

೯) ಯುವಜನತೆಯಲ್ಲಿ ತಾತ್ತ್ವಿಕಜಾಗೃತಿಯನ್ನು ಉಂಟು ಮಾಡಲು ಕಾಲಕಾಲಕ್ಕೆ ಶ್ರೀವ್ಯಾಸಮಧ್ವರ ತತ್ತ್ವಗಳ ಬಗ್ಗೆ ಕಾರ್ಯಾಗಾರಗಳನ್ನು, ವಿಚಾರಸಂಕಿರಣಗಳನ್ನು ಮತ್ತು ವಿದ್ವದ್ಗೋಷ್ಠಿಗಳನ್ನು ಏರ್ಪಡಿಸುವುದು.

ಅಪಾರವೆಚ್ಚದ ಈ ಎಲ್ಲ ಯೋಜನೆಗಳಿಗಾಗಿ ಪ್ರತಿಷ್ಠಾನವು ಯಾವುದೇ ರೀತಿಯ ದೇಣಿಗೆಯನ್ನು ಆಸ್ತಿಕಜನತೆಯಿಂದ ಸ್ವಾಗತಿಸುತ್ತದೆ. ರೂ.೧೫,೦೦೦/- ಹಾಗೂ ಅದಕ್ಕಿಂತ ಹೆಚ್ಚಿನ ಮೊತ್ತದ ದೇಣಿಗೆಯನ್ನು ನೀಡುವವರಿಗೆ ಮಹಾಭಾರತತಾತ್ಪರ್ಯನಿರ್ಣಯ ಹಾಗೂ ಹರಿಕಥಾಮೃತಸಾರಗಳ ಅನುವಾದಗಳು ಸೇರಿದಂತೆ ಪ್ರತಿಷ್ಠಾನದ ಪ್ರಕಾಶನದಲ್ಲಿ ಲಭ್ಯವಿರುವ ಎಲ್ಲಾ ಗ್ರಂಥಗಳನ್ನು ಉಚಿತವಾಗಿ ನೀಡಲಾಗುವುದು.

**ವಿಶೇಷ ಸೂಚನೆ :**

೧) ಪ್ರತಿಷ್ಠಾನಕ್ಕೆ ನೀಡುವ ಎಲ್ಲಾ ಬಗೆಯ ದೇಣಿಗೆಗಳಿಗೂ ಆದಾಯತೆರಿಗೆ ನಿಯಮ ೮೦ಜಿ ಅನ್ವಯ ಆದಾಯತೆರಿಗೆ ವಿನಾಯಿತಿ ಸೌಲಭ್ಯ ಉಂಟು.

೨) ದೇಣಿಗೆಗಳನ್ನು ''ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ(ರಿ.)'', ಬೆಂಗಳೂರು - ಈ ಹೆಸರಿಗೆ ನಗದು/ಚೆಕ್/ಡ್ರಾಫ್ಟ್ ಮೂಲಕ ಸಲ್ಲಿಸಿ ಅಧಿಕೃತ ರಶೀತಿಯನ್ನು ಪಡೆಯತಕ್ಕದ್ದು.